ಹುಲಿಗೆಮ್ಮ ದೇವಿ ದರ್ಶನಕ್ಕೆ ಭಕ್ತ ಸಾಗರ

ಪ್ರಜಾವಾಣಿ ವಾರ್ತೆ

ಮುನಿರಾಬಾದ್ (ಕೊಪ್ಪಳ): ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ತಾಣ ಹುಲಿಗಿಯಲ್ಲಿ ಭರತ ಹುಣ್ಣಿಮೆ ಅಂಗವಾಗಿ ಭಾನುವಾರ ಲಕ್ಷಾಂತರ ಭಕ್ತರು ಹುಲಿಗೆಮ್ಮ ದೇವಿಯ ದರ್ಶನ ಪಡೆದರು. ಇದರ ನಡುವೆಯೇ ಹಲವರು ತುಂಗಭದ್ರಾ ನದಿಯಲ್ಲಿಯೇ ಪ್ರಾಣಿ ಬಲಿ ಮಾಡಿದ್ದು ಸಾರ್ವಜನಿಕವಾಗಿ ಟೀಕೆಗೆ ಕಾರಣವಾಗಿದೆ.

ದೇವಿ ದರ್ಶನ ಪಡೆಯಲು ರಾಜ್ಯ ಹಾಗೂ ಹೊರರಾಜ್ಯಗಳಿಂದ ಭಕ್ತರು ಬಂದಿದ್ದರು. ಅನೇಕರು ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಿ ನೈವೇದ್ಯ ಸಲ್ಲಿಸಿದರು. ಮಾಂಸಹಾರಿಗಳು ಕುರಿ, ಕೋಳಿ ತಂದು ಅಡುಗೆ ಸಿದ್ಧಪಡಿಸಿದರು.

ಕೆಲ ಭಕ್ತರು ಬಯಲು ಜಾಗದಲ್ಲಿ, ದೂರದ ಹೊಲದಲ್ಲಿ ಟೆಂಟ್ ಹಾಕಿ ಕುರಿ, ಕೋಳಿ ಬಲಿ ನೀಡಿದರೆ, ಇನ್ನು ಕೆಲವರು ತುಂಗಭದ್ರಾ ನದಿ ಮಧ್ಯದಲ್ಲಿ ಸ್ನಾನಕ್ಕೆ ಬಂದ ಭಕ್ತರ ಸಮ್ಮುಖದಲ್ಲಿ ಕುರಿ ಕಡಿದು ರಕ್ತ ಹರಿಸಿದರು. ಇದಕ್ಕೆ ಕೆಲ ಭಕ್ತರು ಆಕ್ಷೇಪ ವ್ಯಕ್ತಪಡಿಸಿದರೂ ಕೇಳಲಿಲ್ಲ. ನಿಷೇಧವಿದ್ದರೂ ಪ್ರಾಣಿಬಲಿ ಬಿಡಲಿಲ್ಲ.

ಒಂದು ಕಡೆ ನದಿಯಲ್ಲಿ ಪ್ರಾಣಿಯ ರಕ್ತ ಹರಿದು ಹೋಗುತ್ತಿದ್ದರೆ, ಇನ್ನೊಂದು ಕಡೆ ಭಕ್ತರು ಅದೇ ನೀರಿನಲ್ಲಿ ಪುಣ್ಯ ಸ್ನಾನ ಮಾಡುತ್ತಿದ್ದ ಚಿತ್ರಣ ಕಂಡು ಬಂತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಹುಲಿಗೆಮ್ಮ ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, 'ದೇವಸ್ಥಾನದ ಆವರಣ ಹಾಗೂ ಸುತ್ತಲಿನ ಪ್ರದೇಶದಲ್ಲಿ ಪ್ರಾಣಿ ಬಲಿ ನಿಷೇಧಿಸಲಾಗಿದೆ. ಈ ಕುರಿತು ನಿಗಾ ವಹಿಸಲು ಗೃಹರಕ್ಷಕ ದಳ ಸಿಬ್ಬಂದಿ ಮತ್ತು ಪೊಲೀಸರನ್ನು ನಿಯೋಜಿಸಲಾಗಿತ್ತು. ಭದ್ರತಾ ಸಿಬ್ಬಂದಿ ಕಣ್ತಪ್ಪಿಸಿ ನದಿಯಲ್ಲಿ ಪ್ರಾಣಿ ಬಲಿ ನೀಡಿರುವ ಘಟನೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.



ಕೊಪ್ಪಳ ಜಿಲ್ಲೆಯ ಹುಲಿಗಿಯಲ್ಲಿ ಭಾನುವಾರ ತುಂಗಭದ್ರಾ ನದಿ ಬಳಿ ಸ್ನಾನ ಮಾಡಲು ಸೇರಿದ್ದ ಭಕ್ತರು —ಪ್ರಜಾವಾಣಿ ಚಿತ್ರ



ಹರಿಹರದ ದಕ್ಷಿಣ ಕಾಶಿ ಖ್ಯಾತಿಯ ಶ್ರೀಹರಿಹರೇಶ್ವರ ಸ್ವಾಮಿ ರಥೋತ್ಸವ ಭಾನುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ನೆರವೇರಿತು

ಸಂಭ್ರಮದ ಎಲ್ಲಮ್ಮ ಮುತ್ತಿನ ಪಲ್ಲಕ್ಕಿ ಉತ್ಸವ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಚಿಕ್ಕಸವದತ್ತಿ ಎಂದೇ ಪ್ರಸಿದ್ಧಿ ಪಡೆದಿರುವ ಪಟ್ಟಣದ ರೇಣುಕಾ ಎಲ್ಲಮ್ಮ ದೇವಿಯ 24ನೇ ಮಹಾಚಂಡಿಹೋಮ, 51ನೇ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಸಡಗರ, ಸಂಭ್ರಮದಿಂದ ಮುತ್ತಿನ ಪಲ್ಲಕ್ಕಿ ಉತ್ಸವ ನೆರವೇರಿತು.

ರಾತ್ರಿ 8ಕ್ಕೆ ಹೊಳೆ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ, ದೇವಿಯ ಉತ್ಸವ ಮೂರ್ತಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಪುಷ್ಪಾಲಂಕಾರ, ದೀಪಾಲಂಕಾರದಿಂದ ಪಲ್ಲಕ್ಕಿ ಭಕ್ತರ ಮನಸೂರೆಗೊಂಡಿತು. ಹೊಳೆಬೀದಿ, ದೊಡ್ಡಿ ಬೀದಿ, ಮೇಲಗದೊಡ್ಡಿ ಬೀದಿ, ಗಂಗಾಮತಸ್ಥ ಬೀದಿ, ಪೇಟೆಬೀದಿ ಮೂಲಕ ಮೆರವಣಿಗೆ ಸಾಗಿತು.

ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ, ಕೇರಳದ ಚಂಡೆ ಮೇಳ, ತಮಿಳುನಾಡಿನ ಬ್ಯಾಂಡ್‌ಸೆಟ್, ಮದ್ದೂರಮ್ಮ ಪೂಜಾ ಕುಣಿತ, ಸ್ಥಳೀಯ ಕಲಾವಿದರ ತಮಟೆ, ನಗಾರಿ, ಸೊಲ್ಲು ಕುಣಿತ, ವೀರಗಾಸೆ, ಗಾರುಡಿ ಗೊಂಬೆ, ಜಾನಪದ ನೃತ್ಯಗಳು ಮೆರವಣಿಗೆಯಲ್ಲಿ ಗಮನಸೆಳೆದವು.

ಅಪಾರ ಭಕ್ತರ ಸಮ್ಮುಖದಲ್ಲಿ ಬೆಳಿಗ್ಗೆ 7.30ರಿಂದ ಮಹಾಚಂಡಿಕಾ ಹೋಮ ನಡೆಯಿತು. ನಂತರ ಪೂರ್ಣಾಹುತಿ, ಮಧ್ಯಾಹ್ನ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ಮಹಿಳೆಯರಿಂದ ತಂಬಿಟ್ಟಿನ ಆರತಿ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಭಾನುವಾರ ರಾತ್ರಿಯಿಡೀ ಪಟ್ಟಣದ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸಲಾಯಿತು. ರೇಣುಕಾ ಎಲ್ಲಮ್ಮ ದೇವಿಯ ಉತ್ಸವ ಮೂರ್ತಿಯು ಸೋಮವಾರ ಬೆಳಿಗ್ಗೆ ದೇಗುಲಕ್ಕೆ ಹಿಂದಿರುಗಲಿದೆ. ವಿಶೇಷ ಕ್ಷೀರಾಭಿಷೇಕ, ತೀರ್ಥಪ್ರಸಾದ ವಿನಿಯೋಗದೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.



ಮದ್ದೂರು ಪಟ್ಟಣದ ರೇಣುಕಾ ಎಲ್ಲಮ್ಮದೇವಿ ಮುತ್ತಿನ ಪಲ್ಲಕ್ಕಿ ಉತ್ಸವ ನಡೆಯಿತು

ಸುದ್ದಿ 2 ನಿಮಿಷ

ಲೋಕಾಯುಕ್ತ ಬಲೆಗೆ ವಿಶೇಷ ಸರ್ಕಾರಿ ಅಭಿಯೋಜಕಿ

ದಾವಣಗೆರೆ: ಪೋಕ್ಸೊ ಪ್ರಕರಣದ ಆರೋಪಿಗೆ ಸಹಾಯ ಮಾಡುವ ವಾಗ್ದಾನ ನೀಡಿ, ಪ್ರತಿಯಾಗಿ ಲಂಚ ಪಡೆಯುತ್ತಿದ್ದ ಪೋಕ್ಸೊ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕಿ ರೇಖಾ ಕೋಟೆಗೌಡರ್ ಭಾನುವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ತಾಲ್ಲೂಕಿನ ಕಿತ್ತೂರು ಗ್ರಾಮದ ಜಿ.ಟಿ. ಮದನ ಕುಮಾರ್ ವಿರುದ್ಧ 2021ರ ಜೂನ್ ನಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ರೇಖಾ ಅವರು ಒಟ್ಟು ₹ 3 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿ, ಮುಂಗಡವಾಗಿ ₹ 1.13 ಲಕ್ಷ ಪಡೆದಿದ್ದರು. ಉಳಿದ ₹ 1.87 ಲಕ್ಷ ಹಣ ನೀಡುವಂತೆ ದುಂಬಾಲು ಬಿದ್ದಿದ್ದರಲ್ಲದೆ, ಖಾತರಿಗಾಗಿ ಸಹಿ ಮಾಡಿದ ಖಾಲಿ ಚೆಕ್ ಪಡೆದಿದ್ದರು.

ರೇಖಾ ಅವರು ದಾವಣಗೆರೆಯ ತಮ್ಮ ನಿವಾಸದಲ್ಲಿ ₹ 1.87 ಲಕ್ಷ ಹಾಗೂ ಖಾತ್ರಿಗೋಸ್ಕರ ಪಡೆದ ಚೆಕ್ ಅನ್ನು ವಾಪಸ್ ನೀಡುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು, ಹಣದೊಂದಿಗೆ ವಶಕ್ಕೆ ಪಡೆದಿದ್ದಾರೆ.

ದಾವಣಗೆರೆ ಲೋಕಾಯುಕ್ತ ಘಟಕದ ಎಸ್‌ಪಿ ಎಂ.ಎಸ್. ಕೌಲಾಪುರೆ, ಪೊಲೀಸ್ ಇನ್‌ಸ್ಪೆಕ್ಟರ್ ಆಂಜನೇಯ ಎನ್.ಎಚ್, ರಾಷ್ಟ್ರಪತಿ ಎಚ್.ಎಸ್. ನೇತೃತ್ವದಲ್ಲಿ ದಾಳಿ ನಡೆದಿತ್ತು.



ಕಾಡಾನೆ ದಾಳಿ: ಕಾರ್ಮಿಕ ಸಾವು

ಶನಿವಾರಸಂತೆ (ಕೊಡಗು ಜಿಲ್ಲೆ): ಸಮೀಪದ ಶಾಂತಪುರದ ಹೇಮಾವತಿ ಹಿನ್ನೀರಿನ ಬಳಿ ಆನೆ ದಾಳಿಗೆ ಕೃಷಿ ಕಾರ್ಮಿಕ ಕುಮಾರ (40) ಭಾನುವಾರ ಮೃತಪಟ್ಟಿದ್ದಾರೆ.


'ಹೇಮಾವತಿ ಅಣೆಕಟ್ಟೆಯ ಹಿನ್ನೀರಿನ ಖಾಲಿ ಪ್ರದೇಶದಲ್ಲಿ ಭತ್ತ ನಾಟಿ ಮಾಡುತ್ತಿದ್ದ ಕುಮಾರ ಹಾಗೂ ದೊಡ್ಡಯ್ಯ ಅವರ ಮೇಲೆ ಕರಿಕಡ್ಡಿ ಕಾಡಿನಿಂದ ಬಂದ ಆನೆ ದಾಳಿ ನಡೆಸಿದೆ. ದೊಡ್ಡಯ್ಯ ಓಡಿ ಹೋದರೆ, ಕುಮಾರ ಆನೆ ದಾಳಿಗೆ ಸಿಲುಕಿ ಮೃತಪಟ್ಟರು' ಎಂದು ಪೊಲೀಸರು ತಿಳಿಸಿದ್ದಾರೆ.

ಹೇಮಾವತಿ ಅಣೆಕಟ್ಟೆಯಲ್ಲಿ ನೀರು ಕಡಿಮೆ ಆಗುತ್ತಿದ್ದಂತೆ, ಹಿನ್ನೀರಿನಲ್ಲಿ ಕೃಷಿ ಚಟುವಟಿಕೆಗಳನ್ನು ರೈತರು ಆರಂಭಿಸುತ್ತಾರೆ.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3DJaA8p

ನಿಧನ ವಾರ್ತೆ

ರಾಮಚಂದ್ರ ಶಾನುಭಾಗ್



ಉಡುಪಿ: ಶಿರಿಯಾರದ ಯಕ್ಷಗಾನ ಕಲಾವಿದ ಜಂಬೂರು ರಾಮಚಂದ್ರ ಶಾನುಭಾಗ್ (84) ಭಾನುವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಒಬ್ಬರು ಪುತ್ರಿ ಇದ್ದಾರೆ. ಮಂದಾರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಇಡಗುಂಜಿ, ಪೆರ್ಡೂರು, ಹಾಲಾಡಿ, ಗುಂಡುಬಾಳ, ಕಮಲಶಿಲೆ ಮೇಳದಲ್ಲಿ ಐದೂವರೆ ದಶಕಗಳ ಕಾಲ ಕಲಾಸೇವೆ ಮಾಡಿದ್ದರು. ಉಡುಪಿಯ ಯಕ್ಷಗಾನ ಕಲಾರಂಗ ಸೇರಿದಂತೆ ಹಲವು ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ.

ಹಾವೇರಿ: ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಅವ್ಯವಹಾರ

'ಸ್ಕಾಲರ್‌ಷಿಪ್‌ಗೆ ಕನ್ನ' ಪ್ರಕರಣ: ತನಿಖೆಗೆ ಹಿನ್ನಡೆ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ತಾಲ್ಲೂಕಿನ ದೇವಗಿರಿ ಸಮೀಪದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ 2019ರಿಂದ ಇಲ್ಲಿಯವರೆಗೆ 'ಅಕೌಂಟೆಂಟ್ ಜನರಲ್ ಆಡಿಟ್' ನಡೆಯದ ಕಾರಣ 'ಸ್ಕಾಲರ್‌ಷಿಪ್‌ಗೆ ಕನ್ನ' ಪ್ರಕರಣದ ತನಿಖೆಗೆ ಹಿನ್ನಡೆಯಾಗಿದೆ.

'ವಿದ್ಯಾಸಿರಿ' ವಿದ್ಯಾರ್ಥಿವೇತನ ಮತ್ತು ಶೈಕ್ಷಣಿಕ ವಿದ್ಯಾಭ್ಯಾಸ ಸಾಲದಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿರುವುದು 2022ರ ಜೂನ್‌ನಲ್ಲಿ ಬೆಳಕಿಗೆ ಬಂದಿತ್ತು. ನಂತರ ಕಾಲೇಜಿನ ಆಂತರಿಕ ತನಿಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತನಿಖೆ ಆಧರಿಸಿ, ಇಬ್ಬರು ಅಧೀಕ್ಷಕರು ಸೇರಿ ಐವರು ನೌಕರರನ್ನು ಅಮಾನತು ಮಾಡಲಾಗಿದೆ. ಅಷ್ಟೇ ಅಲ್ಲ, ನಿವೃತ್ತ ಪ್ರಾಂಶುಪಾಲ ಸೇರಿ 6 ನೌಕರರ ವಿರುದ್ಧ ಪ್ರಕರಣ ದಾಖಲಾಗಿದೆ.

ಷೋಕಾಸ್ ನೋಟಿಸ್: ಹಾವೇರಿಯ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ನಂತರ, ಕಾಲೇಜಿನ ಅವ್ಯವಹಾರದ ತನಿಖೆ ಜೂನ್ ಕೊನೆ ವಾರದಲ್ಲಿ ಆರಂಭಗೊಂಡಿತು. 2007ರಿಂದ 2022ರವರೆಗಿನ ಕಾಲೇಜಿನ ದಾಖಲೆಗಳನ್ನು ತನಿಖಾ ತಂಡ ಪರಿಶೀಲನೆ ನಡೆಸಿತು. ತಾಂತ್ರಿಕ ಶಿಕ್ಷಣ ಇಲಾಖೆಯ ತನಿಖಾ ವರದಿ ಆಧರಿಸಿ, ಆರೋಪಿಗಳಿಗೆ ಷೋಕಾಸ್ ನೋಟಿಸ್ ನೀಡಿ, ಉತ್ತರವನ್ನೂ ಪಡೆಯಲಾಗಿದೆ.

ಲೆಕ್ಕಪರಿಶೋಧನೆಗೆ ಶಿಫಾರಸು: 'ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ಮತ್ತು ನಡೆದಿರುವ ಅವ್ಯವಹಾರದ ಮೊತ್ತವನ್ನು ಲೆಕ್ಕ ಹಾಕುವುದು ಆಂತರಿಕ ತನಿಖಾ ತಂಡದ ವ್ಯಾಪ್ತಿಯನ್ನು ಮೀರಿದ್ದು ಪೊಲೀಸ್ ತನಿಖೆಯನ್ನೊಳಗೊಂಡಂತೆ 'ವಿಶೇಷ ಲೆಕ್ಕ ಪರಿಶೋಧನೆ'ಯನ್ನು ಸರ್ಕಾರದಿಂದ ಕೈಗೊಳ್ಳುವುದು ಸೂಕ್ತ' ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ತನಿಖಾ ತಂಡ ಶಿಫಾರಸು ಮಾಡಿದೆ.

ಚಾರ್ಜ್‌ಶೀಟ್ ವಿಳಂಬ: 'ಅವ್ಯವಹಾರದ 6 ಆರೋಪಿಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಶೇ 50ರಷ್ಟು ದಾಖಲೆಗಳು ಮಾತ್ರ ಕಾಲೇಜಿನಲ್ಲಿ ಲಭ್ಯವಾಗಿದ್ದು, ಕೆಲವು ದಾಖಲೆಗಳು ಸಿಕ್ಕಿಲ್ಲ. ಪ್ರತಿ ವರ್ಷ ಆಡಿಟ್ ನಡೆದಿಲ್ಲ. 'ಅಕೌಂಟೆಂಟ್ ಜನರಲ್ ಆಡಿಟ್' ನಡೆದರೆ, ನ್ಯಾಯಾಲಯಕ್ಕೆ ಎರಡು ತಿಂಗಳೊಳಗೆ ದೋಷಾರೋಪಣ ಪಟ್ಟಿ ಸಲ್ಲಿಸಬಹುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಆಡಿಟ್ ನಡೆಸಲು ಮೀನಮೇಷ

'ಅಕೌಂಟೆಂಟ್ ಜನರಲ್ ಆಡಿಟ್' ವರದಿಯನ್ನು ಸೈಬರ್ ಕ್ರೈಂ ಪೊಲೀಸ್ ತನಿಖಾ ತಂಡ ಕೇಳುತ್ತಿರುವ ಕಾರಣ, ಕೂಡಲೇ ವಿಶೇಷ ಲೆಕ್ಕ ಪರಿಶೋಧನೆ ನಡೆಸಬೇಕು ಎಂದು ಕೋರಿ ಮಹಾಲೇಖಪಾಲಕರಿಗೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗೆ ಕಾಲೇಜು ಪ್ರಾಂಶುಪಾಲರು 2022ರ ಜುಲೈನಿಂದ 2023ರ ಜನವರಿವರೆಗೆ ಹಲವು ಬಾರಿ ಪತ್ರ ಬರೆದಿದ್ದಾರೆ. 'ತುರ್ತಾಗಿ ಕಾಲೇಜಿನ ಲೆಕ್ಕ ತಪಾಸಣೆ ಮಾಡಿ ವರದಿ ನೀಡಿ' ಎಂದು ಮನವಿ ಮಾಡಿದ್ದಾರೆ. ಆದರೆ ಇದುವರೆಗೂ ಪ್ರತ್ಯುತ್ತರ ಬಂದಿಲ್ಲ.

ಕಾಲೇಜಿನಲ್ಲಿ ಲಭ್ಯವಿರುವ ಎಲ್ಲ ದಾಖಲೆಗಳನ್ನು ಪೊಲೀಸ್ ತನಿಖಾ ತಂಡಕ್ಕೆ ನೀಡಿದ್ದೇವೆ. ಆಡಿಟ್ ನಡೆಸಲು ಇಲಾಖೆಗೆ ಪತ್ರ ಬರೆಯಲಾಗಿದೆ

ಡಾ.ಜಗದೀಶ ಕೋರಿ, ಪ್ರಾಂಶುಪಾಲ

ಸ್ಪರ್ಧಾತ್ಮಕತೆಗೆ ಖಾಸಗಿ ಎಸ್ಕಾಂಗಳು ಅಗತ್ಯ: ಕೇಂದ್ರ ಸಚಿವ ಆರ್‌.ಕೆ. ಸಿಂಗ್

ಬೆಂಗಳೂರು: 'ವಿದ್ಯುತ್ ಸರಬರಾಜಿನಲ್ಲಿ ಸ್ಪರ್ಧಾತ್ಮಕತೆ ತರಲು ಖಾಸಗಿ ಎಸ್ಕಾಂಗಳಿಗೆ ಪರವಾನಗಿ ನೀಡಲು ಸರ್ಕಾರದ ಯತ್ನ ಮುಂದುವರಿಯಲಿದೆ' ಎಂದು ಕೇಂದ್ರ ಇಂಧನ ಸಚಿವ ಆರ್.ಕೆ.ಸಿಂಗ್ ಭಾನುವಾರ ಹೇಳಿದರು.

ಜಿ-20 ರಾಷ್ಟ್ರಗಳ ಇಂಧನ ಪರಿವರ್ತನಾ ಗುಂಪಿನ ಸಭೆಯ ಉದ್ಘಾಟನೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಗ ಇರುವ ಎಸ್ಕಾಂಗಳನ್ನು ಖಾಸಗೀಕರಣ ಮಾಡುವುದಿಲ್ಲ. ಅವು ಈಗಿನ ಸ್ವರೂಪದಲ್ಲೇ ಮುಂದುವರಿಯುತ್ತವೆ. ಆದರೆ, ಅವು ಖಾಸಗಿ ಎಸ್ಕಾಂಗಳ ಜತೆ ಸ್ಪರ್ಧೆ ಮಾಡಬೇಕಾಗುತ್ತದೆ' ಎಂದರು.

'ಖಾಸಗಿ ಎಸ್ಕಾಂಗಳಿಗೆ ಅನುಮತಿ ನೀಡುವುದರಿಂದ ಗ್ರಾಹಕರಿಗೆ ಹೆಚ್ಚಿನ ಆಯ್ಕೆಗಳಿರುತ್ತವೆ. ಒಂದು ಕಂಪನಿ ಸರಿಯಾಗಿ ಸೇವೆ ನೀಡದಿದ್ದರೆ ಮತ್ತೊಂದು ಆಯ್ಕೆ ಮಾಡಿಕೊಳ್ಳಬಹುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಒಂದು ಪ್ರದೇಶದಲ್ಲಿ ಹಲವು ವಿದ್ಯುತ್ ಸರಬರಾಜು ಕಂಪನಿಗಳು ಸೇವೆ ಒದಗಿಸಲು ಅವಕಾಶ ಕಲ್ಪಿಸುವ ಅಂಶ 2003ರ ವಿದ್ಯುತ್ ಕಾಯ್ದೆಯಲ್ಲೇ ಇದೆ. ಮುಂಬೈ ನಗರದಲ್ಲಿ ಅಂತಹ ಹಲವು ಕಂಪನಿಗಳಿಗೆ ಪರವಾನಗಿ ನೀಡಲಾಗಿದೆ. ಆದರೆ, ಒಂದು ತಾಂತ್ರಿಕ ತೊಡಕಿನ ಕಾರಣದಿಂದ ಅದು ಅನುಷ್ಠಾನಕ್ಕೆ ಬಂದಿಲ್ಲ. ಕಾಯ್ದೆಯಲ್ಲಿನ ಒಂದು ಸೆಕ್ಷನ್ ಅದಕ್ಕೆ ಅಡ್ಡಿಯಾಗಿದೆ. ತಿದ್ದುಪಡಿ ಮೂಲಕ ಅದನ್ನು ಕೈಬಿಡಲು ನಿರ್ಧರಿಸಿದ್ದೇವೆ' ಎಂದರು.

ಅಡುಗೆಗೂ ವಿದ್ಯುತ್ ಬಳಕೆ: ಗ್ರಾಮೀಣ ಪ್ರದೇಶಗಳಲ್ಲಿ ಅಡುಗೆಗೆ ಎಲ್‌ಪಿಜಿ ಸಂಪರ್ಕ ಒದಗಿಸಿರುವುದು ತಾತ್ಕಾಲಿಕ ಕ್ರಮ. ಇಂಧನ ಪರಿವರ್ತನೆ ಭಾಗವಾಗಿ ಅಡುಗೆಗೂ ವಿದ್ಯುತ್ ಬಳಕೆ ಮಾಡುವುದು ಅಗತ್ಯ ಎಂದು ಸಿಂಗ್ ಹೇಳಿದರು.

'ಉಜ್ವಲ ಯೋಜನೆಯಡಿ ಎಲ್‌ಪಿಜಿ ಸಂಪರ್ಕ ಕಲ್ಪಿಸಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಎಲ್‌ಪಿಜಿ ಬಳಕೆ ಒಂದು ಮಧ್ಯಂತರ ಪರಿಹಾರ ಕ್ರಮ. ಹಸಿರು ಇಂಧನ ಬಳಕೆ ಹೆಚ್ಚಳಕ್ಕಾಗಿ ಅಡುಗೆಗೂ ವಿದ್ಯುತ್ ಬಳಕೆ ಮಾಡಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಕನಸು' ಎಂದರು.

ಆರೋಗ್ಯ ಇಲಾಖೆ: ಗುತ್ತಿಗೆ ನೌಕರರ ಮುಷ್ಕರ ಇಂದಿನಿಂದ

ಬೆಂಗಳೂರು: ಸಮಾನ ವೇತನ, ಸೇವಾ ಭದ್ರತೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರು ಸೋಮವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ಈ ಇಲಾಖೆಗಳಡಿ 30 ಸಾವಿರಕ್ಕೂ ಅಧಿಕ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರಿದ್ದಾರೆ. ಸೇವೆ ಕಾಯಂಮಾತಿ, ಸಮಾನ ವೇತನ, ಹೊರಗುತ್ತಿಗೆ ನೌಕರರಿಗೆ ಸರ್ಕಾರದಿಂದ ನೇರ ಪಾವತಿ, ಸಾಮಾಜಿಕ ಭದ್ರತೆ ಯೋಜನೆಗಳ ಜಾರಿ, ಕೃಪಾಂಕ ಶೇ 30ಕ್ಕೆ ಹೆಚ್ಚಳ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿದ್ದಾರೆ.

'ಅನಿರ್ದಿಷ್ಟಾವಧಿ ಮುಷ್ಕರದ ಅವಧಿಯಲ್ಲಿ ಆರೋಗ್ಯ ಸೇವೆಯಲ್ಲಿ ವ್ಯತ್ಯಯವಾದರೆ ಸರ್ಕಾರವೇ ನೇರ ಹೊಣೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್.ವೈ. ವಿಶ್ವಾರಾಧ್ಯ ಎಚ್ಚರಿಸಿದ್ದಾರೆ.

ಇಂದು ಎಚ್‌ಎಎಲ್ ಘಟಕ ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ

ಗುಬ್ಬಿಯಿಂದ ಹಾರಲಿವೆ ವರ್ಷಕ್ಕೆ 30 ಹೆಲಿಕಾಪ್ಟರ್

ಪ್ರಜಾವಾಣಿ ವಾರ್ತೆ

ತುಮಕೂರು: ಗುಬ್ಬಿ ತಾಲ್ಲೂಕಿನ ಬಿದರೆಹಳ್ಳ ಕಾವಲ್‌ನಲ್ಲಿ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್‌ಎಎಲ್) ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಲಿದ್ದಾರೆ. ಈ ಘಟಕ ಆರಂಭದಲ್ಲಿ ವರ್ಷಕ್ಕೆ 30 ಹೆಲಿಕಾಪ್ಟರ್ ತಯಾರಿಸುವ ಗುರಿ ಹೊಂದಿದೆ.

ಈ ಘಟಕಕ್ಕೆ ಮೋದಿ 2016ರಲ್ಲಿ ಭೂಮಿಪೂಜೆ ನೆರವೇರಿಸಿದ್ದರು. 615 ಎಕರೆ ಜಮೀನಿನಲ್ಲಿ ಈ ಘಟಕ ತಲೆ ಎತ್ತಿದೆ.

ಎಚ್‌ಎಎಲ್ 3 ಟನ್‌ನಿಂದ 15 ಟನ್ ವರೆಗಿನ ಒಂದು ಸಾವಿರಕ್ಕೂ ಹೆಚ್ಚು ಹೆಲಿಕಾಪ್ಟರ್ ತಯಾರಿಸುವ ಯೋಜನೆ ರೂಪಿಸಿದೆ. ಮೊದಲ ಹಂತದಲ್ಲಿ ₹5 ಸಾವಿರ ಕೋಟಿ ಬಂಡವಾಳ ಹೂಡಿಕೆಯೊಂದಿಗೆ ಈ ಘಟಕ ಶುರುವಾಗುತ್ತಿದೆ. ಹೆಲಿಕಾಪ್ಟರ್ ನಿರ್ಮಾಣ, ಜೋಡಣೆ, ಹೆಲಿಪ್ಯಾಡ್, ಆಡಳಿತ ಕಟ್ಟಡ ಇಲ್ಲಿದೆ.

ಹೆಲಿಕಾಪ್ಟರ್ ಘಟಕದ ಉದ್ಘಾಟನೆ ಬಳಿಕ ಜಲಜೀವನ್ ಮಿಷನ್ ಯೋಜನೆಯಡಿ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ನೀರು ಪೂರೈಸುವ ಯೋಜನೆಗಳ ಕಾಮಗಾರಿಗಳಿಗೆ ಇಲ್ಲಿಂದಲೇ ಭೂಮಿಪೂಜೆ ನೆರವೇರಿಸಲಿದ್ದಾರೆ. ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಪ್ರಧಾನಿ ಬರಲಿದ್ದು, ಒಂದು ತಾಸಿನಲ್ಲಿ ಸಮಾರಂಭ ಕೊನೆಗೊಳ್ಳಲಿದೆ. ಮಧ್ಯಾಹ್ನ 1 ಗಂಟೆಯಿಂದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಸಾರ್ವಜನಿಕರನ್ನು ಬಿಡಲಾಗುತ್ತದೆ.



ಬಿದರೆಹಳ್ಳ ಕಾವಲ್ ಬಳಿ ನಿರ್ಮಾಣಗೊಂಡಿರುವ ಎಚ್‌ಎಎಲ್ ಹೆಲಿಕಾಪ್ಟರ್ ಘಟಕದ ಹೊರ ನೋಟ

ಪೊಲೀಸರಿಗೆ ಊಟ, ನೀರು ಪೂರೈಕೆಯಲ್ಲಿ ಸ್ವಲ್ಪ ಹೆಚ್ಚು ಕಮ್ಮಿ ಆಗಿತ್ತು. ಪರಿಶೀಲಿಸಲಾಗಿದೆ. ಈಗ ಎಲ್ಲರಿಗೂ ವ್ಯವಸ್ಥೆ ಮಾಡಿದ್ದೇವೆ

ಆರಗ ಜ್ಞಾನೇಂದ್ರ, ಗೃಹ ಸಚಿವ

ಊಟ, ನೀರಿಗಾಗಿ ಪರದಾಡಿದ ಪೊಲೀಸರು!

ತುಮಕೂರು: ಗುಬ್ಬಿ ತಾಲ್ಲೂಕಿನ ಬಿದರೆಹಳ್ಳ ಕಾವಲ್‌ನಲ್ಲಿ ಪ್ರಧಾನಿ ಕಾರ್ಯಕ್ರಮದ ಭದ್ರತೆಗೆ ನಿಯೋಜನೆಗೊಂಡಿರುವ ಪೊಲೀಸರು ಭಾನುವಾರ ಬೆಳಿಗ್ಗೆಯಿಂದ ತಿಂಡಿ, ಊಟ, ನೀರು ಸಿಗದೆ ಪರದಾಡಿದ್ದಾರೆ.

ಜಿಲ್ಲೆ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಎರಡು ಸಾವಿರ ಪೊಲೀಸರನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಎರಡು ದಿನಗಳಿಂದ ಬಿದರೆಹಳ್ಳ ಕಾವಲ್ ಬಳಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದರೆ, ಅವರಿಗೆ ಶನಿವಾರ ರಾತ್ರಿಯಿಂದ ಸರಿಯಾದ ಊಟದ ವ್ಯವಸ್ಥೆ ಮಾಡಿಲ್ಲ. 'ಆಯೋಜಕರು ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡಿಲ್ಲ. ಹಗಲೆಲ್ಲಾ ಬಿಸಿಲಿನಲ್ಲಿ ನಿಲ್ಲಬೇಕಾಗಿದೆ, ನೆರಳಿನ ವ್ಯವಸ್ಥೆಯೂ ಮಾಡಿಲ್ಲ. ಹತ್ತಿರದಲ್ಲಿ ಯಾವುದೇ ಹೋಟೆಲ್, ಅಂಗಡಿಗಳು ಇಲ್ಲ. ಮೂಲಸೌಲಭ್ಯ ಕಲ್ಪಿಸುವಲ್ಲಿ ಆಯೋಜಕರು ವಿಫಲವಾಗಿದ್ದಾರೆ' ಎಂದು ಪೊಲೀಸರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ ಭಾನುವಾರ ಕೊಟ್ಟೂರಿನಲ್ಲಿ ಅಪಾರ ಭಕ್ತರ ನಡುವೆ ನಡೆಯಿತು —ಪ್ರಜಾವಾಣಿ ಚಿತ್ರ: ಎಸ್‌.ಎಂ. ಗುರುಪ್ರಸಾದ್

ಪರ–ವಿರೋಧದ ಮಧ್ಯೆ ಸಿರಿಗೆರೆಶ್ರೀ ಅಡ್ಡಪಲ್ಲಕ್ಕಿ

ಕೊಟ್ಟೂರು (ವಿಜಯನಗರ ಜಿಲ್ಲೆ): ತರಳಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ ಭಾನುವಾರ ಪಟ್ಟಣದಲ್ಲಿ ಪರ, ವಿರೋಧದ ನಡುವೆ ಶಾಂತಿಯುತವಾಗಿ ನೆರವೇರಿತು.

'ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ಜರುಗುವವರೆಗೆ ಪಟ್ಟಣದಲ್ಲಿ ಯಾವುದೇ ಧಾರ್ಮಿಕ ಉತ್ಸವ, ಮೆರವಣಿಗೆ, ಅಡ್ಡಪಲ್ಲಕ್ಕಿ ಉತ್ಸವಗಳು ನಡೆದು ಬಂದಿಲ್ಲ. ಅಡ್ಡಪಲ್ಲಕ್ಕಿ ಉತ್ಸವ ರದ್ದುಗೊಳಿಸಬೇಕು' ಎಂದು ಕಟ್ಟೆಮನೆ ದೈವಸ್ಥರು ಇತ್ತೀಚೆಗೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು.

'ತರಳಬಾಳು ಹುಣ್ಣಿಮೆ ಮಹೋತ್ಸವದ ಕೊನೆ ದಿನ ಅಡ್ಡಪಲ್ಲಕ್ಕಿ ಉತ್ಸವ ಮಾಡುವುದು ಮಠದ ಪರಂಪರೆಯಾಗಿದ್ದು, ರದ್ದುಪಡಿಸುವುದಿಲ್ಲ. ಈ ಪರಂಪರೆ ಮುರಿಯಲಾಗದು' ಎಂದು ಹುಣ್ಣಿಮೆ ಸ್ವಾಗತ ಸಮಿತಿಯವರು ತಿಳಿಸಿದ್ದರು. ಇದು ಗೊಂದಲಕ್ಕೆ ಎಡೆಮಾಡಿಕೊಟ್ಟಿತ್ತು.

ಎರಡೂ ಕಡೆಯವರು ವಿಷಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದರಿಂದ ಪಟ್ಟಣದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಅಡ್ಡಪಲ್ಲಕ್ಕಿ ಉತ್ಸವ ಮಧ್ಯಾಹ್ನವಿದ್ದರೂ ಬೆಳಿಗ್ಗೆಯಿಂದಲೇ ಉಜ್ಜಯಿನಿ ರಸ್ತೆಯಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮಧ್ಯಾಹ್ನ 3ಕ್ಕೆ ಆರಂಭಗೊಂಡ ಅಡ್ಡಪಲ್ಲಕ್ಕಿ ಉತ್ಸವ ಸಂಜೆ 6ಕ್ಕೆ ಕೊನೆಗೊಂಡಿತು.

ತೆರದ ವಾಹನದ ಮೇಲೆ ಇರಿಸಿದ್ದ ಪಲ್ಲಕ್ಕಿಯಲ್ಲಿ ಶ್ರೀಗಳು ಕುಳಿತಿದ್ದರು. ಉತ್ಸವದಲ್ಲಿ ಸಕಲ ಮಂಗಲ ವಾದ್ಯ ಮೇಳಗಳು ಹಾಗೂ ಜಾನಪದ ಕಲಾ ತಂಡಗಳು ಪಾಲ್ಗೊಂಡಿದ್ದವು. ಕೇಸರಿ ಧ್ವಜ ಹಾಗೂ ಕೇಸರಿ ಶಾಲುಗಳನ್ನು ಧರಿಸಿದ ಭಕ್ತರು ವಾದ್ಯ ಮೇಳಗಳ ತಾಳಕ್ಕೆ ಕುಣಿದು ಕುಪ್ಪಳಿಸಿದರು.

ಮೈಲಾರದಲ್ಲಿ ಗಂಗಮಾಳಮ್ಮ ಯಾತ್ರಿ ನಿವಾಸ ಉದ್ಘಾಟಿಸಿ ಸವಾಲು ಹಾಕಿದ ಸಿದ್ದರಾಮಯ್ಯ

'ಕುರುಬರಿಗೆ ಬೊಮ್ಮಾಯಿ ಎಸ್ಟಿ ಮೀಸಲು ಕೊಡಿಸಲಿ'

ಪ್ರಜಾವಾಣಿ ವಾರ್ತೆ

ಮೈಲಾರ (ವಿಜಯನಗರ ಜಿಲ್ಲೆ): 'ಕುರುಬ ಸಮುದಾಯವನ್ನು ಎಸ್ಟಿ ಮೀಸಲು ಪಟ್ಟಿಗೆ ಸೇರಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ನರೇಂದ್ರ ಮೋದಿ ಬಳಿ ಕುಳಿತು ಕುರುಬರಿಗೆ ಎಸ್ಟಿ ಮೀಸಲಾತಿ ಕೊಡಿಸಲಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದಲ್ಲಿ ಭಾನುವಾರ ಕಾಗಿನೆಲೆ ಕನಕಗುರುಪೀಠದ ಶಾಖಾ ಮಠದಲ್ಲಿ ನೂತನ ಗಂಗಮಾಳಮ್ಮ ಯಾತ್ರಿ ನಿವಾಸ ಉದ್ಘಾಟಿಸಿ ಮಾತನಾಡಿದರು. 'ಬೀದರ್, ಕಲಬುರಗಿ, ಯಾದಗಿರಿ, ಕೊಡಗು ಜಿಲ್ಲೆಯ ಕುರುಬರನ್ನು ಎಸ್ಟಿಗೆ ಸೇರಿಸುವಂತೆ ಹಿಂದೆಯೇ ಶಿಫಾರಸು ಮಾಡಿದ್ದೇವೆ. ಕೇಂದ್ರ ಸರ್ಕಾರ ಇನ್ನೂ ಪರಿಗಣಿಸಿಲ್ಲ' ಎಂದರು.



ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದಲ್ಲಿ ಭಾನುವಾರ ಕಾಗಿನೆಲೆ ಕನಕಗುರುಪೀಠದ ಶಾಖಾ ಮಠದಲ್ಲಿ ನೂತನ ಗಂಗಮಾಳಮ್ಮ ಯಾತ್ರಿ ನಿವಾಸ ಉದ್ಘಾಟನಾ ಕಾರ್ಯಕ್ರಮವನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಅವರು ಡಮರುಗ ಬಾರಿಸಿ ಚಾಲನೆ ನೀಡಿದರು

ರಾಜೀನಾಮೆಗೆ ಸಿದ್ಧ: 'ಕೇಂದ್ರ ಸರ್ಕಾರ ಸಂವಿಧಾನ ಬಾಹಿರವಾಗಿ ಮೇಲ್ವರ್ಗದವರಿಗೆ ಶೇ 10ರಷ್ಟು ಮೀಸಲಾತಿ ನೀಡಿದೆ. ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ನೀಡಬಹುದೆಂದು ಸಂವಿಧಾನದ ಪರಿಚ್ಛೇದ 15, 16ರಲ್ಲಿ ಉಲ್ಲೇಖಿಸಲಾಗಿದೆ. ಮೇಲ್ಜಾತಿಯ ಬಡವರಿಗೂ ಮೀಸಲಾತಿ ಕೊಡಬಹುದು ಎಂದು ಎಲ್ಲೂ ಹೇಳಿಲ್ಲ. ಅದನ್ನು ಸಾಬೀತುಪಡಿಸಿದರೆ ರಾಜೀನಾಮೆ ನೀಡಲು ಸಿದ್ಧ' ಎಂದು ಸವಾಲೆಸೆದರು.

'ಮೇಲ್ವರ್ಗಗಳಿಗೆ ಸಂವಿಧಾನ ಬಾಹಿರವಾಗಿ ಮಿಸಲಾತಿ ಘೋಷಿಸಿದರೂ ಯಾರೊಬ್ಬರೂ ಪ್ರಶ್ನೆ ಮಾಡಲಿಲ್ಲ. ಹಿಂದುಳಿದ ಸಮುದಾಯಗಳ ಜನರು, ಮಠಾಧೀಶರು ಇಂಥ ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡು ಧ್ವನಿ ಎತ್ತಬೇಕು' ಎಂದರು.

'ಸ್ವಾಮಿ ವಿವೇಕಾನಂದರು ಹಿಂದೂ ಮತ್ತು ಹಿಂದುತ್ವ ಬೇರೆ ಎಂದು ವ್ಯಾಖ್ಯಾನಿಸಿದ್ದಾರೆ. ವಿವೇಕಾನಂದರನ್ನು ಪೂಜಿಸುವವರು, ಆರಾಧಿಸುವವರು ಅವರ ವಿಚಾರಧಾರೆಗಳನ್ನು ಮುಚ್ಚಿಟ್ಟಿದ್ದಾರೆ' ಎಂದು ಟೀಕಿಸಿದರು.

ಮಾಜಿಸಚಿವ ಎಚ್.ಎಂ. ರೇವಣ್ಣ ಅಧ್ಯಕ್ಷತೆ ವಹಿಸಿದ್ದರು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈಶ್ವರಾನಂದಪುರಿ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಪುರುಷೋತ್ತಮನಂದಪುರಿ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಶಾಸಕರಾದ ಪಿ.ಟಿ.ಪರಮೇಶ್ವರನಾಯ್ಕ, ಭೀಮ ನಾಯ್ಕ, ಶ್ರೀನಿವಾಸ ಮಾನೆ, ಎಸ್.ರಾಮಪ್ಪ, ಮಾಜಿ ಸಚಿವರಾದ ಬಸವರಾಜ ಶಿವಣ್ಣನವರ, ರುದ್ರಪ್ಪ ಲಮಾಣಿ, ಮಾಜಿ ಶಾಸಕ ಬಿ.ಜಿ. ಗೋವಿಂದಪ್ಪ ಇದ್ದರು.

ಸೋಮವಾರ, ಫೆಬ್ರುವರಿ 6, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 37 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಂಸತ್ ಅಧಿವೇಶನ: ಗದ್ದಲ ನಡೆಸದೇ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಕಾರ್ಯತಂತ್ರ

ಅದಾನಿ: ಚರ್ಚೆಗೆ ಸಜ್ಜಾದ ವಿಪಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿಯವರು ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಸೋಮವಾರ ಚರ್ಚೆ ನಡೆಯುವ ಸಂದರ್ಭದಲ್ಲಿ ಗದ್ದಲ ಮಾಡದಿರಲು ವಿರೋಧ ಪಕ್ಷಗಳು ನಿರ್ಧರಿಸಿವೆ. ಆದರೆ, ಅದಾನಿ ಸಮೂಹವು ಅಕ್ರಮವಾಗಿ ಷೇರುಗಳ ಮೌಲ್ಯ ಏರಿಕೆ/ಇಳಿಕೆ ಮಾಡಿದೆ ಎನ್ನಲಾದ ಪ್ರಕರಣದಿಂದ ಗಮನ ಬೇರೆಡೆಗೆ ತಿರುಗಿಸದಿರಲೂ ತೀರ್ಮಾನಿಸಿವೆ.

ಈ ಪ್ರಕರಣಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದ ಕಾರಣ ಗುರುವಾರ ಮತ್ತು ಶುಕ್ರವಾರ ಕಲಾಪ ನಡೆದಿರಲಿಲ್ಲ.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಕರೆದಿರುವ ವಿರೋಧ ಪಕ್ಷಗಳ ಸಭೆಯು ಸೋಮವಾರ ಬೆಳಿಗ್ಗೆ ನಡೆಯಲಿದೆ. ಕಲಾಪದಲ್ಲಿ ಸರ್ಕಾರವನ್ನು ಯಾವ ರೀತಿಯಲ್ಲಿ ಇಕ್ಕಟ್ಟಿಗೆ ಸಿಲುಕಿಸಬಹುದು ಎಂಬ ಬಗ್ಗೆ ಕೊನೆಯ ಕ್ಷಣದ ಕಾರ್ಯತಂತ್ರ ಹೆಣೆಯುವುದಕ್ಕಾಗಿ ಈ ಸಭೆ ಕರೆಯಲಾಗಿದೆ. ಸಭೆಯ ಬಳಿಕ, ವಿರೋಧ ಪಕ್ಷಗಳ ಮುಖಂಡರು ಸಂಸತ್ತಿನ ಎದುರು ಇರುವ ಮಹಾತ್ಮ ಗಾಂಧಿ ಪ್ರತಿಮೆಯ ಎದುರು ಪ್ರತಿಭಟನೆ ನಡೆಸಲಿದ್ದಾರೆ.

ಚರ್ಚೆಗೆ ಅವಕಾಶ ನೀಡುವುದರಲ್ಲಿ ಯಾವುದೇ ಅರ್ಥ ಇಲ್ಲ ಎಂದು ಕೆಲವು ಪಕ್ಷಗಳು ಅಭಿಪ್ರಾಯಪಟ್ಟಿವೆ. ಆದರೆ, ಅದಾನಿ ಸಮೂಹದ ಜೊತೆಗೆ ಎಲ್‌ಐಸಿ ಮತ್ತು ಎಸ್‌ಬಿಐ ನಡೆಸಿರುವ ಹಣಕಾಸು ವಹಿವಾಟಿಗೆ ಸಂಬಂಧಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕಿದ್ದರೆ ಚರ್ಚೆ ನಡೆಯುವುದು ಅಗತ್ಯ ಎಂಬುದು ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳ ಅಭಿಮತ. ಹಾಗಾಗಿ, 'ಚರ್ಚೆ ಬೇಡ' ಎನ್ನುತ್ತಿರುವ ಪಕ್ಷಗಳ ಮನ ವೊಲಿಸಲು ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಯತ್ನಿಸಬಹುದು.

ಅದಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಮೇಲಿನ ವಾಗ್ದಾಳಿಯನ್ನು ಕಾಂಗ್ರೆಸ್ ತೀವ್ರಗೊಳಿಸಿದೆ. ಸರ್ಕಾರಕ್ಕೆ ಈ ಪ್ರಕಣರದ ಕುರಿತು ಪ್ರತಿ ದಿನ ಮೂರು ಪ್ರಶ್ನೆ ಕೇಳಲಾಗುವುದು. 'ನಮಗೂ ಅದಾನಿಗೂ ಏನು ಸಂಬಂಧ' ಎಂಬುದರ ಹಿಂದೆ ಸರ್ಕಾರವು ಅಡಗಿಕೊಳ್ಳದೆ ಪ್ರಶ್ನೆಗಳಿಗೆ ಉತ್ತರ ಕೊಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಸಂಸತ್ತಿನಲ್ಲಿ ಚರ್ಚೆ ನಡೆಯುವುದರ ಕುರಿತು ಬಿಜೆಪಿ ಭೀತಿಯಲ್ಲಿದೆ. ಹಾಗಾಗಿ, ಸರ್ಕಾರದ ವಿರುದ್ಧ ಇರುವ ಯಾವುದೇ ಪಕ್ಷವು ಸಂಸತ್ತಿನಲ್ಲಿ ಗದ್ದಲ ಎಬ್ಬಿಸಿದರೆ ಆ ಪಕ್ಷವು ಬಿಜೆಪಿಯ ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದೆ ಎಂದು ಭಾವಿಸಲಾಗುವುದು ಎಂದು ತೃಣಮೂಲ ಕಾಂಗ್ರೆಸ್ ನಾಯಕ ಡೆರೆಕ್ ಓ.ಬ್ರಯಾನ್ ಹೇಳಿದ್ದಾರೆ.

'ಬಿಜೆಪಿಗೆ ಭಯವಾಗಿದೆ. ಸಂಸತ್ತಿನಲ್ಲಿ ನಡೆಯುವ ಚರ್ಚೆಯಿಂದ ಪಲಾಯನ ಮಾಡಲು ಆ ಪಕ್ಷವು ಬಯಸಿದೆ. ರಾಷ್ಟ್ರಪತಿಯವರ ಭಾಷಣದ ಮೇಲೆ ಸೋಮವಾರ ನಡೆಯುವ ಚರ್ಚೆಯು ಮೋದಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಿಕ್ಕಿರುವ ಅವಕಾಶ. ನಿಕಟ ನಿಗಾ ಇರಿಸಿ. ತೃಣಮೂಲ ಕಾಂಗ್ರೆಸ್‌ಗೆ ಚರ್ಚೆ ಬೇಕಾಗಿದೆ, ಗದ್ದಲ ಬೇಕಾಗಿಲ್ಲ' ಎಂದು ಡೆರೆಕ್ ಟ್ವೀಟ್ ಮಾಡಿದ್ದಾರೆ.

ಅದಾನಿ ಪ್ರಕರಣದ ಕುರಿತು ಯಾವ ರೀತಿಯ ತನಿಖೆ ನಡೆಯಬೇಕು ಎಂಬ ಬಗ್ಗೆ ವಿರೋಧ ಪಕ್ಷಗಳಲ್ಲಿ ಸಹಮತ ಇಲ್ಲ. ಜಂಟಿ ಸಂಸದೀಯ ಸಮಿತಿ ತನಿಖೆ ನಡೆಸಬೇಕು ಎಂಬುದು ಕೆಲವು ಪಕ್ಷಗಳ ಒತ್ತಾಯ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂಬುದು ಇತರ ಕೆಲವು ಪಕ್ಷಗಳ ಆಗ್ರಹ. ಆದರೆ, ವಿರೋಧ ಪಕ್ಷಗಳ ಒಗ್ಗಟ್ಟಿಗೆ ಈ ಭಿನ್ನಮತವು ಅಡ್ಡಬಂದಿಲ್ಲ.

'ವಿರೋಧ ಪಕ್ಷಗಳ ಅವಕಾಶ'

ಗುಜರಾತ್‌ನಲ್ಲಿ 2002ರಲ್ಲಿ ನಡೆದ ಗಲಭೆಯ ಕುರಿತು ಬ್ರಿಟನ್‌ನ ಮಾಧ್ಯಮ ಸಂಸ್ಥೆ ಬಿಬಿಸಿ ಸಿದ್ಧಪಡಿಸಿರುವ ಸಾಕ್ಷ್ಯಚಿತ್ರವು ವಿವಾದ ಸೃಷ್ಟಿಸಿದೆ. ಅದರ ಜೊತೆಗೆ, ಅದಾನಿ ಪ್ರಕರಣವು ಮೋದಿ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಿದೆ ಎಂಬುದು ವಿರೋಧ ಪಕ್ಷಗಳ ಅಭಿಮತ. ಹಾಗಾಗಿಯೇ ಚುನಾವಣೆ ಹತ್ತಿರ ಬಂದಿರುವ ಈ ಸಂದರ್ಭದಲ್ಲಿ ಸಿಕ್ಕ ಅವಕಾಶವನ್ನು ಕೈಬಿಡಬಾರದು ಎಂದು ವಿರೋಧ ಪಕ್ಷಗಳು ಭಾವಿಸಿವೆ.

ಬಿಜೆಪಿವಿರೋಧಿ ಪಕ್ಷಗಳೆಲ್ಲವೂ ಗುರುವಾರ ಮತ್ತು ಶುಕ್ರವಾರ ಸಭೆ ನಡೆಸಿವೆ. ವಿರೋಧ ಪಕ್ಷಗಳೆಲ್ಲವೂ ಒಟ್ಟಾಗಿ ಸರ್ಕಾರದ ಮೇಲೆ ಮುಗಿಬಿದ್ದವು. ಈ ಮೂಲಕ ಸರ್ಕಾರವನ್ನು ಮುಂದೆಯೂ ಇಕ್ಕಟ್ಟಿಗೆ ಸಿಲುಕಿಸಬಹುದೆಂದು ಭಾವಿಸಿವೆ.



ಎಲ್‌ಐಸಿ, ಎಸ್‌ಬಿಐ ಕೇಂದ್ರ ಬಿಂದು

ಅದಾನಿ ಸಮೂಹದ ವಹಿವಾಟು ಕುರಿತಂತೆ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಸಿದ್ಧಪಡಿಸಿರುವ ವರದಿಯಲ್ಲಿ ಷೇರು ಮೌಲ್ಯದ ಅಕ್ರಮ ಏರಿಕೆ/ಇಳಿಕೆಯ ವಿವರಗಳಿದ್ದವು. ಆದರೆ, ಇದಕ್ಕಿಂತ ಹೆಚ್ಚಾಗಿ, ಅದಾನಿ ಸಮೂಹದಲ್ಲಿ ಎಲ್‌ಐಸಿ ಮಾಡಿರುವ ಹೂಡಿಕೆ ಮತ್ತು ಅದಾನಿ ಸಮೂಹಕ್ಕೆ ಎಸ್‌ಬಿಐ ನೀಡಿರುವ ಸಾಲದ ಮೇಲೆಯೇ ಗಮನ ಕೇಂದ್ರೀಕರಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದಾನಿ ಸಮೂಹದ ಪ್ರವರ್ತಕರು ಆಪ್ತರು ಎಂದು ಹೇಳಲಾಗುತ್ತಿದೆ.



ಸಂಭ್ರಮ ಸವದತ್ತಿ ಸಮೀಪದ ಯಲ್ಲಮ್ಮನ ಗುಡ್ಡದಲ್ಲಿ ಭಾನುವಾರ ಭರತ ಹುಣ್ಣಿಮೆ ಜಾತ್ರೆಯ ಅಂಗವಾಗಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು –ಪ್ರಜಾವಾಣಿ ಚಿತ್ರ

ಸುದ್ದಿ 8

ಪಾಕಿಸ್ತಾನ ಮಾಜಿ ಅಧ್ಯಕ್ಷ ಮುಷರಫ್ ದುಬೈನಲ್ಲಿ ನಿಧನ

ಇಸ್ಲಾಮಾಬಾದ್/ದುಬೈ (ಪಿಟಿಐ): ಕಾರ್ಗಿಲ್ ಯುದ್ಧಕ್ಕೆ ಕಾರಣರಾಗಿದ್ದ ಪಾಕಿಸ್ತಾನದ ಮಾಜಿ ಮಿಲಿಟರಿ ಆಡಳಿತಗಾರ, ಮಾಜಿ ಅಧ್ಯಕ್ಷ ಜನರಲ್ (ನಿವೃತ್ತ) ಪರ್ವೇಜ್ ಮುಷರಫ್ (79) ದುಬೈನಲ್ಲಿ ಭಾನುವಾರ ನಿಧನರಾದರು. ದೀರ್ಘ ಕಾಲದ ಅನಾರೋಗ್ಯದಿಂದಾಗಿ ಬಳಲುತ್ತಿದ್ದ ಅವರಿಗೆ ದುಬೈನ ಅಮೆರಿಕನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು.

'ಅಂತ್ಯಕ್ರಿಯೆಗಾಗಿ ಮುಷರಫ್ ಅವರ ಪಾರ್ಥಿವ ಶರೀರವನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋಗಲು ಅವರ ಕುಟುಂಬ ನಿರ್ಧರಿಸಿದೆ' ಎಂದು ಜಿಯೊ ನ್ಯೂಸ್ ಚಾನೆಲ್ ವರದಿ ಮಾಡಿದೆ.

'ಪಾಕಿಸ್ತಾನದ ನೂರ್ ಖಾನ್ ವಾಯುನೆಲೆಯಿಂದ ಸೇನೆಯ ವಿಶೇಷ ವಿಮಾನವೊಂದು ದುಬೈಗೆ ತೆರಳಲಿದೆ' ಎಂದೂ ಚಾನೆಲ್ ವರದಿ ಮಾಡಿದ್ದು, ಹೆಚ್ಚಿನ ವಿವರಗಳನ್ನು ನೀಡಿಲ್ಲ.



ಪರ್ವೇಜ್ ಮುಷರಫ್

'ಅಮಿಲೊಯ್‌ಡೊಸಿಸ್' ಎಂಬ ವಿರಳ ಕಾಯಿಲೆಗೆ ಅವರು ತುತ್ತಾಗಿದ್ದರು. ದೇಹದ ಅಂಗಾಂಗಗಳು ಹಾಗೂ ಅಂಗಾಂಶಗಳಲ್ಲಿ 'ಅಮಿಲೊಯ್ಡ್' ಎಂಬ ಪ್ರೊಟೀನ್ ಅಸಹಜ ಪ್ರಮಾಣದಲ್ಲಿ ಶೇಖರಣೆಯಾಗುವುದರಿಂದ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ ಎಂದು ಅವರ ಕುಟುಂಬ ಮೂಲಗಳು ಹೇಳಿವೆ.

ಚಿಕಿತ್ಸೆಗಾಗಿ ಅವರು 2016ರ ಮಾರ್ಚ್‌ನಲ್ಲಿ ದುಬೈಗೆ ತೆರಳಿದ್ದರು. ಮುಷರಫ್ ಈ ಕಾಯಿಲೆಯಿಂದ ಬಳಲುತ್ತಿದ್ದುದನ್ನು ಅವರ ಪಕ್ಷ ಆಲ್ ಪಾಕಿಸ್ತಾನ ಮುಸ್ಲಿಂ ಲೀಗ್ (ಎಪಿಎಂಎಲ್) 2018ರಲ್ಲಿ ಬಹಿರಂಗಪಡಿಸಿತ್ತು.

ಕಾರ್ಗಿಲ್ ಯುದ್ಧ: ಮುಷರಫ್ ಅವರು ಸೇನೆಯ ಮುಖ್ಯಸ್ಥರಾಗಿದ್ದ ಅವಧಿಯಲ್ಲಿಯೇ ಕಾರ್ಗಿಲ್ ಯುದ್ಧ ನಡೆದಿತ್ತು.

8ನೇ ಪುಟ ನೋಡಿ

ಬಿಬಿಎಂಪಿ: ಗುತ್ತಿಗೆದಾರರ 3 ವರ್ಷದ ಬಿಲ್ ₹ 2,782.22 ಕೋಟಿ ಬಾಕಿ

ಬಿಲ್ ಪಾವತಿಗೆ ₹ 400 ಕೋಟಿ ಸಾಲ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) 2020-21 ಮತ್ತು 2021-22 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿ ಗುತ್ತಿಗೆದಾರರ ಬಿಲ್ ಪಾವತಿಸಲು ₹ 400 ಕೋಟಿವರೆಗೆ ಬ್ಯಾಂಕ್ ಸಾಲ ಪಡೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಸಾಲವನ್ನು ಬ್ಯಾಂಕಿಗೆ ಬಿಬಿಎಂಪಿ ಮರುಪಾವತಿಸಲಿದೆ. ಆದರೆ, ಸಾಲ ಮರುಪಾವತಿ ಅವಧಿಯವರೆಗಿನ ಬಡ್ಡಿಯನ್ನು ಗುತ್ತಿಗೆದಾರರೇ ಕಟ್ಟಬೇಕು! ಗುತ್ತಿಗೆದಾರರಿಗೆ ಬಿಬಿಎಂಪಿ 2020–21ರಿಂದ 2022–23ವರೆಗಿನ ಒಟ್ಟು 5,586 ಬಿಲ್‌ಗಳ ₹ 2,782.22 ಕೋಟಿ ಪಾವತಿಸಲು ಬಾಕಿ ಇದೆ.

'ಕೋವಿಡ್ ಪರಿಣಾಮ, ಎರಡು ವರ್ಷಗಳಿಂದ ಪಾಲಿಕೆಯ ಸಂಪನ್ಮೂಲ ಕ್ರೋಡೀಕರಣ ಕುಂಠಿತಗೊಂಡಿದೆ. ಹೀಗಾಗಿ, ಗುತ್ತಿಗೆದಾರರ ಸಂಕಷ್ಟವನ್ನು ತಾತ್ಕಾಲಿಕವಾಗಿ ಪರಿಹರಿಸಲು 'ಆಪ್ಷನಲ್ ವೆಂಡರ್ ಬಿಲ್ ಡಿಸ್ಕೌಂಟಿಂಗ್ ವ್ಯವಸ್ಥೆ' (ಒವಿಡಿಎಸ್) ಅಳವಡಿಸಲು ಅನುಮೋದನೆ ನೀಡುವಂತೆ 2022ರ ಅ. 19ರಂದು ಬಿಬಿಎಂಪಿ ಮುಖ್ಯ ಆಯುಕ್ತರು ಸರ್ಕಾರಕ್ಕೆ ಮನವಿ ಮಾಡಿದ್ದರು. ಇದೇ 18ರಂದು ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ.

ಮನವಿಯಲ್ಲಿ ಏನಿತ್ತು?: 'ಪ್ರತಿವರ್ಷ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಬಿಲ್‌ಗಳ ಅಂತರ ಹೆಚ್ಚುತ್ತಿದೆ. ಬಿಬಿಎಂಪಿಯು ಬೃಹತ್ ರಸ್ತೆಗಳು, ಮೇಲ್ಸೇತುವೆಗಳು, ಕಾರಿಡಾರ್‌ಗಳು, ಬೃಹತ್ ಕಾಲುವೆ ಮುಂತಾದ ಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಕಾಮಗಾರಿಗಳ ಬಿಲ್‌ಗಳು ಈವರೆಗೂ ಪಾವತಿಯಾಗಿಲ್ಲ. ಸಕಾಲದಲ್ಲಿ ಪಾವತಿ ಆಗದಿದ್ದರೆ, ಕಾಮಗಾರಿಯ ಪ್ರಗತಿ ಮತ್ತು ಗುಣಮಟ್ಟ ಕುಂಠಿತವಾಗಲಿದೆ. ಬಾಕಿ ಬಿಲ್ ಪಾವತಿಸುವಂತೆ ಗುತ್ತಿಗೆದಾರರು ಒತ್ತಾಯಿಸುತ್ತಿದ್ದಾರೆ. ಹೀಗಾಗಿ, ಸಾಲದ ರೂಪದಲ್ಲಿ ₹1,000 ಕೋಟಿ ವಿಶೇಷ ಅನುದಾನವನ್ನು ಬಿಬಿಎಂಪಿಗೆ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲಾಗಿದೆ. ಒವಿಡಿಎಸ್ ಪದ್ಧತಿ ಅಳವಡಿಸಲು ಚಿಂತಿಸಲಾಗಿದ್ದು, ಅದಕ್ಕೆ ಅವಕಾಶ ನೀಡಬೇಕು' ಎಂದು ಪತ್ರದಲ್ಲಿ ಆಯುಕ್ತರು ಕೋರಿದ್ದರು.


'ಈ ವ್ಯವಸ್ಥೆಯಲ್ಲಿ ಎಲ್ಲ ರಾಷ್ಟ್ರೀಯ ಮತ್ತು ಇತರ ಷೆಡ್ಯೂಲ್ಡ್ ಬ್ಯಾಂಕುಗಳು ಭಾಗವಹಿಸಲು ಅವಕಾಶವಿದೆ. ಬ್ಯಾಂಕುಗಳೇ ಪಾಲಿಕೆಯನ್ನು ಸಂಪರ್ಕಿಸಿ ಸೂಕ್ತ ಬಡ್ಡಿ ದರದಲ್ಲಿ ಒವಿಡಿಎಸ್ ಮಾಡಿಕೊಡಬಹುದು'.

5ನೇ ಪುಟ ನೋಡಿ

'ಸುಳ್ಳು ಬಿಲ್ ಪಾವತಿಗೆ ಹೂಡಿರುವ ಸಂಚು'

ಬಿಬಿಎಂಪಿಯ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಗುತ್ತಿಗೆದಾರರು, 'ಇದೊಂದು ಅವ್ಯವಹಾರವಾಗಿದ್ದು, ಸರ್ಕಾರ, ಬಿಬಿಎಂಪಿ ಅಧಿಕಾರಿಗಳು, ಆಡಳಿತ ಪಕ್ಷದ ಶಾಸಕರು ಇದರಲ್ಲಿ ಭಾಗಿಯಾಗಿದ್ದಾರೆ' ಎಂದು ಆರೋಪಿಸಿದ್ದಾರೆ. ಕೇವಲ ಬಿಜೆಪಿ ಆಡಳಿತಾವಧಿಯ ಬಿಲ್ ಪಾವತಿ ಏಕೆ ಎಂದೂ ಪ್ರಶ್ನಿಸಿದ್ದಾರೆ.

'ಗುತ್ತಿಗೆ ಕರಾರು ಮುರಿದು ಈ ನಿಯಮ ಹೇರಲಾಗುತ್ತಿದೆ. ಬಿಬಿಎಂಪಿಯ ಅಧಿಕಾರಿಗಳಿಗೆ ಹಣ ನೀಡುವವರ ಬಿಲ್ ಪಾವತಿಯಾಗುತ್ತದೆ. ಆಡಳಿತ ಪಕ್ಷದ ಬಹುಪಾಲು ಶಾಸಕರು ಕಳೆದ ಎರಡು ವರ್ಷದಲ್ಲಿ ಬೇನಾಮಿಯಾಗಿ ಕಾಮಗಾರಿ ಪಡೆದುಕೊಂಡಿದ್ದು, ಸುಳ್ಳು ಬಿಲ್ ಸಲ್ಲಿಸಿದ್ದಾರೆ. ಬಹಳ ಹಿಂದಿನಿಂದ ಬಿಲ್ ಬಾಕಿ ಇರುವ ಇತರ ಗುತ್ತಿಗೆದಾರರನ್ನು ಬಿಟ್ಟು, ಕಾಮಗಾರಿಯನ್ನೇ ಮಾಡದ ಬಿಲ್ ಮೊತ್ತ ಪಡೆದುಕೊಳ್ಳಲು ಹೂಡಿರುವ ಸಂಚು ಇದು' ಎಂದೂ ದೂರಿದ್ದಾರೆ.



ಬಿಬಿಎಂಪಿ ಬಿಲ್ ಎಷ್ಟು ಬಾಕಿ?

ವರ್ಷ	ಒಟ್ಟು ಬಿಲ್	ಮೊತ್ತ (₹ ಕೋಟಿಗಳಲ್ಲಿ)
2020-21	912	466.68
2021-22	3,006	1,644.88
2022-23	1,668	670.66
ಒಟ್ಟು	5,586	2,782.22

ಅಮೆರಿಕ ಗಡಿ ಪ್ರವೇಶಿಸಿದ್ದ ಚೀನಾ ಬಲೂನ್ ನಾಶ

ವಾಷಿಂಗ್ಟನ್/ ಬೀಜಿಂಗ್ (ಪಿಟಿಐ): ಅಮೆರಿಕದ ವಾಯುಗಡಿಯ ಅಟ್ಲಾಂಟಿಕ್ ಸಾಗರ ವ್ಯಾಪ್ತಿಯಲ್ಲಿ ಹಾರಾಟ ನಡೆಸುತ್ತಿದ್ದ, ಚೀನಾದ ಶಂಕಿತ ಕಣ್ಗಾವಲು ಬಲೂನ್ ಅನ್ನು ಅಮೆರಿಕ ಸೇನೆಯು ಹೊಡೆದುರುಳಿಸಿದೆ. ಅಲ್ಲದೆ, ಬಲೂನ್‌ನ ಅವಶೇಷಗಳ ಪತ್ತೆಗೆ ಸೇನೆಯ ಯೋಧರು ಕಾರ್ಯಾಚರಣೆ ನಡೆಸಿದ್ದಾರೆ.


ಇನ್ನೊಂದೆಡೆ, ಈ ಬೆಳವಣಿಗೆಗೆ ಚೀನಾ ಕಟುವಾಗಿ ಪ್ರತಿಕ್ರಿಯಿಸಿದೆ. 'ಚೀನಾದ ಮಾನವರಹಿತ ನಾಗರಿಕ ಉದ್ದೇಶದ ಏರ್‌ಶಿಪ್ ವಿರುದ್ಧ ಅಮೆರಿಕ ಸೇನೆಯನ್ನು ಬಳಸಿದೆ. ಇದರ ಪರಿಣಾಮಗಳನ್ನು ಎದುರಿಸಬೇಕಾದಿತು' ಎಂದು ಎಚ್ಚರಿಕೆಯನ್ನು ನೀಡಿದೆ.

5ನೇ ಪುಟ ನೋಡಿ

ಬೆಂಗಳೂರು, ತುಮಕೂರಿಗೆ ಪ್ರಧಾನಿ ಮೋದಿ ಇಂದು

ಬೆಂಗಳೂರು: ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿರುವ ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ (ಫೆ. 6) ಮತ್ತೊಮ್ಮೆ ಭೇಟಿ ನೀಡಲಿದ್ದು, ಎರಡು ಮಹತ್ವದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಬೆಳಿಗ್ಗೆ 11.30ಕ್ಕೆ 'ಭಾರತ ಇಂಧನ ಸಪ್ತಾಹ–2023'ಕ್ಕೆ (ಐಇಡಬ್ಲ್ಯು) ಚಾಲನೆ ನೀಡಲಿದ್ದಾರೆ. ಮಧ್ಯಾಹ್ನ 3ಕ್ಕೆ ತುಮಕೂರಿನಲ್ಲಿ ಎಚ್‌ಎಎಲ್ ಹೆಲಿಕಾಪ್ಟರ್ ಕಾರ್ಖಾನೆಯನ್ನು ದೇಶಕ್ಕೆ ಸಮರ್ಪಿಸಲಿದ್ದಾರೆ. ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಲಿದ್ದಾರೆ.



ಫೆ.6ರಿಂದ 8ರವರೆಗೆ ಇಂಧನ ಸಪ್ತಾಹ ಆಯೋಜಿಸಲಾಗಿದ್ದು, ಭಾರತವು ಇಂಧನ ಪರಿವರ್ತನೆಯ ಶಕ್ತಿ ಕೇಂದ್ರವಾಗುತ್ತಿರುವುದನ್ನು ಅನಾವರಣಗೊಳಿಸಲಿದೆ. ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಇಂಧನ ಕೈಗಾರಿಕೆ ವಲಯ, ಸರ್ಕಾರಗಳು ಮತ್ತು ಶೈಕ್ಷಣಿಕ ವಲಯವನ್ನು ಇದು ಒಂದೇ ವೇದಿಕೆ ಅಡಿಯಲ್ಲಿ ತರಲಿದೆ. 30 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು, 500ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಭಾರತದ ಇಂಧನ ಭವಿಷ್ಯ ಕುರಿತ ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಚರ್ಚಿಸುವರು. ಕಾರ್ಯಕ್ರಮದಲ್ಲಿ ಪ್ರಧಾನಿ ಅವರು ಜಾಗತಿಕ ತೈಲ ಮತ್ತು ಅನಿಲ ವಲಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ದುಂಡು ಮೇಜಿನ ಸಂವಾದದಲ್ಲಿ ಭಾಗವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಪ್ರಧಾನಿ ಅವರು ಭಾರತೀಯ ತೈಲ ನಿಗಮದ ಒಳಾಂಗಣ ಸೌರ ಅಡುಗೆ ವ್ಯವಸ್ಥೆಯ ಅವಳಿ 'ಕುಕ್ ಟಾಪ್' ಮಾದರಿಯನ್ನು ಲೋಕಾರ್ಪಣೆ ಮಾಡುವರು ಮತ್ತು ವಾಣಿಜ್ಯ ಚಟುವಟಿಕೆಗೆ ಚಾಲನೆ ನೀಡಲಿದ್ದಾರೆ. ಜತೆಗೆ, ಹಸಿರು ಇಂಧನ ಕುರಿತು ಅರಿವು ಮೂಡಿಸಲು ಹಸಿರು ಸಾರಿಗೆ ಜಾಥಾಗೆ ಚಾಲನೆ ನೀಡಲಿದ್ದಾರೆ.

ಕೇಂದ್ರ ಸರ್ಕಾರಿ ನೌಕರರಿಗೆ ಶೇ 4ರಷ್ಟು ತುಟ್ಟಿಭತ್ಯೆ ಏರಿಕೆ?

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ತನ್ನ ನೌಕರರು, ಪಿಂಚಣಿದಾರರಿಗೆ ಶೇ 4ರಷ್ಟು ತುಟ್ಟಿಭತ್ಯೆ ಏರಿಸುವ ಸಾಧ್ಯತೆಗಳಿದ್ದು, ತುಟ್ಟಿಭತ್ಯೆ ಪ್ರಮಾಣವು ಈಗಿನ ಶೇ 38ರಿಂದ ಒಟ್ಟು ಶೇ 42ಕ್ಕೆ ಏರಿಕೆಯಾಗುವ ಸಂಭವವಿದೆ.

ಕಾರ್ಮಿಕ ಸಚಿವಾಲಯದ ಭಾಗವಾದ ಕಾರ್ಮಿಕ ಮಂಡಳಿಯು ಪ್ರಕಟಿಸುವ ಕೈಗಾರಿಕಾ ಕಾರ್ಮಿಕರ ಗ್ರಾಹಕರ ದರ ಸೂಚ್ಯಂಕವನ್ನು (ಸಿಪಿಐ–ಐಡಬ್ಲ್ಯು) ಆಧರಿಸಿ ತುಟ್ಟಿಭತ್ಯೆ ಪ್ರಮಾಣವನ್ನು ಪರಿಷ್ಕರಿಸಲಾಗಿದೆ ಎಂದು ಹೇಳಲಾಗಿದೆ.

'ಜ.1, 2023ರಿಂದಲೇ ಪೂರ್ವಾನ್ವಯವಾಗುವಂತೆ ತುಟ್ಟಿಭತ್ಯೆ ಪ್ರಮಾಣ ಏರಿಕೆ ಆಗಬಹುದು' ಎಂದು ಅಖಿಲ ಭಾರತ ರೈಲ್ವೆಮೆನ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಶಿವಗೋಪಾಲ್ ಮಿಶ್ರಾ ಅವರು ಪ್ರತಿಕ್ರಿಯಿಸಿದರು.

3 ತಿಂಗಳಲ್ಲಿ ತಲಾ ₹ 30 ಲಕ್ಷ ಪಾವತಿಗೆ ಆರ್ಸೆಲರ್ ಮಿತ್ತಲ್ ಕಂಪನಿಗೆ 'ಸುಪ್ರೀಂ' ಆದೇಶ

ಭೂಮಾಲೀಕರಿಗೆ ನಾಲ್ಕು ಪಟ್ಟು ಪರಿಹಾರ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು (ಕೆಐಎಡಿಬಿ) 2010ರಲ್ಲಿ ಬಳ್ಳಾರಿಯಲ್ಲಿ ಉಕ್ಕಿನ ಘಟಕ ಸ್ಥಾಪನೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಪ್ರತಿ ಎಕರೆಗೆ ಅಲ್ಲಿನ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ನಿಗದಿಪಡಿಸಿದಷ್ಟು ಪರಿಹಾರವನ್ನೇ ಅರ್ಸೆಲರ್ ಮಿತ್ತಲ್ ಇಂಡಿಯಾ ಕಂಪನಿ ಪಾವತಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಈ ಆದೇಶದ ಪ್ರಕಾರ ಪ್ರತಿ ಎಕರೆಗೆ ಈಗ ನೀಡಬೇಕಿರುವ ಪರಿಹಾರ ಮೊತ್ತ ₹ 30.20 ಲಕ್ಷ.

ಭೂ ಸಂತ್ರಸ್ತ ಬಿ.ರವಿಪ್ರಕಾಶ್ ಹಾಗೂ ಇತರ 83 ಮಂದಿ ಸಲ್ಲಿಸಿದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಅಭಯ್ ಎಸ್.ಓಕಾ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ, ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠದ ಆದೇಶವನ್ನು ರದ್ದುಪಡಿಸಿದೆ. ಜತೆಗೆ, ಮೂರು ತಿಂಗಳಲ್ಲಿ ಪರಿಹಾರ ಪಾವತಿಸಬೇಕು ಎಂದೂ ತಾಕೀತು ಮಾಡಿದೆ.

ಬಳ್ಳಾರಿ ಜಿಲ್ಲೆಯ ಕುಡಿತಿನಿ ಹಾಗೂ ಹರಗಿನಡೋಣಿ ಗ್ರಾಮಗಳಲ್ಲಿ ಕೈಗಾರಿಕೆ ಸ್ಥಾಪಿಸಲು 4,993 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲು 2010ರ ಫೆಬ್ರುವರಿ 5ರಂದು ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 4,866 ಎಕರೆ ಭೂಸ್ವಾಧೀನಕ್ಕೆ 2010ರ ಮೇ ತಿಂಗಳಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಭೂಮಿ ಕಳೆದುಕೊಳ್ಳುವವರಿಗೆ ಪ್ರತಿ ಎಕರೆಗೆ ₹1.5 ಲಕ್ಷ ನೀಡಲು ವಿಶೇಷ ಭೂಸ್ವಾಧೀನ ಅಧಿಕಾರಿ ಶಿಫಾರಸು ಮಾಡಿದ್ದರು.

ಆದರೆ, ಅವೈಜ್ಞಾನಿಕ ದರ ನಿಗದಿ ಮಾಡಲಾಗಿದೆ ಎಂದು ಭೂ ಸಂತ್ರಸ್ತರು ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿ ಹೋರಾಟ ನಡೆಸಿದ್ದರು. ಬಳಿಕ ಕೃಷಿ ಭೂಮಿಗೆ ಎಕರೆಗೆ ₹8 ಲಕ್ಷ, ಕೃಷಿಯೇತರ ಭೂಮಿಗೆ ಎಕರೆಗೆ ₹12 ಲಕ್ಷ ನಿಗದಿಪಡಿಸಲಾಗಿತ್ತು. ಈ ಭೂ ದರವನ್ನು ಕೆಲವು ಭೂ ಮಾಲೀಕರು ಒಪ್ಪಿಕೊಂಡು ಭೂಮಿ ಬಿಟ್ಟುಕೊಡಲು ಕೆಐಎಡಿಬಿ ಜತೆಗೆ ಕರಾರು ಮಾಡಿಕೊಂಡಿದ್ದರು. ಕಡಿಮೆ ದರ ನಿಗದಿ ಮಾಡಲಾಗಿದೆ ಎಂದು ಆರೋಪಿಸಿ ಹಲವು ಭೂಮಿ ಮಾಲೀಕರು ಸಿವಿಲ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ರಾಷ್ಟ್ರೀಯ ಹೆದ್ದಾರಿಯಿಂದ 500 ಮೀಟರ್‌ನಷ್ಟು ದೂರದಲ್ಲಿರುವ ಭೂಮಿಗೆ ₹32.20 ಲಕ್ಷ ಹಾಗೂ ಅದರ ಆಚೆಗೆ ಇರುವ ಕೃಷಿ ಭೂಮಿಗೆ ₹8 ಲಕ್ಷ ಪರಿಹಾರ ನೀಡಬೇಕು ಎಂದು 2016ರ ಮಾರ್ಚ್ 1ರಂದು ಆದೇಶ ನೀಡಿತ್ತು.

5ನೇ ಪುಟ ನೋಡಿ

'ರೈತರ ಹೋರಾಟಕ್ಕೆ ಜಯ'

'ಕೆಐಎಡಿಬಿ ಫಲವತ್ತಾದ ಭೂಮಿಗೆ ಅವೈಜ್ಞಾನಿಕ ದರವನ್ನು ನಿಗದಿ ಮಾಡಿತ್ತು. ಹಲವು ರೈತರು ಇದನ್ನು ಒಪ್ಪಿಕೊಂಡರು. ಪರಿಹಾರ ನಿಗದಿಯ ಅನ್ಯಾಯದ ವಿರುದ್ಧ ಹಲವು ಮಂದಿ ಧ್ವನಿ ಎತ್ತಿ ಹೋರಾಟ ಮಾಡಿದೆವು. ನಮ್ಮ 289 ಎಕರೆ ಜಾಗಕ್ಕೆ ಬಳ್ಳಾರಿ ನ್ಯಾಯಾಲಯದ ಆದೇಶದ ಪ್ರಕಾರ ಪರಿಹಾರ ಸಿಗಬೇಕು. ಅಧೀನ ನ್ಯಾಯಾಲಯಗಳಲ್ಲಿ ಇನ್ನಷ್ಟು ಜನರು (179 ಎಕರೆ ಜಾಗಕ್ಕೆ ಸಂಬಂಧಪಟ್ಟಂತೆ) ದಾವೆ ಹೂಡಿದ್ದಾರೆ. ನಮ್ಮ ಹೋರಾಟದಿಂದ ಅವರಿಗೂ ಅನುಕೂಲವಾಗಬಹುದು. ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೆ ಸ್ಥಾಪನೆಗೆ ಎನ್‌ಎಂಡಿಸಿಗೆ 3,800 ಎಕರೆ ಹಾಗೂ ಉತ್ತಮ್ ಗಾಲ್ವ ಸ್ಟೀಲ್ಸ್ ಕಂಪನಿಗೆ 5,000 ಎಕರೆ ಭೂಸ್ವಾಧೀನ ಮಾಡಲಾಗುತ್ತಿದೆ. ಭೂ ದರ ನಿಗದಿ ಪ್ರಶ್ನಿಸಿ ಅನೇಕ ಮಂದಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಅವರಿಗೆ ಸಹ ಈ ಆದೇಶದಿಂದ ಲಾಭ ಆಗಬಹುದು. ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ' ಎಂದು ಅರ್ಜಿದಾರ ಬಿ.ರವಿಪ್ರಕಾಶ್ ತಿಳಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಟ್ಟಿಂಗ್, ಅಕ್ರಮ ಸಾಲ: 232 ವಿದೇಶಿ ಆ್ಯಪ್‌ಗಳಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಬೆಟ್ಟಿಂಗ್, ಜೂಜು ಹಾಗೂ ಅಕ್ರಮ ಸಾಲ ವಿತರಣೆಯಲ್ಲಿ ತೊಡಗಿದ್ದ ಒಟ್ಟು 232 ಆ್ಯಪ್‌ಗಳನ್ನು ಕೇಂದ್ರ ಸರ್ಕಾರ ನಿರ್ಬಂಧಿಸಿದೆ. ಈ ಆ್ಯಪ್‌ಗಳನ್ನು ಚೀನೀಯರು ಸೇರಿದಂತೆ ವಿದೇಶಿಯರು ನಿಯಂತ್ರಿಸುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಗೃಹ ಸಚಿವಾಲಯದಿಂದ ಬಂದ ಸೂಚನೆ ಆಧರಿಸಿ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಆ್ಯಪ್‌ಗಳನ್ನು ನಿರ್ಬಂಧಿಸುವ ಆದೇಶ ಹೊರಡಿಸಿದೆ.

'ಬೆಟ್ಟಿಂಗ್, ಜೂಜು ಹಾಗೂ ಅಕ್ರಮ ಹಣ ವರ್ಗಾವಣೆಯಲ್ಲಿ ತೊಡಗಿದ್ದ ಒಟ್ಟು 138 ಆ್ಯಪ್‌ಗಳನ್ನು ನಿರ್ಬಂಧಿಸುವ ಆದೇಶವು ಶನಿವಾರ ಸಂಜೆ ಹೊರಬಿದ್ದಿದೆ. ಅಕ್ರಮ ಸಾಲ ವಿತರಣೆಯಲ್ಲಿ ತೊಡಗಿದ್ದ 94 ಆ್ಯಪ್‌ಗಳನ್ನು ನಿರ್ಬಂಧಿಸುವ ಆದೇಶನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಈ ಆ್ಯಪ್‌ಗಳನ್ನು ಚೀನಾ ಒಳಗೊಂಡಂತೆ ಬೇರೆ ದೇಶಗಳಿಂದ ನಿಯಂತ್ರಿಸಲಾಗುತ್ತಿತ್ತು. ಇವು ದೇಶದ ಆರ್ಥಿಕ ಸ್ಥಿರತೆಗೆ ಬೆದರಿಕೆ ಒಡ್ಡಿದ್ದವು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿರ್ಬಂಧಿಸಲಾಗಿರುವ ಆ್ಯಪ್‌ಗಳ ಹೆಸರನ್ನು ಮೂಲಗಳು ತಿಳಿಸಿಲ್ಲ. ಈ ವಿಚಾರವಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಸಿಕ್ಕಿಲ್ಲ.

ಕವನ ಸ್ಪರ್ಧೆ: ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ಕವಿ ಗೋವಿಂದ ಪೈ ಅವರ ಜನ್ಮದಿನದ ಪ್ರಯುಕ್ತ ಉದಯೋನ್ಮುಖ ಕವಿ-ಕವಯತ್ರಿಯರಿಗೆ ಕವನ ಸ್ಪರ್ಧೆ ಆಯೋಜಿಸಿದೆ.

ಆಸಕ್ತರು ಕನ್ನಡ ನಾಡು, ನುಡಿ, ಸಾಹಿತ್ಯ, ಕನ್ನಡ ನಾಡಿನ ಪರಂಪರೆ ಕುರಿತಾದ ಸ್ವರಚಿತ ಒಂದು ಕವನವನ್ನು ಮಾರ್ಚ್ 3ರೊಳಗೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಎ.ಎಸ್.ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು.
ಸಂಪರ್ಕ:9739001410

ನಗರದಲ್ಲಿ ಇಂದು

ಪ್ರವಚನ ವಾಹಿನಿ ಕಾರ್ಯಕ್ರಮ: 'ಇಂದಿನ ಸಮಾಜಕ್ಕೆ ಶಂಕರರ ಕೊಡುಗೆಗಳು' ಕುರಿತು ಉಪನ್ಯಾಸ: ಮಂಜುನಾಥ್ ಭಟ್ ವಿನಾಯಕ, ಆಯೋಜನೆ ಮತ್ತು ಸ್ಥಳ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ಕೇರಳ: 2,500ಕ್ಕೂ ಹೆಚ್ಚು ಮಂದಿ ಬಂಧನ

ತಿರುವನಂತಪುರ (ಪಿಟಿಐ): ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದವರ ವಿರುದ್ಧ ರಾಜ್ಯದಾದ್ಯಂತ ಭಾನುವಾರ ಕಾರ್ಯಾಚರಣೆ ನಡೆಸಿರುವ ಕೇರಳ ಪೊಲೀಸರು, 2,507 ಜನರನ್ನು ಬಂಧಿಸಿದ್ದಾರೆ.

ಫೆಬ್ರುವರಿ 4ರಿಂದ 3,501 ಸ್ಥಳಗಳಲ್ಲಿ ದಾಳಿ ನಡೆಸಿ ಒಟ್ಟು 1,673 ಪ್ರಕರಣಗಳನ್ನು ದಾಖಲಿಸಲಾಗಿದೆ. ಬಳಿಕ ತಪ್ಪಿತಸ್ಥರನ್ನು ಬಂಧಿಸಲಾಗಿದೆ. ತಿರುವನಂತಪುರದಲ್ಲಿ 333, ಕೋಯಿಕ್ಕೋಡ್– 272, ಕಣ್ಣೂರು ಜಿಲ್ಲೆಯಲ್ಲಿ 257 ಪ್ರಕರಣಗಳು ದಾಖಲಾಗಿವೆ. ತ್ರಿಶ್ಶೂರ್‌ನಲ್ಲಿ 214 ಪ್ರಕರಣಗಳು ದಾಖಲಾಗಿದ್ದು, 301 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೇಲ್ಸೇತುವೆ ಟೆಂಡರ್ ಮತ್ತೆ ವಿಳಂಬ

ಈಜಿಪುರ: ಬಿಬಿಎಂಪಿ ಭರವಸೆ ಹುಸಿ, ಕೋರಮಂಗಲ ನಾಗರಿಕರ ಆಕ್ರೋಶ; ಹೋರಾಟಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಹೊರ ವರ್ತುಲ ರಸ್ತೆ ಎಲಿವೇಟೆಡ್ ಕಾರಿಡಾರ್ ಯೋಜನೆ (ಈಜಿಪುರ ಮೇಲ್ಸೇತುವೆ) ಟೆಂಡರ್ ಪ್ರಕ್ರಿಯೆ ಮತ್ತೆ ವಿಳಂಬವಾಗಿದೆ.


ಎರಡು ಬಾರಿ ರದ್ದು ಮಾಡಿ ಮೂರನೇ ಬಾರಿಗೆ ಕರೆಯಲಾಗಿರುವ ಟೆಂಡರ್ ಅಂತಿಮಗೊಳಿಸಲು ಸಮಯ ಮೀರಿದ್ದರೂ ಬಿಬಿಎಂಪಿ ಕ್ರಮ ಕೈಗೊಂಡಿಲ್ಲ. ಹೀಗಾಗಿ ನಾಗರಿಕರು ಮತ್ತೆ ಬೀದಿಗಿಳಿದು ಹೋರಾಟ ಮಾಡಲು ಮುಂದಾಗಿದ್ದಾರೆ.

2017ರಲ್ಲಿ ಆರಂಭವಾಗಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ, ಗುತ್ತಿಗೆದಾರರ ವಿಳಂಬದಿಂದ ಸಾಕಷ್ಟು ಹಿನ್ನಡೆ ಅನುಭವಿಸಿತು. ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತು. ಕೊನೆಗೆ ಬಿಬಿಎಂಪಿ ಗುತ್ತಿಗೆಯನ್ನು 2022ರ ಮಾರ್ಚ್ 9ರಂದು ರದ್ದುಪಡಿಸಿತು. ಹೈಕೋರ್ಟ್ ಮೂರು ತಿಂಗಳಲ್ಲಿ ಮರು ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು. ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ತಾಕೀತು ಮಾಡಿತು. ಇದಾಗಿ ಒಂದು ವರ್ಷವಾದರೂ ಟೆಂಡರ್ ಪ್ರಕ್ರಿಯೆಯನ್ನೇ ಬಿಬಿಎಂಪಿ ಪೂರ್ಣಗೊಳಿಸಿಲ್ಲ.

ಅಕ್ಟೋಬರ್‌ನಲ್ಲಿ ಒಂದು ಬಾರಿ, ಜನವರಿಯಲ್ಲಿ ಎರಡನೇ ಬಾರಿ ಟೆಂಡರ್ ಅನ್ನು ಬಿಬಿಎಂಪಿ ರದ್ದುಗೊಳಿಸಿತು. ನಿವಾಸಿಗಳ ಆಗ್ರಹ ಹೆಚ್ಚಾದಾಗ, ಡಿಸೆಂಬರ್‌ನಲ್ಲಿ ನಡೆದ ನಾಗರಿಕರ ಸಭೆಯಲ್ಲಿ 'ಫೆಬ್ರುವರಿಯಲ್ಲಿ ಕಾಮಗಾರಿ ಆರಂಭಿಸಲಾಗುತ್ತದೆ' ಎಂದು ದಕ್ಷಿಣ ವಲಯದ ಜಂಟಿ ಆಯುಕ್ತರು ಹಾಗೂ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಎಸ್. ಸೂಗೂರ ಭರವಸೆ ನೀಡಿದ್ದರು.

ಮೂರನೇ ಬಾರಿಗೆ ಜ.6ರಂದು ಟೆಂಡರ್ ಕರೆಯಲಾಗಿತ್ತು. 25ರಂದು ಅದನ್ನು ತೆರೆಯಬೇಕಾಗಿತ್ತು. ಆದರೆ ಫೆ.4ರಂದು ಅದನ್ನು ತೆರೆಯಲಾಗಿದೆ. ಅದೂ ಇನ್ನೂ ಸಮಿತಿ ಮುಂದೆ ಹೋಗಿ, ಅನುಮತಿ ಪಡೆಯಬೇಕಾಗಿದೆ. ಹೀಗಾಗಿ ಇನ್ನಷ್ಟು ವಿಳಂಬ ಮಾಡುವ ಉದ್ದೇಶವಿದೆ ಎಂದು ಸ್ಥಳೀಯ ನಾಗರಿಕರು ದೂರಿದ್ದಾರೆ.

ಹೆಚ್ಚು ವೆಚ್ಚ: ಈಜಿಪುರ ಮೇಲ್ಸೇತುವೆ 2.5 ಕಿ.ಮೀ. ಉದ್ದದ ಕಾರಿಡಾರ್ ಆಗಿದ್ದು, 2014ರಲ್ಲಿ ಇದರ ಯೋಜನೆ ರೂಪಿಸಲಾಗಿತ್ತು. 2017ರಲ್ಲಿ ₹157.66 ಕೋಟಿಗೆ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. 2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಗುತ್ತಿಗೆದಾರರು ವಿಳಂಬ ಮಾಡಿದರು. ನಾಲ್ಕು ವರ್ಷ ಏಳು ತಿಂಗಳಾದರೂ ಶೇ 42ರಷ್ಟು ಮಾತ್ರ ಕಾಮಗಾರಿ ಮುಗಿದಿತ್ತು. ₹75.11 ಕೋಟಿ ಹಣವನ್ನೂ ಅವರಿಗೆ ಪಾವತಿ ಮಾಡಲಾಗಿತ್ತು. ಈಗ ಉಳಿದ ಕಾಮಗಾರಿಗೆ ₹143.80 ಕೋಟಿ ವೆಚ್ಚ ಮಾಡಲಾಗುತ್ತಿದೆ. ಟರ್ನ್‌ಕೀ ಯೋಜನೆಯಾಗಿದ್ದು, ಮೊತ್ತವನ್ನು ಹೆಚ್ಚಿಸಲಾಗುವುದಿಲ್ಲ. 15 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸಬೇಕೆಂಬ ಷರತ್ತು ವಿಧಿಸಲಾಗಿದೆ. ₹157 ಕೋಟಿ ಯೋಜನೆ ಇದೀಗ ₹218 ಕೋಟಿಗೆ ತಲುಪಿದೆ. ಈಗ ಇದು ಆರಂಭವಾಗದಿದ್ದರೆ, ಮತ್ತಷ್ಟು ಕೋಟಿ ಹೆಚ್ಚು ವ್ಯಯವಾಗಲಿದೆ ಎಂಬ ಆತಂಕವೂ ಇದೆ.



ಈಜಿಪುರದಲ್ಲಿ ಸ್ಥಗಿತಗೊಂಡಿರುವ ಮೇಲ್ಸೇತುವೆ ಕಾಮಗಾರಿ ಸ್ಥಳವು ತ್ಯಾಜ್ಯದ ತಾಣವಾಗಿದೆ

ಒಂದು ವಾರದ ಗಡುವು...

'ಬಿಬಿಎಂಪಿಯವರು ಸ್ಥಳೀಯರ ಜನರ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಅರ್ಧಕ್ಕೆ ನಿಂತಿರುವ ಮೇಲ್ಸೇತುವೆಯಿಂದ ಇದು ಕಸದ ಗುಂಡಿಯಾಗಿದೆ. ಹೈಕೋರ್ಟ್ ಆದೇಶಕ್ಕೂ ಬಿಬಿಎಂಪಿ ಅಧಿಕಾರಿಗಳು ಮಣಿದಿಲ್ಲ. ಅವರದ್ದೇ ಆಟವಾಗಿದೆ. ಏನು ರಾಜಕೀಯವೋ.. ನಾಗರಿಕರು ಮಾತ್ರ ಸಂಕಷ್ಟದಲ್ಲಿದ್ದಾರೆ. ಈ ವಾರ ಮಾತ್ರ ಕಾದು ನೋಡುತ್ತೇವೆ. ಕಾಮಗಾರಿ ಆರಂಭಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ' ಎಂದು ಕೋರಮಂಗಲ ಎಸ್‌ಟಿ ಬೆಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜೇಂದ್ರ ಬಾಬು ಹೇಳಿದರು.

3–4 ದಿನದಲ್ಲಿ ನಿರ್ಧಾರ...

'ಬಿಬಿಎಂಪಿ ಟೆಂಡರ್ ಪ್ರಕ್ರಿಯೆಯಲ್ಲಿ ತೊಡಗಿದೆ. ಮೂರ್ನಾಲ್ಕು ದಿನದಲ್ಲಿ ಟೆಂಡರ್ ಅನುಮೋದನೆಗೆ ಸಮಿತಿ ಮುಂದಿರಿಸಲಾಗುತ್ತದೆ. ಅಲ್ಲಿನ ನಿರ್ಧಾರದಂತೆ ಮುಂದುವರಿಯಲಾಗುತ್ತದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಎಸ್. ಸುಗೂರ ಹೇಳಿದರು.

ಸುದ್ದಿ 2 ನಿಮಿಷ

ಭೂಸ್ವಾಧೀನ ವಿರೋಧಿಸಿ ಪೊರಕೆ ಚಳವಳಿ ಇಂದು

ಯಲಹಂಕ: ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಭೂಸ್ವಾಧೀನ ವಿರೋಧಿಸಿ 17 ಹಳ್ಳಿಗಳ ರೈತ ಮಹಿಳೆಯರ ನೇತೃತ್ವದಲ್ಲಿ ಫೆ.6ರಂದು ಬೃಹತ್ ಪೊರಕೆ ಚಳವಳಿ ನಡೆಯಲಿದೆ.

ಚಳವಳಿಗೆ ಯಲಹಂಕ ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಕ್ಷೇತ್ರದ ಜನತಾದಳ (ಜಾತ್ಯತೀತ)ಪಕ್ಷವು ಬೆಂಬಲ ಘೋಷಿಸಿವೆ.

ಯಲಹಂಕ ತಾಲ್ಲೂಕಿನ 17 ಹಳ್ಳಿಗಳ 3,546 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲು ಬಿಡಿಎ ಮುಂದಾಗಿದೆ. ಇದರಿಂದ ಕೃಷಿ, ಹೈನುಗಾರಿಕೆ ಮತ್ತಿತರ ಕಸುಬು ನಂಬಿಕೊಂಡು ಬದುಕುತ್ತಿದ್ದ ಸಾವಿರಾರು ರೈತ ಕುಟುಂಬಗಳು ಬೀದಿಪಾಲಾಗುತ್ತಿವೆ. ಆದ್ದರಿಂದ, ಕೂಡಲೇ ಈ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಈ ಪ್ರತಿಭಟನೆ ನಡೆಯುತ್ತಿದೆ.

ಭೀಮನಕಟ್ಟೆ ಕೆರೆ ಸುತ್ತಲಿನ ಪ್ರದೇಶ ಉಳಿಸಲು ಆಗ್ರಹ



ಬೆಂಗಳೂರು: ರಾಜರಾಜೇಶ್ವರಿ ನಗರದಲ್ಲಿರುವ ಭೀಮನಕಟ್ಟೆ ಕೆರೆಯ ಸುತ್ತಮುತ್ತಲಿನ ಸರ್ಕಾರಿ ಜಾಗ ಮತ್ತು ಹೈಟೆನ್ಷನ್ ತಂತಿಯ ಕೆಳಗೆ ಉದ್ಯಾನ ನಿರ್ಮಿಸಬೇಕು ಎಂದು ರಾಜರಾಜೇಶ್ವರಿನಗರ ಕೆರೆ ಸಂರಕ್ಷಣಾ ಬಳಗ ಆಗ್ರಹಿಸಿದೆ.

ಭೀಮನಕಟ್ಟೆ ಕೆರೆ ಬಳಿ ಭಾನುವಾರ ಸೇರಿದ್ದ ಸ್ಥಳೀಯ ನಾಗರಿಕರು, 'ಕೆರೆಯನ್ನು ಬಿಬಿಎಂಪಿ ವತಿಯಿಂದ ಅಭಿವೃದ್ಧಿಗೊಳಿಸಲಾಗುತ್ತಿದೆ. ಸಚಿವ ಮುನಿರತ್ನ ಅವರ ಸೂಚನೆ ಮೇರೆಗೆ ಕೆಲವು ಹೆಚ್ಚಿನ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿವೆ. ಆದರೆ ಇಲ್ಲಿ ಹೈಟೆನ್ಷನ್ ಇದ್ದು ಇಲ್ಲಿ ಅಭಿವೃದ್ಧಿ ಅಥವಾ ಯಾವುದೇ ಕಟ್ಟಡ ಕಾಮಗಾರಿ ಆಗುವುದು ಬೇಡ' ಎಂದು ಅಭಿಪ್ರಾಯಪಟ್ಟರು.

'ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇರೆ ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾದರೆ ಭೀಮನಕಟ್ಟೆ ಕೆರೆಗೆ ನೀರಿನ ಹರಿವಿಗೆ ತಡೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಚಿವರಿಗೆ ಮನವಿ ಮಾಡಲು ಬಳಗದ ಸದಸ್ಯರು ಹಾಗೂ ನಾಗರಿಕರು ನಿರ್ಧರಿಸಿದರು' ಎಂದು ಬಳಗದ ಶಿವೇಗೌಡ ತಿಳಿಸಿದರು.

ಪತ್ರಕರ್ತೆ ಆರ್. ಪೂರ್ಣಿಮಾ ಅವರಿಗೆ 'ಗೌರಿಸುಂದರ್ ವಾರ್ಷಿಕ ಪ್ರಶಸ್ತಿ'

'ಮಹಿಳೆಯರ ಸಾಧನೆ ಪುಸ್ತಕದಲ್ಲಿ ದಾಖಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲವು ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸಲಾಗುತ್ತದೆ' ಎಂದು ಪತ್ರಕರ್ತೆ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ ಹೇಳಿದರು.

ಸುಂದರ ಪ್ರಕಾಶನದ 2023ನೇ ಸಾಲಿನ 'ಗೌರಿಸುಂದರ್ ವಾರ್ಷಿಕ ಪ್ರಶಸ್ತಿ' ಸ್ವೀಕರಿಸಿ ಭಾನುವಾರ ಅವರು ಮಾತನಾಡಿದರು.

'ಮಹಿಳೆಯರ ಸಾಧನೆಗಳು ಅನನ್ಯ. ಹಲವು ಪ್ರಕರಣಗಳಲ್ಲಿ ಅವೆಲ್ಲ ಹೊರಗೆ ಬರುವುದಿಲ್ಲ. ಸಾಧಕಿಯರ ಜೀವನದ ಹೋರಾಟದ ಹಾದಿಯನ್ನು ದಾಖಲಿಸುವುದು ಅಗತ್ಯ. ಇಂತಹ ಪುಸ್ತಕಗಳ ಸರಣಿಯನ್ನು ಹೊರತರಲಾಗುತ್ತದೆ' ಎಂದರು.

'ಚರಿತ್ರೆಯಲ್ಲಿ ಮರೆತುಹೋಗಿರುವ ಹಾಗೂ ಅದನ್ನು ನೆನಪಿಸಿಕೊಳ್ಳಬೇಕಾದ ವಿಷಯಗಳಿವೆ. ಸುಗಮ ಸಂಗೀತ ಕ್ಷೇತ್ರದ ಎಚ್.ಆರ್. ಲೀಲಾವತಿ ಅವರ 60 ವರ್ಷಗಳ ಪಯಣವನ್ನು ಬರೆಯಲು ಮನವಿ ಮಾಡಿದ್ದೆ. ಅವರ ಆತ್ಮಕಥನ ಪುಸ್ತಕ ರೂಪದಲ್ಲಿ ಹೊರ ಬರಲಿದೆ. ಹಾಗೆಯೇ, ನಟಿ ಬಿ. ಸರೋಜಾ ದೇವಿ ಅವರ ಆತ್ಮಕಥನ ಬರಲಿದ್ದು, ಅದನ್ನು ಪ್ರತಿಭಾನಂದಕುಮಾರ್ ನಿರೂಪಣೆ ಮಾಡುತ್ತಿದ್ದಾರೆ' ಎಂದರು.

'ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆ, 30–40 ವರ್ಷಗಳ ಕಷ್ಟಗಳನ್ನು ದಾಖಲಿಸುವ ಉದ್ದೇಶವಿದೆ. ಕರ್ನಾಟಕದಲ್ಲಿ ದೇವದಾಸಿಯರ ಕೊಡುಗೆ ದೊಡ್ಡದು. ಆ ಹೆಣ್ಣು ಮಕ್ಕಳು ದೇವದಾಸಿಯಾದರೂ ವಿಶ್ವವಿಖ್ಯಾತ ಕಲಾವಿದೆಯರಾಗಿದ್ದಾರೆ. ಅಂತಹ ಮಹಿಳೆಯರ ಪಟ್ಟಿಯನ್ನು ಮಾಡಿಕೊಂಡು ಪುಸ್ತಕ ಪ್ರಕಟಿಸಲಾಗುತ್ತಿದೆ' ಎಂದರು.

ಕವಿ ಎಚ್.ಎಸ್.ವೆಂಕಟೇಶಮೂರ್ತಿ ಮಾತನಾಡಿ, ಪತ್ರಕರ್ತೆಯಾಗುವ ಮುನ್ನ ಪೂರ್ಣಿಮಾ ಅವರು ತಮ್ಮ ಸಹಪಾಠಿಯಾಗಿ ಕಾಲೇಜು ದಿನಗಳಲ್ಲಿ ಹೇಗಿದ್ದರು ಎಂಬುದನ್ನು ವಿವರಿಸಿದರು.

'ನನ್ನ ಪತ್ನಿ ನಿಧನರಾದ ಸಂದರ್ಭದಲ್ಲಿ ಶೋಕದಲ್ಲಿದ್ದಾಗ, ಏನಾದರೂ ಬರೆಯಿರಿ ಎಂದು ಪತ್ರಿಕೆಗೆ ಲೇಖನ ಬರೆಸಿದ್ದರು. ನನ್ನ ಕಷ್ಟದ ಸಮಯದಲ್ಲಿ ಸ್ನೇಹಿತೆಯಾಗಿ ಸಲಹೆ ಕೊಟ್ಟಿದ್ದಾರೆ' ಎಂದರು.

ವಿಮರ್ಶಕ ಕೆ. ಸತ್ಯನಾರಾಯಣ ಮಾತನಾಡಿ, 'ತಿರುಮಲೇಶ್ ಅವರಿಗೆ ಸರಿಯಾದ ಓದುಗ ವರ್ಗವನ್ನು ಸೃಷ್ಟಿಸುವಲ್ಲಿ ನಮ್ಮ ವಿಮರ್ಶಾಲೋಕ ವಿಫಲವಾಯಿತು. ಅವರು ಹೋದ ಮೇಲೆ ಅವರ ಬಗ್ಗೆ ಅನುಕಂಪದಿಂದ ಮಾತನಾಡುತ್ತಾರೆ, ಅವರಿಗೆ ಪ್ರಶಸ್ತಿ ಬರಬೇಕಾಗಿತ್ತು ಎನ್ನುವುದು ಯುಕ್ತವಾದದಂಥ ಮಾತುಗಳಲ್ಲ' ಎಂದರು.

ಮಧುಮಾಲ ಬಿ.ಲಿಗಾಡೆ ಅವರ 'ಅರ್ಪಣಾ' ಪುಸ್ತಕವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಪತ್ರಕರ್ತೆ ಭಾರತಿ ಹೆಗಡೆ, ಸುಂದರ ಪ್ರಕಾಶನ ಇಂದಿರಾ ಸುಂದರ್ ಇದ್ದರು.



'ಗೌರಿ ಸುಂದರ್ ವಾರ್ಷಿಕ ಪ್ರಶಸ್ತಿ'ಯನ್ನು ಪತ್ರಕರ್ತೆ ಆರ್. ಪೂರ್ಣಿಮಾ ಅವರಿಗೆ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಪ್ರದಾನ ಮಾಡಿದರು. ಪತ್ರಕರ್ತೆ ಭಾರತಿ ಹೆಗಡೆ, ವಿಮರ್ಶಕ ಕೆ. ಸತ್ಯನಾರಾಯಣ, ಇಂದಿರಾ ಸುಂದರ್ ಮತ್ತು ಲೇಖಕಿ ಮಧುಮಾಲ ಬಿ. ಲಿಗಾಡೆ ಇದ್ದಾರೆ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

'ಅಮೆರಿಕದ ಸಿಲಿಕಾನ್ ವ್ಯಾಲಿಗಿಂತ ಭಾರತ ಮುಂದಿದೆ'

ಹಮೀರ್‌ಪುರ್/ ಶಿಮ್ಲಾ (ಪಿಟಿಐ): ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ, ಅಮೆರಿಕದ ಸಿಲಿಕಾನ್ ವ್ಯಾಲಿಗಿಂತ ಮುಂದಿದೆ. ಬೇರೆ ದೇಶಗಳು ಕೋವಿಡ್ ಲಸಿಕೆಯ ಪ್ರಮಾಣಪತ್ರವನ್ನು ಕಾಗದ ರೂಪದಲ್ಲಿ ನೀಡುತ್ತಿದ್ದರೆ, ಭಾರತದಲ್ಲಿ ಡಿಜಿಟಲ್ ರೂಪದಲ್ಲಿ ಲಭ್ಯವಾಗುತ್ತಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು ಉನಾದಲ್ಲಿ ಪಕ್ಷದ ಪದಾಧಿಕಾರಿಗಳ ಸಭೆಯಲ್ಲಿ ಹೇಳಿದ್ದಾರೆ.

ಜಾಗತಿಕ ತಾಪಮಾನ ವಿರುದ್ಧ ಸಂಘಟಿತ ಹೋರಾಟ ಅಗತ್ಯ: ಕೇಂದ್ರ ಸಚಿವ

ಬೆಂಗಳೂರು: 'ಜಾಗತಿಕ ತಾಪಮಾನದ ಹೆಚ್ಚಳ ಮತ್ತು ಹವಾಮಾನ ಬದಲಾವಣೆಯಿಂದ ಸೃಷ್ಟಿಯಾಗುವ ಸವಾಲುಗಳನ್ನು ಎದುರಿಸಲು ಜಿ-20 ಗುಂಪಿನ ರಾಷ್ಟ್ರಗಳು ಸಂಘಟಿತ ಹೋರಾಟ ನಡೆಸಬೇಕಾಗಿದೆ' ಎಂದು ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಹೇಳಿದರು.

ನಗರದಲ್ಲಿ ಭಾನುವಾರ ಆರಂಭವಾದ ಜಿ-20 ರಾಷ್ಟ್ರಗಳ ಇಂಧನ ಪರಿವರ್ತನಾ ಕಾರ್ಯಕಾರಿ ಗುಂಪಿನ ಸಭೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜಾಗತಿಕ ತಾಪಮಾನ ತಗ್ಗಿಸುವುದು, ಹಸಿರು ಇಂಧನದ ಬಳಕೆಯ ಹೆಚ್ಚಳ ಕೇವಲ ಮಾತಿಗೆ ಸೀಮಿತವಾಗಬಾರದು. ಎಲ್ಲ ರಾಷ್ಟ್ರಗಳೂ ಈ ನಿಟ್ಟಿನಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಬದ್ಧತೆ ತೋರಬೇಕು' ಎಂದರು.

2030ರ ವೇಳೆಗೆ ಮಾಲಿನ್ಯದ ಪ್ರಮಾಣವನ್ನು ಶೇ 45ರಷ್ಟು ತಗ್ಗಿಸುವ ಗುರಿ ಸಾಧನೆಗೆ ಭಾರತವು ಬದ್ಧವಾಗಿದೆ. 2030ರ ವೇಳೆಗೆ ದೇಶವು ಶೇಕಡ 50ರಷ್ಟು ಇಂಧನವನ್ನು ಪಳೆಯುಳಿಕೆಯೇತರ ಸಂಪನ್ಮೂಲಗಳನ್ನು ಪಡೆಯಲು ಯೋಜನೆಗಳನ್ನು ಆರಂಭಿಸಿದೆ. ಹವಾಮಾನ ಬದಲಾವಣೆಯ ಕಾರ್ಯಕ್ಷಮತೆಯ ಸೂಚ್ಯಂಕದಲ್ಲಿ ಭಾರತವು ಜಗತ್ತಿನ ಮೊದಲ ಐದು ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರವು ಜಾರಿಗೊಳಿಸಿದ ಇಂಧನ ಉಳಿತಾಯ ಯೋಜನೆಗಳ ಪರಿಣಾಮವಾಗಿ 2.67 ಕೋಟಿ ಟನ್ ಇಂಗಾಲ ಉತ್ಪಾದನೆ ಕಡಿಮೆಯಾಗಿದೆ. ಇದರಿಂದ ಸುಮಾರು ₹ 1,850 ಕೋಟಿಯಷ್ಟು ಉಳಿತಾಯವಾಗಿದೆ ಎಂದು ತಿಳಿಸಿದರು.

ವಿಶೇಷ ಭಾಷಣ ಮಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ಭಾರತೀಯರು ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡುತ್ತಾರೆ. ಪ್ರಕೃತಿ ಸ್ನೇಹಿಯಾದ ಜೀವನಶೈಲಿ ಮತ್ತು ಅಭ್ಯಾಸಗಳನ್ನು ಅನುಸರಿಸುತ್ತಾರೆ. ಮರುಬಳಕೆಯ ಆರ್ಥಿಕತೆಯು ನಮ್ಮ ಸಂಸ್ಕೃತಿ ಹಾಗೂ ಜೀವನಶೈಲಿಯ ಅವಿಭಾಜ್ಯ ಅಂಗವಾಗಿದೆ' ಎಂದರು.

ಬ್ರೆಜಿಲ್ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ನವೀಕರಿಸಬಹುದಾದ ಇಂಧನ ವಿಭಾಗದ ಮುಖ್ಯಸ್ಥ ರೆನಾಟೊ ಡೊಮಿತ್ ಗೊಡಿನ್ಹೋ, ಕೇಂದ್ರ ಇಂಧನ ಸಚಿವಾಲಯದ ಕಾರ್ಯದರ್ಶಿ ಅಲೋಕ್ ಕುಮಾರ್, ಭಾರತದ ಜಿ-20 ಶೆರ್ಪಾ ಅಭಯ್ ಠಾಕೂರ್, ನೀತಿ ಆಯೋಗದ ಸದಸ್ಯ ವಿ.ಕೆ. ಸಾರಸ್ವತ್ ಮಾತನಾಡಿದರು. ವಿಶ್ವ ಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್, ವಿಶ್ವ ಸಂಸ್ಥೆಯ ಪರಿಸರ ಕಾರ್ಯಕ್ರಮ (ಯುಎನ್‌ಇಪಿ) ಸೇರಿದಂತೆ ಹಲವು ಅಂತರರಾಷ್ಟ್ರೀಯ ಸಂಸ್ಥೆಗಳು ಸಭೆಯ ಸಹಭಾಗಿತ್ವ ವಹಿಸಿವೆ. ಜಿ-20 ಗುಂಪಿನ ಒಂಬತ್ತು ವಿಶೇಷ ಆಹ್ವಾನಿತ ಅತಿಥಿ ದೇಶಗಳು ಸೇರಿದಂತೆ 150ಕ್ಕೂ ಹೆಚ್ಚು ಪ್ರತಿನಿಧಿಗಳು ಮೂರು ದಿನಗಳ ಸಭೆಯಲ್ಲಿ ಪಾಲ್ಗೊಂಡಿದ್ದಾರೆ.

ಗುಜರಿ ನೀತಿ: ಜಿಲ್ಲಾ ಮಟ್ಟದಲ್ಲೇ ಸಂಗ್ರಹ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಯಂ ಪ್ರೇರಿತವಾಗಿ ವಾಹನಗಳನ್ನು ಗುಜರಿಗೆ ಹಾಕಿ ರಿಯಾಯಿತಿ ಪಡೆಯಲು ಬಯಸುವ ವಾಹನ ಮಾಲೀಕರಿಗೆ ಜಿಲ್ಲಾ ಮಟ್ಟದಲ್ಲೇ ಅವಕಾಶಗಳು ಸಿಗಲಿವೆ.

ರಾಜ್ಯ ಮಟ್ಟದಲ್ಲಿ ಗುಜರಿ ಕೇಂದ್ರ(ಆರ್‌ವಿಎಸ್‌ಎಫ್) ತೆರೆಯಲಾಗುತ್ತಿದ್ದು, ಈ ಕೇಂದ್ರವೇ ಜಿಲ್ಲಾ ಮಟ್ಟದಲ್ಲೂ ಸಂಗ್ರಹ ಕೇಂದ್ರಗಳನ್ನು ತೆರೆಯಲು ಸಾರಿಗೆ ಇಲಾಖೆ ಅನುಮತಿ ನೀಡಲಿದೆ.

ಗುಜರಿ ಕೇಂದ್ರಗಳನ್ನು ತೆರೆಯಲು ಅರ್ಹರಿಂದ ಸಾರಿಗೆ ಇಲಾಖೆ ಅರ್ಜಿ ಆಹ್ವಾನಿಸಿದೆ. ₹10 ಕೋಟಿ ವಹಿವಾಟು ನಡೆಸಿರುವ ಸಂಸ್ಥೆ ಅಥವಾ ವ್ಯಕ್ತಿ ಅರ್ಜಿ ಸಲ್ಲಿಸಲು ಅರ್ಹರು. ಗುಜರಿಗೆ ಬೇಕಿರುವ ಯಂತ್ರೋಪಕರಣ ಮತ್ತು ವಾಹನಗಳ ನಿಲುಗಡೆಗೆ ಜಾಗ ಅಗತ್ಯವಿದ್ದು, ಈ ಎಲ್ಲಾ ವ್ಯವಸ್ಥೆ ಇರುವ ಸಂಸ್ಥೆ ಅರ್ಜಿ ಸಲ್ಲಿಸಲು ಅರ್ಹವಿರಲಿದೆ.

ಜಿಲ್ಲಾ ಮಟ್ಟದಲ್ಲಿ ಗುಜರಿ ಕೇಂದ್ರ ತೆರೆಯಲು ಪ್ರತ್ಯೇಕವಾಗಿ ಸಾರಿಗೆ ಇಲಾಖೆ ಅವಕಾಶ ನೀಡುವುದಿಲ್ಲ. ರಾಜ್ಯ ಮಟ್ಟದಲ್ಲಿ ಗುಜರಿ ಕೇಂದ್ರ ತೆರೆಯುವ ಏಜೆನ್ಸಿಯೇ ಜಿಲ್ಲಾ ಮಟ್ಟದಲ್ಲಿ ವಾಹನಗಳ ಸಂಗ್ರಹ ಕೇಂದ್ರ ತೆರೆಯಬಹುದಾಗಿದೆ.

'ಅಲ್ಲಿಗೆ ವಾಹನಗಳನ್ನು ತಲುಪಿಸಿದರೆ ರಾಜ್ಯ ಮಟ್ಟದ ಕೇಂದ್ರಕ್ಕೆ ತಂದು ವೈಜ್ಞಾನಿಕವಾಗಿ ಸ್ಕ್ರ್ಯಾಪ್ ಮಾಡಲಾಗುತ್ತದೆ. ಸಾರಿಗೆ ಇಲಾಖೆ, ಪೊಲೀಸ್ ಇಲಾಖೆಗಳಿಂದ ಗುಜರಿ ಕೇಂದ್ರ ನಡೆಸುವವರೇ ಅನುಮತಿ ಪಡೆದುಕೊಳ್ಳಲಿದ್ದಾರೆ. ವಾಹನಗಳ ಮಾಲೀಕರಿಗೆ ಪ್ರಮಾಣ ಪತ್ರ ನೀಡಲಿದ್ದು, ಹೊಸ ವಾಹನ ಖರೀದಿಸುವಾಗ ಆ ಪತ್ರ ಹಾಜರುಪಡಿಸಿ ರಿಯಾಯಿತಿ ಪಡೆದುಕೊಳ್ಳಬಹುದು' ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ವಾಹನಗಳ ಮಾಲೀಕರು ಪಾವತಿಸುತ್ತಿದ್ದ ತೆರಿಗೆಯ ಮೊತ್ತದಲ್ಲಿ ಶೇ 25ರಷ್ಟು ಪ್ರಮಾಣ ಅಂದರೆ ವರ್ಷಕ್ಕೆ ₹1 ಲಕ್ಷ ತೆರಿಗೆ ಪಾವತಿಸುತ್ತಿದ್ದರೆ ₹25 ಸಾವಿರ ರಿಯಾಯಿತಿ ದೊರಕಲಿದೆ ಎಂದರು.

ಈ ಮಧ್ಯೆ ನೋಂದಾಯಿತ ವಾಹನ ಗುಜರಿ ಕೇಂದ್ರಗಳನ್ನು ತೆರೆಯಲು ಸಾರಿಗೆ ಇಲಾಖೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಅರ್ಹ ಸಾರ್ವಜನಿಕರು ಗುಜರಿ ನಿಯಮದಡಿ ಕೇಂದ್ರ ಸರ್ಕಾರದ ಪೋರ್ಟಲ್ www.nsws.gov.in ನಲ್ಲಿ ಏಕಗವಾಕ್ಷಿಯಲ್ಲಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.

ವಿಜೃಂಭಣೆಯ ಆತ್ಮಾ ರಾಮಸ್ವಾಮಿ ಜಾತ್ರೆ

ದಾಬಸ್‌ಪೇಟೆ: ಇಲ್ಲಿನ ನರಸೀಪುರದ ಆತ್ಮಾ ರಾಮಸ್ವಾಮಿ ಬ್ರಹ್ಮ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ ದೇವಾಲಯದ ಮೂಲ ದೇವರಿಗೆ ಅಭಿಷೇಕ, ಅಲಂಕಾರ ಪೂಜಾ ಕಾರ್ಯಕ್ರಮ ನೆರವೇರಿದ್ದವು. ಹೂವುಗಳಿಂದ ಅಲಂಕೃತವಾದ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಮಂಗಳ ವಾದ್ಯ ಸಮೇತ ದೇವಾಲಯದ ಸುತ್ತು ಪ್ರದಕ್ಷಿಣೆ ಹಾಕಿ ನಂತರ ಅರವಟ್ಟಿಕೆಗಳಿಗೆ ತೆಗೆದುಕೊಂಡು ಹೋಗಿ ರಥದಲ್ಲಿ ಕೂರಿಸಲಾಯಿತು. ಗರುಡ ದೇವರು ರಥದ ಮೇಲೆ ಮೂರು ಸುತ್ತು ಹಾಕುತ್ತಿದ್ದಂತೆ ಭಕ್ತರು ಉಘೇ ಉಘೇ ಎನ್ನುತ್ತಾ ರಾಮನಾಮ ಜಪಿಸುತ್ತಾ ರಥವನ್ನು ಮುಂದೆ ಎಳೆದರು.

ಜಾತ್ರೆಗೆ ಬಂದಿದ್ದ ಭಕ್ತರು ಬಾಳೆಹಣ್ಣು, ದವನ ರಥದ ಮೇಲೆ ಎಸೆದು ತಮ್ಮ ಹರಕೆ ತೀರಿಸಿದರು. ಕೆಲವರು ಬಾಳೆಹಣ್ಣಿನ ಮೇಲೆ ವಿವಿಧ ಹರಕೆ ಹೊತ್ತು ಎಸೆದದ್ದು ವಿಶೇಷವಾಗಿತ್ತು. ಬಂದಂತಹ ಭಕ್ತರಿಗೆ ಮೂರ್ನಾಲ್ಕು ಕಡೆಗಳಲ್ಲಿ ಹೆಸರು ಬೇಳೆ, ಪಾನಕ, ನೀರು ಮಜ್ಜಿಗೆ ವಿತರಿಸಲಾಯಿತು. ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಜನರು ರಥೋತ್ಸವದಲ್ಲಿ ಭಾಗವಹಿಸಿದ್ದರು.



ಆತ್ಮಾ ರಾಮಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು

ಬೆಳಿಗ್ಗೆ 9 ಗಂಟೆಯಿಂದ ಸಂಜೆ 4.30ರವರೆಗೆ ಸೇವೆ: ಶೀಘ್ರ ಚಾಲನೆ

108 ನಮ್ಮ ಕ್ಲಿನಿಕ್ ಸೇವೆಗೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 108 ನಮ್ಮ ಕ್ಲಿನಿಕ್‌ಗಳು ನಿರ್ಮಾಣಗೊಂಡಿದ್ದು, ಶೀಘ್ರದಲ್ಲಿಯೇ ಸೇವೆ ಪ್ರಾರಂಭಿಸಲಿವೆ.

ಮಹಾಲಕ್ಷ್ಮಿ ಬಡಾವಣೆಯ ಮಹಾಲಕ್ಷ್ಮಿಪುರ ವಾರ್ಡ್‌ನಲ್ಲಿ ಸ್ಥಾಪಿಸಿರುವ ನಮ್ಮ ಕ್ಲಿನಿಕ್‌ನಲ್ಲಿ ಉದ್ಘಾಟನಾ ಸಮಾರಂಭಕ್ಕೆ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ. ಏಕಕಾಲದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಥಾಪಿಸಿರುವ 108 ಕ್ಲಿನಿಕ್‌ಗಳೂ ಕಾರ್ಯಾರಂಭಿಸಲಿವೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ಬಿಬಿಎಂಪಿ ವ್ಯಾಪ್ತಿಯಲ್ಲಿ 108 ನಮ್ಮ ಕ್ಲಿನಿಕ್‌ಗಳು ಕಾರ್ಯಾರಂಭಕ್ಕೆ ಸಜ್ಜಾಗಿವೆ. 2022ರ ಡಿ.14ರಂದು ಧಾರವಾಡದ ಬೈರದೇವರ ಕೊಪ್ಪದಲ್ಲಿ ನಮ್ಮ ಕ್ಲಿನಿಕ್ ಉದ್ಘಾಟಿಸುವ ಮೂಲಕ, ರಾಜ್ಯದಲ್ಲಿ ಏಕ ಕಾಲಕ್ಕೆ 100 ನಮ್ಮ ಕ್ಲಿನಿಕ್‌ಗಳಿಗೆ ವರ್ಚುವಲ್ ವೇದಿಕೆ ಮೂಲಕ ಚಾಲನೆ ನೀಡಿದ್ದರು. ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಕ್ಲಿನಿಕ್‌ಗಳು, ಆರೋಗ್ಯ ಆರೈಕೆಯಲ್ಲಿ ಹೊಸ ಆಯಾಮ ಸೃಷ್ಟಿಸುತ್ತಿವೆ' ಎಂದು ಹೇಳಿದ್ದಾರೆ.

'ನಮ್ಮ ಕ್ಲಿನಿಕ್‌ಗಳು ನಗರ ಪ್ರದೇಶದ ಬಡ, ದುರ್ಬಲ ವರ್ಗದ ಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸುತ್ತಿವೆ. ನಗರ ಪ್ರದೇಶ ವ್ಯಾಪ್ತಿಯಲ್ಲಿ 438 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ನಗರ ಪ್ರದೇಶದ ಬಡವರು, ಕೂಲಿ ಕಾರ್ಮಿಕರು, ದಿನಗೂಲಿ ನೌಕರರಿಗೆ ಇದು ಸಂಜೀವಿನಿಯಾಗಲಿದೆ' ಎಂದು ತಿಳಿಸಿದ್ದಾರೆ.

243 ಕ್ಲಿನಿಕ್: 'ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ಪ್ರತಿ 50 ಸಾವಿರ ಜನಸಂಖ್ಯೆಗೆ ಒಂದರಂತೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚುವರಿಯಾಗಿ 15ನೇ ಹಣಕಾಸು ಆಯೋಗದ ಅನುದಾನದಡಿ ರಾಜ್ಯದಾದ್ಯಂತ ನಗರ ಪ್ರದೇಶಗಳಲ್ಲಿ 15 ಸಾವಿರದಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ನಮ್ಮ ಕ್ಲಿನಿಕ್‌ಗಳನ್ನು ತೆರೆಯಲಾಗುತ್ತಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 243 ಮತ್ತು ಉಳಿದ ಜಿಲ್ಲೆಗಳಲ್ಲಿ 195 ನಮ್ಮ ಕ್ಲಿನಿಕ್‌ಗಳನ್ನು ಸ್ಥಾಪಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದ್ದಾರೆ.

'ನಮ್ಮ ಕ್ಲಿನಿಕ್‌ಗಳಲ್ಲಿ ಉತ್ತಮ ಗುಣಮಟ್ಟದ ಮತ್ತು ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ. ರೆಫರಲ್ ಸೇವೆಗಳನ್ನು ಒದಗಿಸುವ ಮುಖಾಂತರ ದ್ವಿತೀಯ ಮತ್ತು ತೃತೀಯ ಹಂತದ ಆಸ್ಪತ್ರೆಗಳಿಗೂ ಇವು ಸಂಪರ್ಕ ಕಲ್ಪಿಸುತ್ತಿವೆ. ಆರೋಗ್ಯ ಸೇವೆಗಳನ್ನು ಪಡೆಯಲು ತಗಲುವ ವೆಚ್ಚವನ್ನು ಕಡಿಮೆ ಮಾಡಲು ಸಹಕಾರಿಯಾಗಲಿದೆ. ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ವಿಕೇಂದ್ರೀಕರಿಸಲಾಗುತ್ತಿದೆ' ಎಂದು ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ವಾರದಲ್ಲಿ 6 ದಿನ ಸೇವೆ

'ನಮ್ಮ ಕ್ಲಿನಿಕ್‌ಗಳು ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 9 ಗಂಟೆಯಿಂದ ಸಂಜೆ 4.30ರವರೆಗೆ ಕಾರ್ಯನಿರ್ವಹಿಸಲಿವೆ. ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ನಿರೀಕ್ಷಣಾ ಸ್ಥಳ, ಹೊರ ರೋಗಿಗಳ ತಪಾಸಣೆ ಕೊಠಡಿ, ಚುಚ್ಚು ಮದ್ದು ನೀಡುವ ಕೊಠಡಿ, ಪ್ರಯೋಗಶಾಲೆ, ಯೋಗ, ಔಷಧ ದಾಸ್ತಾನು ಮತ್ತು ವಿತರಣಾ ಕೊಠಡಿ, ಆಡಳಿತ ಕಚೇರಿ ಸೇರಿ ವಿವಿಧ ಕೊಠಡಿಗಳಿವೆ. ಆಸ್ಪತ್ರೆ ಸಿಬ್ಬಂದಿ, ಮಹಿಳಾ ಮತ್ತು ಪುರುಷ ರೋಗಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

ಕೆಂಪೇಗೌಡ ಬಡಾವಣೆ: 10 ಪ್ರಕರಣ ವಾಪಸ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಭೂಸ್ವಾಧೀನ ಪ್ರಕರಣದಲ್ಲಿ ನ್ಯಾಯಾಲಯದ ಮೆಟ್ಟಿಲೇರಿದ್ದ 10ಕ್ಕೂ ಹೆಚ್ಚು ಜನರು ಪ್ರಕರಣ ವಾಪಸ್ ಪಡೆಯಲು ಮುಂದಾಗಿದ್ದಾರೆ ಎಂದು ಬಿಡಿಎ ಆಯುಕ್ತ ಕುಮಾರ ನಾಯಕ್ ಹೇಳಿದರು.

'ಭೂಸ್ವಾಧೀನ ಪ್ರಕರಣದಲ್ಲಿ 60:40 ಅನುಪಾತದಲ್ಲಿ ನಿವೇಶನ ಅಥವಾ ಪರಿಹಾರವನ್ನು ಪಡೆಯಲು ಕೆಲವರು ಒಪ್ಪಿದ್ದು, ಸುಮಾರು 25 ಎಕರೆ ಭೂಮಿಯನ್ನು ಈ ಪ್ರಕ್ರಿಯೆಯಲ್ಲಿ ತೀರ್ಮಾನಗೊಳಿಸಲಾಗುತ್ತಿದೆ' ಎಂದು ತಿಳಿಸಿದರು.

'ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ 4,041 ಎಕರೆ ಭೂಮಿಯನ್ನು ಅಧಿಸೂಚಿಸಲಾಗಿದೆ. 2,800 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಚಂದ್ರಶೇಖರಯ್ಯ, ನಂಜುಂಡೇಶ್, ಮರಿಯಮ್ಮ, ನರಸಮ್ಮ, ರಾಜಣ್ಣ, ದಾಸೇಗೌಡ ಅವರು ನ್ಯಾಯಾಲಯದಲ್ಲಿರುವ ಪ್ರಕರಣವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಿದ್ದಾರೆ. ಅವರಿಗೆ ಬಿಡಿಎ ನಿಯಮಾವಳಿಯಂತೆ ಪರಿಹಾರ ಕಲ್ಪಿಸಲಾಗುತ್ತದೆ' ಎಂದರು.

'ಜನರು ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ವಾಪಸ್ ಪಡೆದರೆ ಪರಿಹಾರವನ್ನು ಶೀಘ್ರ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಜೊತೆಗೆ, ಬಡಾವಣೆ ರಚನೆಗೂ ವೇಗ ಸಿಕ್ಕಿ ಸಾರ್ವಜನಿಕರಿಗೆ ಸಾಕಷ್ಟು ಅನುಕೂಲವಾಗುತ್ತದೆ' ಎಂದು ಕುಮಾರ ನಾಯಕ್ ಹೇಳಿದರು.

ಅಗಲಿದ ಕವಿಯನ್ನು ಸ್ಮರಿಸಿದ ಆಪ್ತರು, ಒಡನಾಡಿಗಳು

'ಪುರಸ್ಕಾರ ಬಯಸದ ತಿರುಮಲೇಶ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆ.ವಿ. ತಿರುಮಲೇಶ್ ಅವರು ಪ್ರಶಸ್ತಿ, ಪುರಸ್ಕಾರ ಬಯಸಿದವರಲ್ಲ. ಆದರೆ, ತಾನು ಮಾಡುತ್ತಿರುವ ಕನ್ನಡದ ಕೆಲಸಗಳಿಗೆ ಅಷ್ಟಾಗಿ ಪ್ರತಿಕ್ರಿಯೆ ಬರುತ್ತಿಲ್ಲ ಎಂಬ ಬೇಸರ ಅವರಿಗಿತ್ತು' ಎಂದು ಅವರ ಒಡನಾಡಿಗಳು ಹಾಗೂ ಆಪ್ತರು ಸ್ಮರಿಸಿಕೊಂಡರು.

ಬಹುವಚನ ನಗರದಲ್ಲಿ ಭಾನುವಾರ ಆಯೋಜಿಸಿದ್ದ 'ತಿರುಮಲೇಶ್ ನೆನಪು' ಕಾರ್ಯಕ್ರಮದಲ್ಲಿ ಎಂ.ಎಸ್. ಶ್ರೀರಾಮ್, ಜಯಂತ ಕಾಯ್ಕಿಣಿ, ಪ್ರತಿಭಾ ನಂದಕುಮಾರ್, ವಿವೇಕ ಶಾನಭಾಗ, ಮಮತಾ ಸಾಗರ್, ಅಭಿನವ ರವಿಕುಮಾರ್ ಹಾಗೂ ಮಂಜುನಾಥ ಕಲ್ಲೇದೇವರ್ ಅವರು ತಿರುಮಲೇಶ್ ಅವರ ಸಾಹಿತ್ಯಿಕ ಮತ್ತು ವಿದ್ವತ್‌ಪೂರ್ಣ ಪ್ರತಿಭೆಯನ್ನು ಕೊಂಡಾಡಿದರು . ಅವರ ಕವಿತೆಗಳನ್ನೂ ವಾಚಿಸಲಾಯಿತು.

'ಕಾವ್ಯ, ಕತೆ, ಕಾದಂಬರಿಗಳಲ್ಲದೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ತಿರುಮಲೇಶ್ ಅವರು ಕೆಲಸ ಮಾಡಿದ್ದಾರೆ. ಹೊಸ ತಲೆಮಾರಿನವರು ಅವರನ್ನು ಓದಬೇಕು. ಹೀಗಾಗಿ, ಅವರ ಕಾವ್ಯವನ್ನು ಯುವಸಮೂಹಕ್ಕೆ ತಲುಪಿಸುವ ಕೆಲಸ ಮಾಡಬೇಕು. ಅವರ ಕವಿತೆಗಳ ಓದು ಅಗತ್ಯ' ಎಂದು ಜಯಂತ ಕಾಯ್ಕಿಣಿ ಹೇಳಿದರು.

ಮೋಟಾರ್ ಸೈಕಲ್ ಭಯ: ಎಂ.ಎಸ್. ಶ್ರೀರಾಮ್, 'ತಿರುಮಲೇಶ್ ಅವರು ಎಲ್ಲರಿಗೂ ಲಭ್ಯರಾಗುತ್ತಿದ್ದರು. ಅವರು 30 ವರ್ಷದ ಹಿಂದೆ ಮೋಟಾರ್ ಸೈಕಲ್‌ನಿಂದ ಬಿದ್ದಿದ್ದರು. ಇದರಿಂದಾಗಿ ಅವರು ಕೊನೆಯವರೆಗೂ ಮೋಟಾರ್ ಸೈಕಲ್‌ನಿಂದ ಅಂತರ ಕಾಯ್ದುಕೊಂಡರು. ವೈದ್ಯರ ಬಗ್ಗೆ ಕಿರಿಕಿರಿ ಭಾವವಿತ್ತು. ಪ್ರಶಸ್ತಿ, ಸನ್ಮಾನದ ಬಗ್ಗೆ ಚಿಂತಿಸಿರಲಿಲ್ಲ' ಎಂದರು.

ವಿವೇಕ ಶಾನಭಾಗ, 'ತಿರುಮಲೇಶ್ ಅವರು ಹೈದರಾಬಾದ್‌ನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲಿಷ್ ಆ್ಯಂಡ್ ಫಾರಿನ್ ಲಾಂಗ್ವೇಜಸ್ ಸಂಸ್ಥೆಯಲ್ಲಿ ಅತ್ಯುತ್ತಮ ಕೆಲಸಗಳನ್ನು ಮಾಡಿದ್ದಾರೆ. ಅಕ್ಷಯ ಕಾವ್ಯ, ಅರಬ್ಬಿ, ಪಾಪಿಯೂ, ಮುಖವಾಡಗಳು, ವಠಾರ ಸೇರಿ ಹಲವು ಕವನ ಸಂಕಲನ ಹೊರತಂದಿದ್ದಾರೆ. ಹೊಸ ಕವಿಗಳು ಅವರನ್ನು ಅಷ್ಟಾಗಿ ಓದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಅಭಿನವ ರವಿಕುಮಾರ್, 'ತಿರುಮಲೇಶ್ ಅವರು ಬರೆಯುವ ವೇಗಕ್ಕೆ ಪ್ರಕಟಣೆ ಕಷ್ಟವಾಗುತ್ತಿತ್ತು. ತನ್ನಿಂದ ತಪ್ಪಾಗಿದ್ದಲ್ಲಿ ಕೂಡಲೇ ಕ್ಷಮೆ ಕೇಳುತ್ತಿದ್ದರು' ಎಂದು ಸ್ಮರಿಸಿಕೊಂಡರು.



'ತಿರುಮಲೇಶ್ ನೆನಪು' ಕಾರ್ಯಕ್ರಮದಲ್ಲಿ ಎಂ.ಎಸ್. ಶ್ರೀರಾಮ್ ಮಾತನಾಡಿದರು. – ಪ್ರಜಾವಾಣಿ ಚಿತ್ರ

ಕೆ.ಶಿವರಾಮು ಅಭಿಮಾನಿ ಬಳಗದಿಂದ ಉದ್ಯೋಗ ಮೇಳ

ಪ್ರಜಾವಾಣಿ ವಾರ್ತೆ

ಆನೇಕಲ್: ನಿರುದ್ಯೋಗಿ ಯುವ ಜನತೆಗೆ ಅಗತ್ಯ ಉದ್ಯೋಗ ಕೌಶಲ, ಮಾರ್ಗದರ್ಶನ ಮತ್ತು ಉದ್ಯೋಗ ಅವಕಾಶ ಕಲ್ಪಿಸಿಕೊಡುವ ಮಹತ್ವದ ಉದ್ದೇಶದಿಂದ ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮು ಅಭಿಮಾನಿಗಳ ಬಳಗ ಭಾನುವಾರ ಪಟ್ಟಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿತ್ತು.

ಉದ್ಯೋಗ ಮೇಳದಲ್ಲಿ ಮೂರು ಸಾವಿರ ಮಂದಿ ಯುವಕರು ನೊಂದಣಿ ಮಾಡಿಕೊಂಡಿದ್ದರು. ಈ ಪೈಕಿ 512 ಮಂದಿಗೆ ಸ್ಥಳದಲ್ಲೇ ಉದ್ಯೋಗ ಪತ್ರ ನೀಡಲಾಗಿದೆ. 1130 ಮಂದಿ ಅರ್ಹ ಅಭ್ಯರ್ಥಿಗಳನ್ನು ಗುರುತಿಸಿ, ಅಂತಿಮ ಸಂದರ್ಶನದ ಬಳಿಕ ಉದ್ಯೋಗ ನೀಡಲು ತೀರ್ಮಾನಿಸಲಾಗಿದೆ ಎಂದು ಆಯೋಜಕರು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಯುವ ಸಮುದಾಯವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಆನೇಕಲ್ ಮತ್ತು ಬೊಮ್ಮಸಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಶಿಬಿರ ಆಯೋಜಿಸಲಾಗಿತ್ತು. ನುರಿತ ತಜ್ಞರಿಂದ ಉಪನ್ಯಾಸ, ಮಾರ್ಗದರ್ಶನ ಶಿಬಿರ ಏರ್ಪಡಿಸಲಾಗಿತ್ತು.

ಕೋವಿಡ್‌ನಿಂದಾಗಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಉದ್ಯೋಗ ಪಡೆಯುವುದು ಸವಾಲಾಗಿದೆ. ಉದ್ಯೋಗ ಪಡೆಯಲು ಕೌಶಲ, ದಕ್ಷತೆ, ಸಂವಹನ ಕೌಶಲ ಅಗತ್ಯ. ಇವುಗಳನ್ನು ಸಾಧಿಸಲು ವಿದ್ಯಾರ್ಥಿಗಳು ತರಬೇತಿಯನ್ನು ಪಡೆಯಬೇಕು ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮು ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಣದ ನಂತರ ಭವಿಷ್ಯವನ್ನು ಕಟ್ಟಿಕೊಳ್ಳಲು ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ಅಗತ್ಯ ಇದೆ. ಹಾಗಾಗಿ ಈ ಮೇಳ ಆಯೋಜಿಸಲಾಗಿದೆ. ಪ್ರತಿ ವರ್ಷ ಉದ್ಯೋಗ ಮೇಳ ಆಯೋಜಿಸುವ ಉದ್ದೇಶವಿದೆ ಎಂದು ಅವರು ತಿಳಿಸಿದರು.

ಆನೇಕಲ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕೇಂದ್ರ ಆರಂಭಿಸಲಾಗಿದ್ದು, ಯುವಕರಿಗೆ ಅಗತ್ಯ ಮಾರ್ಗದರ್ಶನ ಮತ್ತು ಗ್ರಂಥಾಲಯ ಸೌಲಭ್ಯ ಒದಗಿಸಲಾಗುವುದು ಎಂದು ಅವರು ಹೇಳಿದರು.

ಉದ್ಯೋಗ ಮೇಳ ಉದ್ಘಾಟಿಸಿದ ಕಿಯೋನಿಕ್ಸ್ ಮಾಜಿ ಅಧ್ಯಕ್ಷ ಎಂ.ಯಂಗಾರೆಡ್ಡಿ, ತಾಲ್ಲೂಕಿನಲ್ಲಿ ಐದು ಕೈಗಾರಿಕ ಪ್ರದೇಶ ಮತ್ತು ಹೇರಳ ಉದ್ಯೋಗ ಅವಕಾಶ ಇದ್ದರೂ ಸಂವಹನ ಮತ್ತು ಕೌಶಲ ಕೊರತೆಯಿಂದ ಅರ್ಹತೆಗೆ ತಕ್ಕಂತೆ ಉದ್ಯೋಗ ಪಡೆಯಲು ಯುವಕರು ವಿಫಲರಾಗಿದ್ದಾರೆ. ಯುವ ಜನತೆ ಸಂವಹನ ಮತ್ತು ಕೌಶಲದ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೆ ಉದ್ಯೋಗ ಮೇಳ ಪರಿಹಾರ ಒದಗಿಸಲಿದೆ ಎಂದು ಶ್ಲಾಘಿಸಿದರು.

'ರ‍್ಯಾಲಿಗೆ ವಿದ್ಯಾರ್ಥಿಗಳು ಬೇಡ'

ಬೆಂಗಳೂರು: 'ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ರಾಜಕೀಯ ಉದ್ದೇಶ ಕಾರ್ಯಕ್ರಮಕ್ಕೆ ಬಳಸಿ ಕೊಳ್ಳಲು ಸರ್ಕಾರ ಮುಂದಾಗಿದೆ' ಎಂದು ಎಐಡಿಎಸ್‌ಒ ಜಿಲ್ಲಾ ಸಮಿತಿ ಜಿಲ್ಲಾ ಕಾರ್ಯದರ್ಶಿ ವಿ. ಕಲ್ಯಾಣ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'1,500 ವಿದ್ಯಾರ್ಥಿಗಳನ್ನು ಇಂಡಿಯಾ ಎನರ್ಜಿ ವೀಕ್ ರ‍್ಯಾಲಿಗೆ ಕಳುಹಿಸಬೇಕೆಂದು ಸರ್ಕಾರವು ನಿರ್ದೇಶನ ನೀಡಿದೆ. ಇದು ಸರಿಯಲ್ಲ' ಎಂದು ಅವರು ಹೇಳಿದ್ದಾರೆ.

'ನಪುಂಸಕ ಅರ್ಥ –ಸೋತ ಸಾಹಿತ್ಯ ಲೋಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಪುಂಸಕ ಎಂದರೆ ಜಡವಸ್ತುವೇ ಹೊರತು ಜೀವ ಅಥವಾ ಸಮುದಾಯ ಆಗಲು ಸಾಧ್ಯವೇ ಇಲ್ಲ. ಈ ಪದದ ಅರ್ಥ ಅರಿಯುವಲ್ಲಿ ಸಾಹಿತ್ಯ ಲೋಕ ಸೋತಿದೆ' ಎಂದು ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಬೇಸರ ವ್ಯಕ್ತಪಡಿಸಿದರು.

'ಅಕ್ಷರ ಚಪ್ಪರ' ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯು 2ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ 'ಅಕ್ಷರೋತ್ಸವ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

'ಪುಲ್ಲಿಂಗ ಎಂದರೆ ಗಂಡು, ಸ್ತ್ರೀಲಿಂಗ ಎಂದರೆ ಹೆಣ್ಣು ಮತ್ತು ಉಳಿದವರು ನಪುಂಸಕ ಲಿಂಗ ಎಂದು ಕರೆಯಲಾಗಿದೆ. 'ನಪುಂಸಕ' ಎಂಬ ಪದದ ಬಗ್ಗೆ ಸಾಹಿತ್ಯ ವೇದಿಕೆಗಳಲ್ಲಿ ಚರ್ಚೆಯಾಗಬೇಕಿದೆ. ಲಿಂಗತ್ವ ಅಲ್ಪಸಂಖ್ಯಾತರ ಪರಂಪರೆ, ಸಾಂಸ್ಕೃತಿಕ ವೈವಿಧ್ಯತೆಗಳನ್ನು ತಿಳಿದುಕೊಳ್ಳುವಲ್ಲಿ ಇಡೀ ಸಾಹಿತ್ಯ ರಂಗವೇ ಸೋತಿದೆ' ಎಂದರು.



'ಅಕ್ಷರ ಚಪ್ಪರ' ಸಂಸ್ಥೆಯ ಮುದ್ರಣ ಮತ್ತು ಪ್ರಕಾಶನದ ಲಾಂಛನವನ್ನು ಲೇಖಕ ಎಸ್‌.ಎಂ.ನಟರಾಜ್ (ಎಡದಿಂದ ಮೊದಲನೆಯವರು) ಅವರು ಬಿಡುಗಡೆ ಮಾಡಿದರು. ಲೇಖಕಿ ಸುಜಾತ ರವೀಶ್, ಕವಿ ಬಿ.ಆರ್‌.ಲಕ್ಷ್ಮಣರಾವ್, ಅಕ್ಕೈ ಪದ್ಮಶಾಲಿ, ಲೇಖಕ ಕೆ.ರಾಜಕುಮಾರ, ಅಕ್ಷರ ಚಪ್ಪರ ಸಂಸ್ಥೆಯ ಅಧ್ಯಕ್ಷೆ ಮಧು ಅಕ್ಷರಿ ಇದ್ದರು – ಪ್ರಜಾವಾಣಿ ಚಿತ್ರ

'ಒಂದು ಸಮುದಾಯವನ್ನು ಸಮಾಜದಿಂದ ತಿರಸ್ಕರಿಸುವುದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ನಡೆ. ಎಲ್ಲವನ್ನೂ ಒಪ್ಪಿಕೊಳ್ಳುವುದೇ ಸಾಮಾಜಿಕ ನ್ಯಾಯ' ಎಂದು ಪ್ರತಿಪಾದಿಸಿದರು.

'ಭಾರತ ಅತಿದೊಡ್ಡ ಪ್ರಜಾತಂತ್ರ ದೇಶ. ಆದರೂ, ಪುರುಷ ಪ್ರಧಾನ ವ್ಯವಸ್ಥೆ ಮುಂದುವರಿದಿದೆ. ರಾಜ ಗಾಂಭೀರ್ಯ, ರಾಜಮಾರ್ಗ ಎಂಬ ಪದಗಳು ಈಗಲೂ ಚಾಲ್ತಿಯಲ್ಲಿವೆ. ರಾಣಿ ಗಾಂಭೀರ್ಯ, ರಾಣಿಮಾರ್ಗ ಎಂದು ಕರೆಯಬಾರದೇ' ಎಂದು ಪ್ರಶ್ನಿಸಿದರು.

'ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರ ನಡೆಸುವವರಿಗೆ ಸಾಹಿತ್ಯ ಎಂದರೇನು ಗೊತ್ತಿಲ್ಲ, ಜನಗಳ ಪದ ಗೊತ್ತಿಲ್ಲ, ವಿಶ್ಲೇಷಣೆ ಎಂದರೇನು ಎಂಬುದೂ ಗೊತ್ತಿಲ್ಲ. ಅಂಬೇಡ್ಕರ್ ವಾದದ ಅಡಿಯಲ್ಲಿ ಸರ್ಕಾರ ನಡೆಸಬೇಕು ಎಂಬುದಂತೂ ಮೊದಲೇ ಗೊತ್ತಿಲ್ಲ. ಇಂತಹ ಅನಕ್ಷರಸ್ಥ ರಾಜಕಾರಣಿಗಳಿಂದ ನಾಗರಿಕರ ಶೋಷಣೆಯಾಗುತ್ತಿದೆ' ಎಂದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಕವಿ ಬಿ.ಆರ್.ಲಕ್ಷ್ಮಣ ರಾವ್ ಮಾತನಾಡಿ, 'ಕವಿಯಾದವನಿಗೆ ಭಾಷೆ, ಬರವಣಿಗೆಯಷ್ಟೇ ಗೊತ್ತಿದ್ದರೆ ಸಾಲದು, ಸಾಹಿತ್ಯ ಪರಂಪರೆಯ ಪರಿಚಯ ಬೇಕಾಗುತ್ತದೆ' ಎಂದರು.

'ಬೇರೆ ಯಾವ ಊರಿಗೆ ಹೋದರೂ ಕನ್ನಡಕ್ಕೆ ಅಪಾಯವಿದೆ ಎನ್ನಿಸುವುದಿಲ್ಲ. ಬೆಂಗಳೂರಿನಲ್ಲಿ ಮಾತ್ರ ಈ ಅಪಾಯ ಕಾಡುತ್ತಿದೆ. ಶೇ 20ರಿಂದ ಶೇ 30ರಷ್ಟು ಮಾತ್ರ ಕನ್ನಡಿಗರಿದ್ದಾರೆ. ಇಲ್ಲಿ ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಕೆಲಸ ಆಗಬೇಕಿದೆ. ಈ ಕೆಲಸವನ್ನು 'ಅಕ್ಷರ ಚಪ್ಪರ' ಸಂಸ್ಥೆ ಮಾಡಲು ಹೊರಟಿರುವುದು ಸಂತಸದ ವಿಷಯ ಎಂದು ಹೇಳಿದರು.

ದಾಸರಹಳ್ಳಿ ಕ್ಷೇತ್ರ: ಜೆಡಿಎಸ್ ಪಂಚರತ್ನ ಯಾತ್ರೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ಪಂಚರತ್ನ ರಥಯಾತ್ರೆ ನಡೆಯಿತು. ಲಕ್ಷ್ಮೀಪುರದಿಂದ ಆರಂಭವಾದ ಯಾತ್ರೆ ಸುಂಕದಕಟ್ಟೆ ತನಕ ಸಾವಿರಾರು ಜನರೊಂದಿಗೆ ಸಂಚರಿಸಿತು.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ‘ನಾಡಿನ ಪ್ರತಿ ಕುಟುಂಬಗಳು ನೆಮ್ಮದಿಯಿಂದ ಜೀವನ ಮಾಡಲು ಪಂಚರತ್ನ ಯೋಜನೆಗಳನ್ನು ರೂಪಿಸಲಾಗಿದೆ. ಸಾಲಗಾರರಾಗದೆ ಸಣ್ಣಪುಟ್ಟ ಅಂಗಡಿಯಲ್ಲಿ ಹಣ್ಣು, ತರಕಾರಿ, ಹೂ ಕಟ್ಟುವವರು, ಬೀದಿಬದಿ ವ್ಯಾಪಾರ ಮಾಡುವವರು ಖಾಸಗಿಯವರ ಬಳಿ ಬಡ್ಡಿಗೆ ಸಾಲ ಪಡೆಯಬೇಕಾಗಿಲ್ಲ. ಜೆಡಿಎಸ್ ಅಧಿಕಾರಕ್ಕೆ ಬಂದರೆ ನಿಮಗೆ ಉಚಿತವಾಗಿ ಸರ್ಕಾರದ ಸೌಲಭ್ಯಗಳು ಸಿಗಲಿವೆ’ ಎಂದು ಹೇಳಿದರು.



ಪಂಚರತ್ನ ರಥಯಾತ್ರೆಯಲ್ಲಿ ಎಚ್. ಡಿ. ಕುಮಾರಸ್ವಾಮಿ ಮಾತನಾಡಿದರು. ಶಾಸಕ ಆರ್. ಮಂಜುನಾಥ್, ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ. ಮುನಿಸ್ವಾಮಿ, ಕಾರ್ಯಾಧ್ಯಕ್ಷ ಮುನೇಗೌಡ, ಮುಖಂಡರಾದ ಅಂದಾನಪ್ಪ, ಬಿ.ಎನ್. ಜಗದೀಶ್ ಮುಂತಾದವರಿದ್ದರು

‘ಯುವಕರಿಗೆ ಉದ್ಯೋಗ, ಪ್ರತಿಯೊಬ್ಬರಿಗೂ ಸೂರು, ಮಹಿಳೆಯರ ಸಬಲೀಕರಣ, ಉತ್ತಮ ಶಿಕ್ಷಣ, ಅತ್ಯಾಧುನಿಕ ಆಸ್ಪತ್ರೆ ಸೇರಿ ಸಕಲ ಸೌಲಭ್ಯಗಳು ಸಿಗಲಿವೆ. ನನಗೆ ಐದು ವರ್ಷ ಅಧಿಕಾರ ಕೊಟ್ಟರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕಲಿದೆ’ ಎಂದು ತಿಳಿಸಿದರು.

ಬೆಂಗಳೂರು ನಗರದಲ್ಲಿ 8ರಿಂದ 10 ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವು ಸಾಧಿಸಬೇಕಿದೆ. ಮಾರ್ಚ್‌ನಲ್ಲಿ ಹಾಸನ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಪಂಚರತ್ನ ರಥಯಾತ್ರೆ ಕೈಗೊಳ್ಳಲಾಗುವುದು. ಮಾರ್ಚ್ 20 ಅಥವಾ 25ಕ್ಕೆ ಯಾತ್ರೆಯ ಸಮಾರೋಪ ದೊಡ್ಡ ಮಟ್ಟದಲ್ಲಿ ನಡೆಯಲಿದೆ. ಶಿವರಾತ್ರಿ ಹಬ್ಬದಂದು ಯಾತ್ರೆಗೆ ಬಿಡುವು ಕೊಡಲಿದ್ದು, ಈ ತಿಂಗಳ 27ರವರೆಗೂ ನಿರಂತರವಾಗಿ ಯಾತ್ರೆ ನಡೆಯಲಿದೆ ಎಂದು ಹೇಳಿದರು.

ಶಾಸಕ ಆರ್ ಮಂಜುನಾಥ್ ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ಬಿಜೆಪಿ ಅಡ್ಡಗಾಲು ಹಾಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಂಚರತ್ನ ರಥಯಾತ್ರೆ ಕ್ಷೇತ್ರದ ಲಕ್ಷ್ಮೀಪುರದಿಂದ ಹೊರಟು ಕಮ್ಮಗೊಂಡನಹಳ್ಳಿ, ಚಿಕ್ಕಬಾಣಾವರ ಸಂತೆ ಬೀದಿ, ಚಿಕ್ಕಸಂದ್ರ, ಬಾಗಲಗುಂಟೆ, ದಾಸರಹಳ್ಳಿ ಮೆಟ್ರೊ ರೈಲು ನಿಲ್ದಾಣ, ಚೊಕ್ಕಸಂದ್ರ, ರಾಜಗೋಪಾಲ್ ನಗರ, ಪೀಣ್ಯ 2ನೇ ಹಂತ, ಹೆಗ್ಗನಹಳ್ಳಿ ಮೂಲಕ ಸುಂಕದಕಟ್ಟೆ ತನಕ ತೆರಳಿತು.

ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ. ಮುನಿಸ್ವಾಮಿ, ಕಾರ್ಯಾಧ್ಯಕ್ಷ ಮುನೇಗೌಡ, ಜೆಡಿಎಸ್ ಮುಖಂಡ ಬಿ.ಎನ್. ಜಗದೀಶ್, ಚರಣಗೌಡ, ಅಂದಾನಪ್ಪ, ನರಸಿಂಹಮೂರ್ತಿ ಹಾಗೂ ಮುಂತಾದವರು ಇದ್ದರು.

8–10 ಬಿಜೆಪಿ ಸಂಸದರ ಸ್ಪರ್ಧೆ ಇಲ್ಲ: ಡಿಕೆಶಿ

ಕನಕಪುರ: ಸರ್ಕಾರದಲ್ಲಿ ರಾಜ್ಯದ ಪರವಾಗಿ ಧ್ವನಿ ಎತ್ತಲು ಸಾಧ್ಯವಾಗದ ಬಿಜೆಪಿಯ ಸಂಸದರು ಒಳಗೊಳಗೆ ಭಾರಿ ಅವಮಾನ ಎದುರಿಸುತ್ತಿದ್ದಾರೆ. ಹಾಗಾಗಿ ಈ ಬಾರಿ ಎಂಟರಿಂದ ಹತ್ತು ಬಿಜೆಪಿ ಸಂಸದರು ಲೋಕಸಭಾ ಚುನಾವಣೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

‘ಈ ಸರ್ಕಾರದಲ್ಲಿ ಮಾತನಾಡಲು ನಮಗೆ ಧ್ವನಿ ಇಲ್ಲ ಎಂದು ಬಿಜೆಪಿ ಸಂಸದರು ನನ್ನ ಬಳಿ ನೋವು ತೋಡಿಕೊಂಡಿದ್ದಾರೆ. ಸದ್ಯಕ್ಕೆ ಅವರ ಹೆಸರು ಬೇಡ. ಆ ಸಂಸದರ ಯಾರು ಎಂಬ ಮಾಹಿತಿಯನ್ನು ಮುಂದೊಂದು ದಿನ ಬಹಿರಂಗ ಪಡಿಸುತ್ತೇನೆ’ ಎಂದರು.

ಡಬಲ್ ಇಂಜಿನ್ ಸರ್ಕಾರದಲ್ಲಿ ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಒಪ್ಪಿಗೆ ಪಡೆಯಲು ರಾಜ್ಯದ ಬಿಜೆಪಿ ಸಂಸದರಿಂದ ಸಾಧ್ಯವಾಗಿಲ್ಲ. ಹಾಗಾಗಿ ಅವರು ಚುನಾವಣೆಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ ಎಂದರು.

‘ಹಾಸ್ಯ ನೈಸರ್ಗಿಕ ಔಷಧಿ: ನಗು ಜಾಗತಿಕ ಭಾಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸದಾ ಒತ್ತಡದ ಜೀವನ ಮತ್ತು ದೈನಂದಿನ ಜಂಜಾಟಗಳಿಂದ ನಾವು ಮುಕ್ತವಾಗಿ ನಗುವುದನ್ನೇ ಮರೆತಿದ್ದೇವೆ’ ಎಂದು ಹಾಸ್ಯ ಸಾಹಿತಿ ಚೂಟಿ ಚಿದಾನಂದ ಅವರು ಹೇಳಿದರು.

ಸಂಜಯ ನಗರದ ಶರಣ ಸೇವಾ ಸಮಿತಿ ಈಚೆಗೆ ಹಮ್ಮಿಕೊಂಡಿದ್ದ ‘ಶರಣ ಜ್ಯೋತಿ’ ಮಾಸಿಕ ಕಾರ್ಯಕ್ರಮದಲ್ಲಿ ‘ಜೀವನದಲ್ಲಿ ಹಾಸ್ಯ’ ಎಂಬ ವಿಷಯದ ಕುರಿತು ಮಾತನಾಡಿದ ಅವರು, ಹಾಸ್ಯವನ್ನು ಆಸ್ವಾದಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

‘ನಗು ಜಾಗತಿಕ ಭಾಷೆ. ಆದರೆ, ನಾವು ನಗುವುದನ್ನು ಮರೆತ ಕಾರಣ ಜೀವನ ಜಟಿಲವಾಗುತ್ತಿದೆ. ಮಾನಸಿಕ ಮತ್ತು ಆರೋಗ್ಯ ಸಮಸ್ಯೆ ಗಂಭೀರವಾಗುತ್ತಿವೆ. ಮಾನಸಿಕ ಒತ್ತಡ ನಿವಾರಿಸಲು ಹಾಸ್ಯ ಉಚಿತವಾಗಿ ಸಿಗುವ ನೈಸರ್ಗಿಕ ಔಷಧ. ನವಿರಾದ ಒಳ್ಳೆಯ ಅಭಿರುಚಿಯ ಹಾಸ್ಯ ಮನಸ್ಸನ್ನು ಸದಾ ಉಲ್ಲಸಿತ ಮತ್ತು ಪ್ರಫುಲ್ಲವಾಗಿಡುತ್ತದೆ’ ಎಂದು ಹೇಳಿದರು.



ಬೆಂಗಳೂರಿನ ಸಂಜಯ ನಗರದ ಶರಣ ಸೇವಾ ಸಮಿತಿ ಈಚೆಗೆ ಹಮ್ಮಿಕೊಂಡಿದ್ದ ‘ಶರಣ ಜ್ಯೋತಿ’ ಮಾಸಿಕ ಕಾರ್ಯಕ್ರಮದಲ್ಲಿ ಹಾಸ್ಯ ಸಾಹಿತಿ ಚೂಟಿ ಚಿದಾನಂದ ಮಾತನಾಡಿದರು. ಹಸಿರು ನ್ಯಾಯಪೀಠದ ಅಧ್ಯಕ್ಷ ನ್ಯಾ.ಸುಭಾಷ್ ಬಿ.ಆಡಿ ಮತ್ತು ಸಹಕಾರ ಸಂಘಗಳ ಅಧ್ಯಕ್ಷ ಶ್ರೀಧರ್ ನೀಲಕಂಠರಾವ್ ಇದ್ದರು

ಹಸಿರು ನ್ಯಾಯಪೀಠದ ಅಧ್ಯಕ್ಷ ನ್ಯಾ.ಸುಭಾಷ್ ಬಿ.ಆಡಿ ಮತ್ತು ಸಹಕಾರ ಸಂಘಗಳ ಅಧ್ಯಕ್ಷ ಶ್ರೀಧರ್ ನೀಲಕಂಠರಾವ್ ಅವರನ್ನು ಇದೇ ವೇಳೆ ಸತ್ಕರಿಸಲಾಯಿತು.

ಅಕ್ಕನ ಬಳಗದ ಸದಸ್ಯರಿಂದ ವಚನ ಗಾಯನ ನಡೆಯಿತು.

ಶರಣ ಸೇವಾ ಸಮಿತಿ ಅಧ್ಯಕ್ಷ ಎಸ್.ಆರ್. ಪ್ರಸಾದ್, ಉಪಾಧ್ಯಕ್ಷ ಗಂಗಾಧರ, ಕಾರ್ಯದರ್ಶಿ ಶಿವಲಿಂಗ ಎಂ. ವೇದಿಕೆಯಲ್ಲಿದ್ದರು.

ಅನಧಿಕೃತ ಮಾರಾಟಗಾರರ ಹಾವಳಿ • ನಿಯಮ ಉಲ್ಲಂಘಿಸಿದ 25 ಮಳಿಗೆಗಳ ಬಂದ್

ಪಂಜರದಲ್ಲಿ ಪ್ರಾಣಿ–ಪಕ್ಷಿಗಳ ಸಂಕಟ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಸಾಕುಪ್ರಾಣಿಗಳ ಮಾರಾಟ ದೊಡ್ಡ ಉದ್ದಿಮೆಯಾಗಿ ಬೆಳೆದಿದ್ದು, ಅನಧಿಕೃತವಾಗಿ ನೂರಾರು ಮಾರಾಟ ಮಳಿಗೆಗಳು ಕಾರ್ಯ ನಿರ್ವಹಿಸುತ್ತಿರುವುದು ಪತ್ತೆಯಾಗಿದೆ.

ಈ ಮಳಿಗೆಗಳಲ್ಲಿ ಸಾಕುಪ್ರಾಣಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಿಲ್ಲ. ನೀರು, ಗಾಳಿ ಹಾಗೂ ಆಹಾರದ ವ್ಯವಸ್ಥೆ ಯಿಲ್ಲದೇ ಪ್ರಾಣಿ, ಪಕ್ಷಿಗಳು ಸಂಕಟ ಪಡುತ್ತಿವೆ. ಮಾರಾಟಗಾರರು ಸಾಕುಪ್ರಾಣಿಗಳನ್ನು ಬರೀ ಮಾರಾಟಕ್ಕೆ ಸೀಮಿತ ಮಾಡಿಕೊಂಡಿದ್ದು ಪ್ರಾಣಿ ಹಾಗೂ ಪಕ್ಷಿಪ್ರಿಯರ ಆತಂಕ ಹೆಚ್ಚಿಸಿದೆ.


ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ನಗರ ಪೊಲೀಸರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ಪ್ರಾಣಿ ಕಲ್ಯಾಣ ಮಂಡಳಿ ಕಾರ್ಯಕರ್ತರು ಜಂಟಿಯಾಗಿ ನಡೆಸಿದ್ದ ಕಾರ್ಯಾಚರಣೆಯಲ್ಲಿ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ನು ಉಲ್ಲಂಘಿಸಿ ಮಾರಾಟ ಹಾಗೂ ಸಂತಾನೋತ್ಪತ್ತಿ ನಡೆಸುತ್ತಿರುವುದು ಪತ್ತೆಯಾಗಿದೆ.

ಅಧಿಕಾರಿಗಳ ತಂಡವು ಮತ್ತೊಂದು ಸುತ್ತಿನ ದಾಳಿಗೆ ನಿರ್ಧರಿಸಿದ್ದು, ಅನಧಿಕೃತ ಮಳಿಗೆ ಹಾಗೂ ಕಾಯ್ದೆ ಉಲ್ಲಂಘಿಸುತ್ತಿರುವ ಮಾರಾಟಗಾರರ ಮೇಲೆ ಕ್ರಮಕ್ಕೆ ಮುಂದಾಗಿದ್ದಾರೆ. ಮೊದಲ ಹಂತದ ಕಾರ್ಯಾಚರಣೆಯಲ್ಲಿ ಅಪಾಯಕಾರಿ ಸ್ಥಿತಿಯಲ್ಲಿದ್ದ 16 ತಳಿಗಳ ಸಾವಿರಕ್ಕೂ ಹೆಚ್ಚು ಪ್ರಾಣಿ, ಪಕ್ಷಿಗಳ ರಕ್ಷಿಸಿ ರಕ್ಷಣಾ ಗೃಹದಲ್ಲಿ ಇಡಲಾಗಿತ್ತು.

‘ಹಣ ಗಳಿಕೆಯ ಉದ್ದೇಶದಿಂದ ಕಿರಿದಾದ ಪ್ರದೇಶದಲ್ಲಿ ಸಾಕುಪ್ರಾಣಿಗಳ ಮಾರಾಟ ಮಾಡಲಾಗುತ್ತಿದೆ. ಸ್ವಚ್ಛಂದವಾಗಿ ವಿಹರಿಸಬೇಕಿದ್ದ ಪ್ರಾಣಿ ಹಾಗೂ ಪಕ್ಷಿಗಳು ಗೂಡಿನಲ್ಲಿ ಒಂದೆಡೆ ಬಂಧಿಯಾಗಿವೆ. ಸಾಕುನಾಯಿ ಮಾರಾಟ, ಸಂತಾನೋತ್ಪತ್ತಿ ಕೇಂದ್ರ ನಡೆಸುವ 50 ಮಂದಿಗೆ ನೋಟಿಸ್ ಜಾರಿ ಮಾಡಲಾಗಿದೆ. ನಿಯಮ ಉಲ್ಲಂಘಿಸಿದ 25 ಮಳಿಗೆ ಬಂದ್ ಮುಚ್ಚಿಸಲಾಗಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಏನೆಲ್ಲಾ ಮಾರಾಟ?: ಆಫ್ರಿಕನ್ ಗಿಳಿಗಳು, ಲವ್ ಬರ್ಡ್ಸ್, ಗುಬ್ಬಚ್ಚಿ, ಟರ್ಕಿ, ಕಾಕ್‌ಟೈಲ್, ಕಾಜಾಣ, ಪಾರಿವಾಳಗಳು, ಮೊಲಗಳು, ಬಾತುಕೋಳಿಗಳು, ಕೋಳಿಗಳು, ದೇಶ ಹಾಗೂ ವಿದೇಶಿ ತಳಿಯ ಸಾಕು ನಾಯಿಗಳು, ಬೆಕ್ಕುಗಳನ್ನು ಈ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಅಪಾಯಕಾರಿ ಸ್ಥಳದಲ್ಲಿಟ್ಟು ಅವುಗಳ ಜೀವಕ್ಕೆ ಕುತ್ತು ತರಲಾಗುತ್ತಿದೆ ಎಂದೂ ಅವರು ಹೇಳಿದರು.

‘ಮಾರಾಟ ಮಳಿಗೆಯಲ್ಲಿ ಯಾವುದೇ ನಿಗಾ ವಹಿಸುತ್ತಿಲ್ಲ. ಪ್ರಾಣಿಗಳಿಗೆ ಹಿಂಸೆ ನೀಡಿ ಸಂತಾನೋತ್ಪತ್ತಿ ನಡೆಸಿ ಆದಾಯ ಗಳಿಸುತ್ತಿದ್ದಾರೆ. ಅವುಗಳಿಗೂ ಜೀವವಿದೆ ಎಂದು ಪರಿಗಣಿಸುತ್ತಿಲ್ಲ. ಅನಧಿಕೃತ ಮಳಿಗೆಗಳನ್ನು ಮುಚ್ಚಿಸಬೇಕು’ ಎಂದು ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘದ ಕೋರಮಂಗಲ ಘಟಕದ ಕಾರ್ಯದರ್ಶಿ ಸುನಿಲ್ ‘ಪ್ರಜಾವಾಣಿ’ಗೆ ತಿಳಿಸಿದರು.



ಮಳಿಗೆಯೊಂದರ ಪಂಜರದಲ್ಲಿ ಮಾರಾಟಕ್ಕಿಟ್ಟಿರುವ ಪಕ್ಷಿಗಳು

ಚಿಕಿತ್ಸೆ ಕೊಡಿಸದ ಮಾಲೀಕರು



ಪಂಜರಗಳನ್ನು ಪ್ರತಿದಿನ ಸ್ವಚ್ಛ ಮಾಡಬೇಕು ಎಂಬ ನಿಯಮವಿದ್ದರೂ ಅದನ್ನು ಪಾಲಿಸುತ್ತಿಲ್ಲ. ಸಾಕಷ್ಟು ಮಳಿಗೆಗಳಲ್ಲಿ ಅವುಗಳ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿಲ್ಲ. ಇದರಿಂದ ಅಕ್ಕಪಕ್ಕದ ವ್ಯಾಪಾರಸ್ಥರಿಗೂ ತೊಂದರೆ ಆಗುತ್ತಿದೆ. ಸ್ವಚ್ಛವಿಲ್ಲದ ಪಂಜರಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಪ್ರಾಣಿಗಳನ್ನು ಕೂಡಿ ಹಾಕಲಾಗುತ್ತಿದೆ. ತಾಯಿ ನಾಯಿಯಿಂದ ನಾಯಿ ಮರಿ ಬೇರ್ಪಡಿಸಿ ಪ್ರದರ್ಶನಕ್ಕೆ ಇಡಲಾಗುತ್ತಿದೆ. ಗಾಯಗೊಂಡ ಹಾಗೂ ಅಸ್ವಸ್ಥರಾಗಿರುವ ಪ್ರಾಣಿ ಪಕ್ಷಿಗಳಿಗೆ ಚಿಕಿತ್ಸೆಯನ್ನೂ ಕೊಡಿಸದೇ ಮಾರಾಟ ನಡೆಸುತ್ತಿರುವುದು ಕಂಡುಬಂದಿದೆ.

> **ಪ್ರಾಣಿ, ಪಕ್ಷಿಗಳನ್ನು ಒಂದು ಸರಕಿನಂತೆ ಮಾರಾಟ ಮಾಡಲಾಗುತ್ತಿದೆ. ಹಿಂಸಿಸಲಾಗುತ್ತಿದೆ. ಅನಧಿಕೃತ ಮಾರಾಟಗಾರರ ಮೇಲೆ ಬಿಗಿ ಕ್ರಮ ಕೈಗೊಳ್ಳಬೇಕು**
>
> **ಸುನಿಲ್,** ಕಾರ್ಯದರ್ಶಿ, ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘ, ಕೋರಮಂಗಲ

ಗುಟ್ಕಾ– ಪಾನ್ ಉಗುಳಿದ ಕಲೆ: ಮುಸುಕುಧಾರಿ ಜಾಗೃತಿ

ಬೆಂಗಳೂರು: ನಗರದ ಬಸ್ ನಿಲ್ದಾಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗುಟ್ಕಾ–ಪಾನ್ ತಿಂದು ಉಗುಳುವವರ ಸಂಖ್ಯೆ ಹೆಚ್ಚಿದ್ದು, ಈ ಬಗ್ಗೆ ಜಾಗೃತಿ ಮೂಡಿಸಲು ಮುಸುಕುಧಾರಿಯೊಬ್ಬರು ಭಾನುವಾರ ಪೋಸ್ಟರ್ ಹಿಡಿದು ಸಂಚರಿಸಿದರು.

ಮೆಜೆಸ್ಟಿಕ್ ಬಸ್ ನಿಲ್ದಾಣ, ಪಾದಚಾರಿ ಮಾರ್ಗ, ಕೆಳ ಸೇತುವೆಗಳಲ್ಲಿ ಮುಸುಕುಧಾರಿ ಸುತ್ತಾಡಿದರು. ಗುಟ್ಕಾ–ಪಾನ್ ತಿಂದವರು ಉಗುಳಿದ್ದರಿಂದ ಕಲೆಗಳು ಉಂಟಾಗಿದ್ದ ಜಾಗದಲ್ಲಿ ನಿಂತು ಫೋಟೊ ತೆಗೆಸಿಕೊಂಡರು.

‘ಲೇ, ಗುಟ್ಕಾ – ಪಾನ್ ಜಗಿದು ಎಲ್ಲೆಂದರಲ್ಲಿ ಉಗಿಬೇಡೊ ಮಂಗ್ಯಾ, ಬೆಂಗಳೂರು ನಿಮ್ಮ ಅಪ್ಪನ ಮನೆಯಲ್ಲ’ ಎಂಬ ಬರಹವುಳ್ಳ ಪೋಸ್ಟರ್ ಪ್ರದರ್ಶಿಸಿದರು. ದಾರಿಹೋಕರಿಗೆ ಸನ್ನೆ ಮಾಡಿ ನಿಲ್ಲಿಸಿ, ಗುಟ್ಕಾ–ಪಾನ್ ಕಲೆಗಳನ್ನು ತೋರಿಸಿದರು. ‘ಎಲ್ಲೆಂದರಲ್ಲಿ ಉಗುಳಬೇಡಿ’ ಎಂದು ಸನ್ನೆ ಮೂಲಕವೇ ಕೋರಿದರು.

ಬಿಳಿ ಮುಖವಾಡ ಹಾಗೂ ಮೈ ತುಂಬಾ ಕಪ್ಪು ಬಟ್ಟೆ ಧರಿಸಿದ್ದ ಮುಸುಕುಧಾರಿಯನ್ನು ಜನರು ಕುತೂಹಲದಿಂದ ವೀಕ್ಷಿಸಿದರು. ಕೆಲವರು ಮುಸುಕುಧಾರಿಗೆ ಹಸ್ತಲಾಘವ ನೀಡಿ, ಜಾಗೃತಿ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ, ಮುಸುಕುಧಾರಿ ಯಾರು ಎಂಬುದು ಜನರಿಗೆ ಗೊತ್ತಾಗಲಿಲ್ಲ.



ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಗುಟ್ಕಾ–ಪಾನ್ ಉಗುಳಿದ್ದರಿಂದ ಉಂಟಾಗಿದ್ದ ಕಲೆಗಳನ್ನು ಮುಸುಕುಧಾರಿ ತೋರಿಸಿದರು

ಅಮೆರಿಕ ವೀಸಾ: ಹೊಸ ನಿಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ವೀಸಾ ಅರ್ಜಿಗಳ ಪರಿಷ್ಕರಣೆ, ಸಂದರ್ಶನ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸುವ ಸಲುವಾಗಿ ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ಹೊಸ ನಿಯಮಗಳನ್ನು ಜಾರಿಗೆ ತಂದಿದೆ.

ಸದ್ಯ, ಅರ್ಜಿ ಸಲ್ಲಿಸಿದ ನಂತರ ವೀಸಾಕ್ಕಾಗಿ 500 ದಿನಗಳಿಗೂ ಹೆಚ್ಚಿನ ಅವಧಿಗೆ ಕಾಯಬೇಕಾಗಿದೆ. ಹೀಗಾಗಿ, ಬಾಕಿ ಉಳಿಯುವ ಅರ್ಜಿಗಳ ಸಂಖ್ಯೆ ಹೆಚ್ಚುತ್ತಿದ್ದು, ವಿದೇಶ ಪ್ರಯಾಣ ಕೈಗೊಳ್ಳುವವರು ತೊಂದರೆ ಅನುಭವಿಸುವಂತಾಗಿದೆ.

‘ಭಾರತೀಯರು ಎದುರಿಸುತ್ತಿರುವ ಈ ತೊಂದರೆಯನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ತಾವು ತೆರಳುವ ದೇಶದಲ್ಲಿರುವ ಅಮೆರಿಕದ ರಾಯಭಾರ ಅಥವಾ ಕಾನ್ಸುಲೇಟ್ ಕಚೇರಿಯಲ್ಲಿ ವೀಸಾ ಸಂದರ್ಶನ ಪ್ರಕ್ರಿಯೆ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ’ ಎಂದು ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ಭಾನುವಾರ ಹೇಳಿದೆ.



ಬಿಜೆಪಿ ಸೇರಿದ ಕಾರ್ಯಕರ್ತರನ್ನು ಸಚಿವ ವಿ.ಸೋಮಣ್ಣ ಸ್ವಾಗತಿಸಿದರು

ಬಿಜೆಪಿಗೆ ಹಲವರ ಸೇರ್ಪಡೆ

ಬೆಂಗಳೂರು: ‘ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರವು 9 ವರ್ಷ ಅಭಿವೃದ್ಧಿ ಕಂಡಿರಲಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕ್ಷೇತ್ರವು ಅಭಿವೃದ್ಧಿ ಪಥದತ್ತ ಸಾಗುತ್ತಿದೆ’ ಎಂದು ಸಚಿವ ವಿ.ಸೋಮಣ್ಣ ಹೇಳಿದರು.

ವಿವಿಧ ಕಾರ್ಯಕರ್ತರನ್ನು ಪಕ್ಷಕ್ಕೆ ಸ್ವಾಗತಿಸಿ ಅವರು ಮಾತನಾಡಿದರು.

’ಜನರಿಗೆ ದ್ರೋಹ ಮಾಡುವ ಕೆಲಸ ಮಾಡಬಾರದು. ರಾಜಕೀಯ ನಿಂತ ನೀರಲ್ಲ. ಜನರು ಅಧಿಕಾರ ಕೊಟ್ಟಾಗ ಜನರ ಸೇವೆ ಮಾಡುವ ಕೆಲಸ ಮಾಡಬೇಕು. ಈ ನಾಲ್ಕು ಮೂಕ್ಕಾಲು ವರ್ಷ ಕ್ಷೇತ್ರ ಸಾಧಿಸಿದ ಅಭಿವೃದ್ಧಿ ಸಾಧನೆ ಬಗ್ಗೆ ಚರ್ಚಿಸಲು ಎಲ್ಲರಿಗೂ ಮುಕ್ತ ಅವಕಾಶ ಇದೆ’ ಎಂದರು.

‘ಚುನಾವಣೆ ಹತ್ತಿರ ಬರುತ್ತಿದೆ. ಹಣ ಹಂಚಿ ಸುಳ್ಳು ಹೇಳುವವರು ನಿಮ್ಮ ಮುಂದೆ ಬರುತ್ತಾರೆ. ಹಣದ ಆಮಿಷ ತೋರಿಸುವವರ ಸಾಧನೆಗಳನ್ನು ಪ್ರಬುದ್ಧ ಮತದಾರರು ಕೇಳಬೇಕು. ಬಸವೇಶ್ವರ ಆದರ್ಶ ಅಳವಡಿಸಿಕೊಂಡು ಎಲ್ಲ ವರ್ಗ, ಧರ್ಮ ದವರು ಜೊತೆ ನಾನು ಬಾಳುತ್ತಿದ್ದೇನೆ’ ಎಂದು ಹೇಳಿದರು.

ಮುಖಂಡ ಡಾ.ಅರುಣ್ ಸೋಮಣ್ಣ, ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥಗೌಡ ಇದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಾರಾಯಣ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು (ಎಡದಿಂದ) ಹೋರಾಟಗಾರ ಆರೋಗ್ಯಪ್ಪ, ಶೇಷಾದ್ರಿಪುರಂ ಕಾಲೇಜಿನ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಹೋರಾಟಗಾರ ರಾಮಣ್ಣ ಕೋಡಿಹೊಸಹಳ್ಳಿ, ಫಿಲೋಮಿನ ರಾಜ್ ಅವರಿಗೆ ಪ್ರದಾನ ಮಾಡಲಾಯಿತು – ಪ್ರಜಾವಾಣಿ ಚಿತ್ರ

ಜನ್ಮ ಶತಮಾನೋತ್ಸವದಲ್ಲಿ ಸಾಧಕರಿಗೆ ದತ್ತಿ ಪುರಸ್ಕಾರ

ಜಿ.ನಾರಾಯಣರ ಪ್ರತಿಮೆ ಸ್ಥಾಪನೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಎದುರು ಮಾಜಿ ಮೇಯರ್ ಡಾ.ಜಿ. ನಾರಾಯಣ ಅವರ ಪ್ರತಿಮೆ ಸ್ಥಾಪಿಸಬೇಕು’ ಎಂದು ಜಾನಪದ ಲೋಕದ ಮಾಜಿ ಅಧ್ಯಕ್ಷ ಡಾ.ಟಿ.ತಿಮ್ಮೇಗೌಡ ಆಗ್ರಹಿಸಿದರು.

ನಗರದಲ್ಲಿ ಭಾನುವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘ ಆಯೋಜಿಸಿದ್ದ ಡಾ.ಜಿ. ನಾರಾಯಣ ಅವರ ಜನ್ಮ ಶತಮಾನೋತ್ಸವದಲ್ಲಿ ಅವರು ಮಾತನಾಡಿದರು.

‘ಸ್ವಾತಂತ್ರ್ಯ ಹೋರಾಟದಲ್ಲಿ ನಾರಾಯಣರು ಜೈಲು ಸೇರಿದ್ದರು. ದೇಶದ ಅಭಿವೃದ್ಧಿಗೆ ಶ್ರಮಿಸಿದ್ದರು. ನಿಷ್ಠೆ, ಪ್ರಾಮಾಣಿಕತೆಯಿಂದ ಬದುಕಿದ್ದ ಅವರು ಕೊನೆಯವರೆಗೂ ಯಾವುದೇ ಮಾಸಾಶನ ಪಡೆದುಕೊಳ್ಳಲಿಲ್ಲ’ ಎಂದರು.

‘ಇದುವರೆಗೆ ಆಡಳಿತ ನಡೆಸಿ ರುವ ಸರ್ಕಾರಗಳು, ಅವರನ್ನು ಕಡೆಗಣಿಸಿವೆ. ಯಾವುದೇ ರಸ್ತೆ ಹಾಗೂ ಬಡಾವಣೆಗಳಿಗೂ ಅವರ ಹೆಸರಿಟ್ಟಿಲ್ಲ. ಇದು ನೋವಿನ ಸಂಗತಿ’ ಎಂದು ಹೇಳಿದರು.

‘ರಾಜಧಾನಿ ಜನರಿಗೆ ಮೊದಲು ಕಾವೇರಿ ನೀರು ಕಲ್ಪಿಸಿದ್ದರು. ಮೇಯರ್ ಆಗಿ ನಗರದ ಸಾಕಷ್ಟು ಬಡಾವಣೆಗಳನ್ನು ಅಭಿವೃದ್ಧಿಗೊಳಿಸಿದ್ದರು. ಜತೆಗೆ, ಪಾಲಿಕೆಯ ಎದುರು ಕೆಂಪೇಗೌಡ ಅವರ ಪ್ರತಿಮೆಯನ್ನು ನಿರ್ಮಿಸಿದ್ದ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ’ ಎಂದರು.

‘ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಕನ್ನಡ ಕಾರ್ಯಕರ್ತರ ಪಡೆ ಕಟ್ಟಿಕೊಂಡು ಕನ್ನಡ ಉಳಿಸಲು ಹೋರಾಟ ನಡೆಸಿದ್ದರು. ಹೊರ ರಾಜ್ಯಗಳಲ್ಲೂ ಸಾಹಿತ್ಯ ಸಮ್ಮೇಳನ ನಡೆಸಿ, ಕನ್ನಡ ಜಾಗೃತಿ ಮೂಡಿಸಿದ್ದರು. ರಾಮನಗರದ ಜಾನಪದ ಲೋಕದ ನಿರ್ಮಾಣಕ್ಕೆ ಸರ್ಕಾರದಿಂದ ₹ 1 ಕೋಟಿ ಅನುದಾನ ತರಲು ಶ್ರಮಿಸಿದ್ದರು. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಶ್ರಮಿಸಿ ಆಡಳಿತದಲ್ಲಿ ಕನ್ನಡ ಜಾರಿಗೆ ಶ್ರಮಿಸಿದ್ದರು’ ಎಂದು ಹೇಳಿದರು.

ಧರ್ಮಗುರು ಸೈಮನ್ ಬರ್ತಲೋಮಿಯಾ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲು, ಅಖಿಲ ಕರ್ನಾಟಕ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್, ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ.ಚನ್ನೇಗೌಡ, ಜಿ.ನಾರಾಯಣ ಪ್ರತಿಷ್ಠಾನದ ಅಧ್ಯಕ್ಷ ನಾ.ಗೋಪಾಲಕೃಷ್ಣ ಇದ್ದರು.

‘ಉತ್ತಮ ಶಿಕ್ಷಣ ನೀಡಿ’

ಕೆ.ಆರ್.ಪುರ: ‘ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸಬೇಕು’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ಗೆದ್ದಲಹಳ್ಳಿಯ ಪ್ರೆಸ್ಟೀಜ್ ಶಾಲೆಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

‘ಹಿಂದಿನ ಕಾಲದಲ್ಲಿನ ಮೌಲ್ಯವಾದ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸುತ್ತಿದ್ದರು. ಈಗ ಮಕ್ಕಳಿಗೆ ಮನೆಪಾಠ ತರಗತಿಯ ಪಾಠಗಳು ಹಾಗೂ ಮೊಬೈಲ್, ಟಿವಿಯಿಂದ ಮಕ್ಕಳಿಗೆ ಹೆಚ್ಚಿನ ಮಾನಸಿಕ ಒತ್ತಡದ ಹೊರೆಯಾಗುತ್ತಿದೆ. ಶಿಕ್ಷಣಕ್ಕೆ ಎಷ್ಟು ಅವಶ್ಯವಿದೆಯೊ ಅಷ್ಟನ್ನೇ ಶಿಕ್ಷಣ ಸಂಸ್ಥೆಗಳು ಬೋಧಿಸಬೇಕು’ ಎಂದರು.



ಗೆದ್ದಲಹಳ್ಳಿಯ ಪ್ರೆಸ್ಟೀಜ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಸಚಿವ ಬೈರತಿ ಬಸವರಾಜ ನೆನಪಿನ ಕಾಣಿಕೆ ವಿತರಿಸಿದರು. ಕೆ.ಅಂಜಿನಪ್ಪ, ಶಾಲಾ ನಿರ್ದೇಶಕಿ ರಮಾದೇವಿ, ಪ್ರಶಾಂತ್, ಪ್ರಾಂಶುಪಾಲೆ ಹೇಮಲತಾ ಇದ್ದರು.

ಎಸ್‌ಟಿಪಿ: ಕೋಣನಕುಂಟೆಯಲ್ಲಿ ಘಟನೆ • ಕಂಪನಿ ಮಾಲೀಕ, ಇತರರ ವಿರುದ್ಧ ಎಫ್‌ಐಆರ್

ಕಾರ್ಮಿಕರಿಬ್ಬರ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ


ರವಿಕುಮಾರ್


ದಿಲೀಪ್‌ಕುಮಾರ್

ಅಪರಾಧ ಸುದ್ದಿ

ಬೆಂಗಳೂರು: ಕೋಣನಕುಂಟೆ ಬಳಿಯ ‘ಪ್ರೆಸ್ಟೀಜ್ ಪಾಲ್ಕನ್ ಸಿಟಿ’ ಅಪಾರ್ಟ್‌ಮೆಂಟ್ ಸಮುಚ್ಚಯದ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ನಿರ್ವಹಣೆ ಕೆಲಸಕ್ಕೆ ನಿಯೋಜನೆಗೊಂಡಿದ್ದ ಕಾರ್ಮಿಕರಿಬ್ಬರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ.

‘ಹೊಸಕೋಟೆ ಗೊಲ್ಲರಹಟ್ಟಿಯ ರವಿಕುಮಾರ್ ಹಾಗೂ ಒಡಿಶಾದ ದಿಲೀಪ್‌ಕುಮಾರ್ ಜನಾ ಮೃತರು. ಇವರಿಬ್ಬರು ಎಸ್‌ಟಿಪಿ ಬಳಿ ಶನಿವಾರ ರಾತ್ರಿ 8 ಗಂಟೆ ಸುಮಾರಿಗೆ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅದನ್ನು ನೋಡಿದ್ದ ಸಹೋದ್ಯೋಗಿಯೊಬ್ಬರು ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ಸ್ಥಳಕ್ಕೆ ಬಂದ ಅಂಬುಲೆನ್ಸ್ ಸಿಬ್ಬಂದಿ, ಇಬ್ಬರನ್ನೂ ತಪಾಸಣೆ ನಡೆಸಿದಾಗ ಮೃತಪಟ್ಟಿದ್ದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಾವಿನ ಬಗ್ಗೆ ರವಿಕುಮಾರ್ ಅವರ ಪತ್ನಿ ದೂರು ನೀಡಿದ್ದಾರೆ. ಕೆಲಸದ ಸ್ಥಳದಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಬಯೊ ಸೆಂಟ್ರೊ ಇಂಡಿಯಾ ಕಂಪನಿಯ ಮಾಲೀಕ ಮುಕ್ತಿಯಾರ್ ಅಹಮ್ಮದ್, ಕಂಪನಿಯ ಉಸ್ತುವಾರಿ ಪ್ರಭು, ಫೀಲ್ಡ್ ಆಫೀಸರ್ ರಮೇಶ್, ‘ಪ್ರೆಸ್ಟೀಜ್ ಪಾಲ್ಕನ್ ಸಿಟಿ ಅಪಾರ್ಟ್‌ಮೆಂಟ್ ಸಮುಚ್ಚಯದ ಮಾಲೀಕರು ಹಾಗೂ ಆಡಳಿತ ಮಂಡಳಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಹೇಳಿದರು.

‘ಆರೋಪಿಗಳ ಪೈಕಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ಸಾವಿನ ಕಾರಣ ನಿಗೂಢ: ‘ಎಸ್‌ಟಿಪಿ ಸುತ್ತಮುತ್ತ ವಿದ್ಯುತ್ ತಂತಿಗಳಿವೆ. ಗುಂಡಿ ಮೇಲ್ಭಾಗದ ಜಾಗದಲ್ಲಿ ಕಾರ್ಮಿಕರು ಪ್ರಜ್ಞೆ ತಪ್ಪಿ ಬಿದ್ದಿದ್ದರು. ಅವರಿಬ್ಬರು ವಿದ್ಯುತ್ ತಾಗಿ ಮೃತಪಟ್ಟಿರಬಹುದು ಅಥವಾ ಎಸ್‌ಟಿಪಿ ಗುಂಡಿಯಿಂದ ಬಿಡುಗಡೆಯಾದ ವಿಷಾನಿಲ ಸೇವಿಸಿ ಮೃತಪಟ್ಟಿರಬಹುದೆಂಬ ಅನುಮಾನವಿದೆ. ಮರಣೋತ್ತರ ಪರೀಕ್ಷೆ ವರದಿಯಿಂದಲೇ ನಿಖರ ಕಾರಣ ತಿಳಿಯಬೇಕಿದೆ’ ಎಂದು ಪೊಲೀಸರು ಹೇಳಿದರು.

ಆರೋಪಿಗಳ ಸೂಚನೆಯಂತೆ ಕೆಲಸ: ‘ತುಮಕೂರು ಜಿಲ್ಲೆ ಕೊರಟಗೆರೆಯ ರವಿಕುಮಾರ್, ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಪತ್ನಿ ಜೊತೆ ಹೊಸಕೋಟೆ ಗೊಲ್ಲರಹಟ್ಟಿಯಲ್ಲಿ ವಾಸವಿದ್ದರು. ಇನ್ನೊಬ್ಬ ಕಾರ್ಮಿಕ ದಿಲೀಪ್‌ಕುಮಾರ್, ಒಡಿಶಾದಿಂದ ಇತ್ತೀಚೆಗಷ್ಟೇ ನಗರಕ್ಕೆ ಬಂದಿದ್ದರು. ಇವರಿಬ್ಬರು, ಬಯೊ ಸೆಂಟ್ರೊ ಇಂಡಿಯಾ ಕಂಪನಿಯಡಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಪ್ರೆಸ್ಟೀಜ್ ಪಾಲ್ಕನ್ ಸಿಟಿ’ ಅಪಾರ್ಟ್‌ಮೆಂಟ್ ಸಮುಚ್ಚಯದ ಎಸ್‌ಟಿಪಿ ನಿರ್ವಹಣೆ ಜವಾಬ್ದಾರಿಯನ್ನು ಬಯೊ ಸೆಂಟ್ರೊ ಇಂಡಿಯಾ ಕಂಪನಿ ವಹಿಸಿಕೊಂಡಿತ್ತು. ಉಸ್ತುವಾರಿ ಹಾಗೂ ಕ್ಷೇತ್ರ ಅಧಿಕಾರಿ ಸೂಚನೆಯಂತೆ ಶನಿವಾರ ಮಧ್ಯಾಹ್ನ 2 ಗಂಟೆಗೆ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಬಂದಿದ್ದ ರವಿಕುಮಾರ್ ಹಾಗೂ ದಿಲೀಪ್‌ಕುಮಾರ್, ಎರಡನೇ ಪಾಳಿಯಲ್ಲಿ ಎಂದಿನಂತೆ ಎಸ್‌ಟಿಪಿ ಬಳಿ ಕೆಲಸದಲ್ಲಿ ತೊಡಗಿದ್ದರು’ ಎಂದು ತಿಳಿಸಿದರು.

‘ರಾತ್ರಿ 8 ಗಂಟೆಗೆ ರವಿಕುಮಾರ್ ಹಾಗೂ ದಿಲೀಪ್‌ಕುಮಾರ್ ಅವರ ಕೆಲಸದ ಪಾಳಿ ಮುಗಿಯುತ್ತಿತ್ತು. ರಾತ್ರಿ ಪಾಳಿ ಕೆಲಸಕ್ಕೆ ಬಂದಿದ್ದ ಸಹೋದ್ಯೋಗಿ, ಎಸ್‌ಟಿಪಿ ಗುಂಡಿ ಬಳಿ ಹೋಗಿದ್ದರು. ಪ್ರಜ್ಞೆ ತಪ್ಪಿ ಬಿದ್ದಿದ್ದ ಇಬ್ಬರನ್ನೂ ಗಮನಿಸಿ ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ರಾತ್ರಿಯಾದರೂ ಪತಿ ಮನೆಗೆ ಬಾರದಿದ್ದರಿಂದ ಪತ್ನಿ, ಫೀಲ್ಡ್ ಆಫೀಸರ್ ರಮೇಶ್‌ಗೆ ಕರೆ ಮಾಡಿದ್ದರು. ಅವಾಗಲೇ ಕಾರ್ಮಿಕರು ಮೃತಪಟ್ಟಿದ್ದ ಸಂಗತಿ ಗೊತ್ತಾಗಿದೆ’ ಎಂದರು.

ಎಸ್‌ಟಿಪಿ ಬಳಿ ಕೆಟ್ಟ ವಾಸನೆ: ‘ಮಾಹಿತಿ ಬರುತ್ತಿದ್ದಂತೆ ಎಸ್‌ಟಿಪಿ ಬಳಿ ಹೋಗಿ ಪರಿಶೀಲನೆ ನಡೆಸಲಾಯಿತು. ಘಟಕದ ಬಳಿ ಕೆಟ್ಟ ವಾಸನೆ ಬರುತ್ತಿತ್ತು. ಆದರೆ, ಇದಕ್ಕೆ ಕಾರಣವೇನು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ’ ಎಂದು ಪೊಲೀಸರು ಹೇಳಿದರು.

ವಂಚನೆ: ಆರ್. ಶಂಕರ್ ಪತ್ನಿ, ಮಗನ ವಿರುದ್ಧ ಎಫ್‌ಐಆರ್

ಬೆಂಗಳೂರು: ನಿವೇಶನಗಳ ಅಭಿವೃದ್ಧಿಗಾಗಿ ಸ್ಥಾಪಿಸಿದ್ದ ಸನ್‌ಸೈನ್ ಗ್ರೂಪ್ ಕಂಪನಿಯ ಪಾಲುದಾರರಿಗೆ ವಂಚಿಸಿದ್ದ ಆರೋಪದಡಿ ವಿಧಾನಪರಿಷತ್ ಸದಸ್ಯ ಆರ್. ಶಂಕರ್ ಅವರ ಪತ್ನಿ ಧನಲಕ್ಷ್ಮಿ ಹಾಗೂ ಮಗ ಜ್ಯೋತಿರ್ ತೇಜೋಮಯ್ ವಿರುದ್ಧ ಇಂದಿರಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕಂಪನಿ ಪಾಲುದಾರರಾದ ಎಂ. ಪ್ರಭಾವತಿ ದೂರು ನೀಡಿದ್ದಾರೆ. ಬಿ. ರಾಜನ್, ಎಂ.ಎಸ್. ಧನಲಕ್ಷ್ಮಿ ಹಾಗೂ ಜ್ಯೋತಿರ್ ತೇಜೋಮಯ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಂಪನಿ ವತಿಯಿಂದ ಬೆಂಗಳೂರು ಪೂರ್ವ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ 4 ಎಕರೆ ಜಮೀನಿನಲ್ಲಿ 87 ನಿವೇಶನ ಅಭಿವೃದ್ಧಿಪಡಿಸಲಾಗಿತ್ತು. ಸನ್ ಸಿಟಿ ಲೇಔಟ್ ಎಂಬ ಹೆಸರಿಡಲಾಗಿತ್ತು. ನಿವೇಶನ ಮಾರಾಟಕ್ಕೆ ಪಾಲುದಾರರೆಲ್ಲರ ಸಹಿ ಅಗತ್ಯವಿತ್ತು. ಪ್ರಭಾವತಿ ಅವರ ಹೆಸರಿನಲ್ಲಿ ನಕಲಿ ಸಹಿ ಹಾಗೂ ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪಿಗಳು, ಅಕ್ರಮವಾಗಿ ನಿವೇಶನ ಮಾರಿ ವಂಚಿಸಿದ್ದಾರೆಂಬ ಆರೋಪವಿದೆ’ ಎಂದು ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣ ಸ್ಫೋಟಿಸುವ ಬೆದರಿಕೆ ಒಡ್ಡಿದ ಯುವತಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶುಕ್ರವಾರ ಕೊಲ್ಕತ್ತಾಗೆ ಹೊರಟಿದ್ದ ಯುವತಿಯೊಬ್ಬರು ತಪಾಸಣೆಗೆ ಮುಂದಾದ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ(ಸಿಐಎಸ್‌ಎಫ್) ಸಿಬ್ಬಂದಿ ಮೇಲೆ ರೇಗಾಡಿ ಬಾಂಬ್ ಹಾಕಿ ವಿಮಾನ ನಿಲ್ದಾಣ ಸ್ಫೋಟಿಸುವ ಬೆದರಿಕೆ ಒಡ್ಡಿದ್ದರು.

ಆತುರದಿಂದ ನಿರ್ಗಮನ ದ್ವಾರ-6ಕ್ಕೆ ಬಂದ ಮಾನಸಿ ಸತೇಬೈನು (31) ಎಂಬ ಯುವತಿ ತಪಾಸಣೆಗೆ ಮುಂದಾದ ಸಿಐಎಸ್‌ಎಫ್ ಸಿಬ್ಬಂದಿಗೆ ಸಹಕಾರ ತೋರದೆ ಅವಸರದಿಂದ ನಿಲ್ದಾಣದ ಒಳ ಪ್ರವೇಶಿಸಲು ಯತ್ನಿಸಿದ್ದಾರೆ. ಅದಕ್ಕೆ ಅವಕಾಶ ನೀಡದ ಭದ್ರತಾ ಸಿಬ್ಬಂದ ಮೇಲೆ ರೇಗಾಡಿದ್ದಾರೆ.

ಅದಾಗಲೇ ವಿಮಾನ ಹೊರಡುವ ಸಮಯವಾದ ಕಾರಣ ಬೇಗ ಒಳ ಬಿಡುವಂತೆ ಸಿಬ್ಬಂದಿ ಮೇಲೆ ಒತ್ತಡ ಹೇರಿದರು. ತಪಾಸಣೆ ನಡೆಸಲು ಮುಂದಾದ ಭದ್ರತಾ ಸಿಬ್ಬಂದಿ ಜತೆ ವಾಗ್ವಾದಕ್ಕೆ ಇಳಿದಿದ್ದಾರೆ. ವಿಮಾನ ನಿಲ್ದಾಣವನ್ನು ಬಾಂಬ್‌ನಿಂದ ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ್ದಾರೆ.

ಭದ್ರತಾ ತಪಾಸಣೆಗಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಸಹ ಪ್ರಯಾಣಿಕರಿಗೆ ಬಳಿ ತೆರಳಿ ‘ಈ ಗೇಟ್‌ನಲ್ಲಿ ಬಾಂಬ್ ಇದೆ ಎಲ್ಲರೂ ಇಲ್ಲಿಂದ ಓಡಿ ಹೋಗಿ ಜೀವ ಉಳಿಸಿಕೊಳ್ಳಿ’ ಎಂದು ಕೂಗಿ ರಂಪಾಟ ಮಾಡಿದ್ದಾರೆ.

ಅಷ್ಟೇ ಅಲ್ಲದೇ ಸಿಐಎಸ್‌ಎಫ್ ಸಿಬ್ಬಂದಿ ಸಂದೀಪ್ ಸಿಂಗ್ ಎಂಬುವವರ ಅಂಗಿಯ ಕಾಲರ್ ಹಿಡಿದು ಒದ್ದಿರುತ್ತಾರೆ ಹಾಗೂ ಮುಖಕ್ಕೆ ಗುದ್ದಿದ್ದಾರೆ. ಇದರಿಂದ ವಿಮಾನ ನಿಲ್ದಾಣದಲ್ಲಿ ಕೆಲ ಹೊತ್ತು ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಇತರ ಪ್ರಯಾಣಿಕರು ಆತಂಕಗೊಂಡಿದ್ದರು.

ಕರ್ತವ್ಯ ನಿರ್ವಹಣೆ ಅಡ್ಡಿಪಡಿಸಿದ ಯುವತಿಯನ್ನು ಸಿಐಎಸ್‌ಎಫ್ ಸಿಬ್ಬಂದಿ ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಯುವತಿ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೇಣುಕಾ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ

ಸೋಲೂರು: ಈಡಿಗ ಸ್ವಾಮೀಜಿ ಪಟ್ಟಾಧಿಕಾರ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ


ಮಾಗಡಿ ಸೋಲೂರಿನ ರೇಣುಕಾಯಲ್ಲಮ್ಮದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು

ಮಾಗಡಿ (ರಾಮನಗರ): ಸೋಲೂರು ಆರ್ಯ ಈಡಿಗ ಮಹಾಸಂಸ್ಥಾನ ಮಠದ ವಿಖ್ಯಾತಾನಂದ ಸ್ವಾಮೀಜಿ ಪಟ್ಟಾಧಿಕಾರದ ಪ್ರಥಮ ವಾರ್ಷಿಕೋತ್ಸವ ಹಾಗೂ ರೇಣುಕಾ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಭಾನುವಾರ ವೈಭವದಿಂದ ನಡೆಯಿತು.

ರಾಜ್ಯದಲ್ಲಿರು ಆರ್ಯ ಈಡಿಗ ಸಮಾಜದ ನಾಲ್ಕು ಸಾವಿರ ಬಡ ಮಕ್ಕಳಿಗೆ ಸೋಲೂರಿನ ಮಠದಲ್ಲಿ ಶಿಕ್ಷಣ ದೊರೆಯುವಂತಾಬೇಕು ಎಂದು ವಿಖ್ಯಾತಾನಂದ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ರಾಜ್ಯದಲ್ಲಿರುವ ಈಡಿಗ ಸಮುದಾಯದ ಒಳಪಂಗಡಗಳೆಲ್ಲವೂ ಒಂದುಗೂಡಿ ಮಕ್ಕಳಿಗೆ ಯೋಗ್ಯ ಮತ್ತು ಸಂಸ್ಕಾರಯುತ ಶಿಕ್ಷಣ ನೀಡಬೇಕು. ಸಮುದಾಯದ ಶ್ರೀಮಂತರು ಬಡವರನ್ನು ಮೇಲೆತ್ತುವ ಕೆಲಸ ಮಾಡಬೇಕು ಎಂದು ಸ್ವಾಮೀಜಿ ಕರೆ ನೀಡಿದರು.

ಹಿಂದುಳಿದ ಸಮಾಜಕ್ಕೆ ಗುರುಪರಂಪರೆಯ ಅಗತ್ಯವಿದೆ. ಸಂಸ್ಕಾರವಿಲ್ಲದ ವಿದ್ಯೆ ಪ್ರಯೋಜನಕ್ಕೆ ಬರುವುದಿಲ್ಲ. ನಾರಾಯಣ ಗುರುಗಳ ಮೂಲಕ ಈಡಿಗರ ಆತ್ಮಗೌರವ ಹೆಚ್ಚಿಸುವ ಕೆಲಸ ಮಾಡೋಣ ಎಂದರು.

ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವಾದರ್ಶಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮುಂದಿನ ಪೀಳಿಗೆಗೆ ಗುರುಗಳ ಪರಂಪರೆ, ಆದರ್ಶಗಳ ಬಗ್ಗೆ ತಿಳಿವಳಿಕೆ ಮೂಡಿಸಬೇಕು. ಸಮಾಜದ ಅಭಿವೃದ್ಧಿಗೆ ಧಾರ್ಮಿಕ ಕಾರ್ಯಕ್ರಮ ನಡೆಸುವ ಜತೆಗೆ ಸರಸ್ವತಿ ಮಂದಿರ ನಿರ್ಮಿಸಬೇಕು ಎಂದಿ ಸ್ವಾಮೀಜಿ ಹೇಳಿದರು.

ಲೇಖಕ ಟಿ.ನರಸಿಂಹಸ್ವಾಮಿ ರಚಿಸಿರುವ ‘ಸತ್ಯದನುಭವ’ ಕೃತಿಯನ್ನು ಸ್ವಾಮೀಜಿ ಲೋಕಾರ್ಪಣೆ ಮಾಡಿದರು.

ಬೆಂಗಳೂರಿನ ಸಪ್ತಗಿರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ, ಸ್ಪರ್ಶ ಆಸ್ಪತ್ರೆ, ನವರಂಗ್ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ, ಶಸ್ತ್ರಚಿಕಿತ್ಸೆ ಹಾಗೂ ರಕ್ತದಾನ ಶಿಬಿರ ನಡೆಯಿತು.

ವೈಭವದ ಕುಲದೇವತೆ ಉತ್ಸವ: ಕುಲದೇವತೆ ರೇಣುಕಾಯಲ್ಲಮ್ಮದೇವಿ ಉತ್ಸವ ಮೂರ್ತಿ ಉತ್ಸವದ ಮೆರವಣಿಗೆ ವೈಭವದಿಂದ ನಡೆಯಿತು. ವಿವಿಧ ಜನಪದ ಕಲಾತಂಡಗಳೊಂದಿಗೆ ಡೊಳ್ಳು ಕುಣಿತ, ನಗಾರಿ, ತಮಟೆ ಕುಣಿತಕ್ಕೆ ಸಮುದಾಯದ ಯುವಕ, ಯುವತಿಯರು ಕುಣಿದು ಕುಪ್ಪಳಿಸಿದರು.

ರೇಣುಕಾ ಯಲ್ಲಮ್ಮ ಗುಡ್ಡದಿಂದ ಆಗಮಿಸಿದ್ದ ಜನಪದ ಕಲಾವಿದೆ ಜೋಗುತಿ ರಾಮಕ್ಕ ತಂಡದವರು, ರೇಣುಕಾ ಯಲ್ಲಮ್ಮದೇವಿ ಕಥನ ಕಾವ್ಯ ಹಾಡಿದರು.

ಕೇರಳದ ಅರುಣಾನಂದ ಸ್ವಾಮೀಜಿ, ಕನ್ಯಾಕುಮಾರಿಯ ಶಾರದಾನಂದ ಸ್ವಾಮೀಜಿ, ಯೋಗೇಂದ್ರಾನಂದ ಸ್ವಾಮೀಜಿ, ಸತ್ಯಾನಂದ ಸ್ವಾಮೀಜಿ ಭಾಗವಹಿಸಿದ್ದರು. ಶಿವಮೊಗ್ಗ, ರಾಯಚೂರು, ಬಿಜಾಪುರ ಸೇರಿದಂತೆ ರಾಜ್ಯದ ನಾನಾ ಜಿಲ್ಲೆಗಳ ಈಡಿಗ ಸಮುದಾಯದ ಸಾವಿರಾರು ಜನರು ಭಾಗವಹಿಸಿದ್ದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ, ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಕಾರ್ಯನಿರ್ವಾಹಕ ಧರ್ಮದರ್ಶಿ ಜೆ.ಪಿ. ಸುಧಾಕರ್, ನಿರ್ಮಾಪಕ ಚಿನ್ನೇಗೌಡ, ಸಮಾಜದ ಮುಖಂಡರಾದ ಪೋತರಾಜು, ಟಿ.ವಾಸನ್, ಕೆ.ಎಸ್. ದುಷ್ಯಂತ್, ಮಠದ ಆಡಳಿತಾಧಿಕಾರಿ ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

ಭಕ್ತರ ಕಾಣಿಕೆ ಮಕ್ಕಳ ವಿದ್ಯಾಭ್ಯಾಸಕ್ಕೆ

‘ಪಟ್ಟಾಭಿಷೇಕ ದಿನದಂದು ಭಕ್ತರು ನೀಡಿದ ಕಾಣಿಕೆಯನ್ನು ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕೆ ನೀಡಿದ್ದೇನೆ. ಕಲಿಯುವ ಮಕ್ಕಳನ್ನು ದತ್ತುಪಡೆದು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿ. ನಿರಂತರ ಪರಿಶ್ರಮದಿಂದ ಗುರಿ ತಲುಪಲು ಸಾಧ್ಯ. ಏಕಾಗ್ರತೆ, ಶ್ರದ್ಧೆ, ಭಕ್ತಿ ಇದ್ದಲ್ಲಿ ಏನು ಬೇಕಾದರೂ ಸಾಧನೆ ಮಾಡಲು ಸಾಧ್ಯವಿದೆ. ಇತರೆ ಹಿಂದುಳಿದ ಸಮುದಾಯಗಳವರ ಏಳಿಗೆಗೂ ಪ್ರೋತ್ಸಾಹ ನೀಡಬೇಕು’ ಎಂದು ವಿಖ್ಯಾತಾನಂದ ಸ್ವಾಮೀಜಿ ತಿಳಿಸಿದರು.

ಸರ್ಕಾರಿ ಜಮೀನು ಪರರ ಪಾಲು: ಭೂ ಮಾಪಕ ಪರಾರಿ

ಭೂ ಮಾಪನ ಇಲಾಖೆ ಅಧಿಕಾರಿ ದೂರು • ಹಲಸೂರು ಗೇಟ್ ಪೊಲೀಸರಿಂದ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲ ಹೋಬಳಿ ಶೆಟ್ಟಿಗೆರೆ ಗ್ರಾಮದಲ್ಲಿರುವ ಕೋಟಿಗೂ ಹೆಚ್ಚು ಮೌಲ್ಯದ ಸರ್ಕಾರಿ ಜಮೀನು ಪರರ ಪಾಲಾಗಿದ್ದು, ಕರ್ತವ್ಯ ಲೋಪ ಎಸಗಿ ಅಕ್ರಮಕ್ಕೆ ಸಹಕರಿಸಿದ್ದ ಆರೋಪದಡಿ ಭೂ ಮಾಪಕ ರಂಗಸ್ವಾಮಿ (45) ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಭೂ ಮಾಪನಾ ಇಲಾಖೆಯ ಅಧಿಕಾರಿ ಇ. ಪ್ರಕಾಶ್ ಅವರು ಕೆಲ ದಾಖಲೆ ಸಮೇತ ದೂರು ನೀಡಿದ್ದಾರೆ. ರಂಗಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ಹುಡುಕಾಟ ಆರಂಭಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ರಂಗಸ್ವಾಮಿ, ಬೆಂಗಳೂರು ಉತ್ತರ ಯಲಹಂಕ ತಾಲ್ಲೂಕು ಕಚೇರಿಯಲ್ಲಿ ಸರ್ಕಾರಿ ಭೂ ಮಾಪಕನಾಗಿ ಕೆಲಸ ಮಾಡುತ್ತಿದ್ದ. ಜಾಲ ಹೋಬಳಿಯ ಶೆಟ್ಟಿಗೆರೆ ಗ್ರಾಮದ ಸರ್ವೆ ನಂಬರ್ 80ರಲ್ಲಿರುವ ಕ್ರಯಕ್ಕೆ ಪಡೆದಿರುವ 24 ಎಕರೆ ಜಮೀನು ದುರಸ್ತಿಪಡಿಸುವುದಕ್ಕಾಗಿ ರಚನಾ ಎಂಬುವವರು 2006ರ ಮಾರ್ಚ್ 31ರಂದು ಅರ್ಜಿ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದ್ದ ಅಂದಿನ ತಹಶೀಲ್ದಾರ್, ಜಮೀನು ಅಳತೆಗೆ ಆದೇಶ ಹೊರಡಿಸಿದ್ದರು.’

‘ಸರ್ವೆ ನಂಬರ್ 80ರ ಜಮೀನು, ಸರ್ಕಾರಿ ಕರಾಬು ಜಮೀನು. ಈ ಸಂಬಂಧ ಲಭ್ಯವಿರುವ ಸರ್ಕಾರಿ ಕಡತಗಳನ್ನು ಸಂಗ್ರಹಿಸಿ ಅಳತೆ ಮಾಡಿ ವರದಿ ನೀಡಬೇಕಿತ್ತು. ದಾಖಲೆಗಳು ಕಾಣೆಯಾಗಿದ್ದರಿಂದ, ಪುನರ್ ಸೃಷ್ಟಿಸಿ ಅಳತೆ ಮಾಡಬೇಕಿತ್ತು. ಕರ್ತವ್ಯಲೋಪ ಎಸಗಿದ್ದ ಆರೋಪಿ ರಂಗಸ್ವಾಮಿ, ಅರ್ಜಿದಾರರು ನೀಡಿದ್ದ ದಾಖಲೆಗಳನ್ನೇ ಅಂತಿಮವೆಂದು ಪರಿಗಣಿಸಿ ಅಳತೆ ಮಾಡಿ ವರದಿ ಸಲ್ಲಿಸಿದ್ದರು. ಇದರಿಂದಾಗಿ ಸರ್ಕಾರಿ ಜಮೀನು, ಖಾಸಗಿ ವ್ಯಕ್ತಿಗಳ ಪಾಲಾಗಿತ್ತು. ಈ ಅಂಶ ದೂರಿನಲ್ಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸರ್ವೆ ನಂ. 80ರಲ್ಲಿ 1ರಿಂದ 6 ಬ್ಲಾಕ್‌ಗಳಿವೆ. ಕೆಲ ಜಮೀನು ಅರ್ಜಿದಾರರಿಗೆ ಸೇರಿತ್ತು. ಉಳಿದ ಜಮೀನು ಸರ್ಕಾರದ್ದಾಗಿತ್ತು. ಎಲ್ಲ ಜಮೀನು ಅರ್ಜಿದಾರದ್ದೇ ಎಂಬುದಾಗಿ ರಂಗಸ್ವಾಮಿ ವರದಿ ನೀಡಿದ್ದರು. ರಂಗಸ್ವಾಮಿಯ ಕರ್ತವ್ಯಲೋಪದಿಂದಾಗಿ ಸರ್ಕಾರಕ್ಕೆ ಕೋಟಿಗೂ ಹೆಚ್ಚು ನಷ್ಟವಾಗಿದೆ. ಈತ ನೀಡಿದ್ದ ವರದಿಯಿಂದಾಗಿ ನಕಲಿ ದಾಖಲೆಗಳು ಸೃಷ್ಟಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ. ಆದರೆ, ಪರರ ಪಾಲಾದ ಸರ್ಕಾರಿ ಜಮೀನು ಎಷ್ಟು ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ಮೂಲಗಳು ಹೇಳಿವೆ.

ಪ್ರಕರಣ ದಾಖಲಾಗುತ್ತಿದ್ದಂತೆ ಪರಾರಿ: ‘ರಂಗಸ್ವಾಮಿ ವಿರುದ್ಧ ಜ. 24ರಂದು ಪ್ರಕರಣ ದಾಖಲಾಗಿದೆ. ಇದಾದ ನಂತರ ಆರೋಪಿ ವಾಸಸ್ಥಳದಿಂದ ಪರಾರಿಯಾಗಿದ್ದು, ಕೆಲಸಕ್ಕೂ ಗೈರಾಗಿದ್ದಾನೆ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೆಲ್ಫಿ ವಿಡಿಯೊ ಮಾಡಿಟ್ಟು ಆತ್ಮಹತ್ಯೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಬನ್ನೇರುಘಟ್ಟ ರಸ್ತೆಯಲ್ಲಿ ಈಚೆಗೆ ಸಾಲಗಾರರ ಹಿಂಸೆ, ಬೆದರಿಕೆಗೆ ಬೇಸತ್ತು ವ್ಯಕ್ತಿಯೊಬ್ಬ ವಿಡಿಯೊ ಮಾಡಿಟ್ಟು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆ ಮಾಡಿಕೊಂಡವರನ್ನು ಶಿವರಾಜು (33) ಎಂದು ಗುರುತಿಸಲಾಗಿದೆ. ಸಾಲದ ಜಾಮೀನು ಪತ್ರಕ್ಕೆ ಸಹಿ ಹಾಕಿದ್ದಕ್ಕೆ ಪ್ರತಿಯಾಗಿ ಸಾಲಗಾರರು ನೀಡಿದ ಮಾನಸಿಕ ಹಿಂಸೆ, ಬೆದರಿಕೆಗೆ ಬೇಸತ್ತು ತಾನು ಆತ್ಮಹತ್ಯೆ ದಾರಿ ಹಿಡಿದದ್ದಾಗಿ ಶಿವರಾಜು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಶಿವರಾಜು ಮತ್ತು ಸ್ನೇಹಿತರು ಜೂಜಾಟಕ್ಕೆ ರೇಣುಕಾರಾಧ್ಯ ಎಂಬುವರಿಂದ ಮೀಟರ್ ಬಡ್ಡಿ ಲೆಕ್ಕದಲ್ಲಿ ₹30 ಸಾವಿರ ಸಾಲ ಪಡೆದಿದ್ದರು. ಬಡ್ಡಿ ಕಟ್ಟಿಲ್ಲ ಎಂಬ ಕಾರಣಕ್ಕೆ ಸಾಲ ಕೊಟ್ಟವರು ಶಿವರಾಜು ಅವರ ಬೈಕ್ ಎತ್ತಿಕೊಂಡು ಹೋಗಿದ್ದರು. ನಂತರವೂ ಹಣಕ್ಕಾಗಿ ನಿರಂತರ ಕಿರುಕುಳ ನೀಡುತ್ತಿದ್ದರು ಎಂದು ದೂರಲಾಗಿದೆ. ಧನು, ರೇಣುಕಾರಾಧ್ಯ, ವೆಂಕಟೇಶ್ ಎಂಬುವರ ವಿರುದ್ಧ ಕಗ್ಗಲೀಪುರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಅಪಘಾತ: ಸಾಫ್ಟ್‌ವೇರ್ ಎಂಜಿನಿಯರ್ ಸಾವು

ಬೆಂಗಳೂರು: ಹೆಣ್ಣೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಪಕ್ಕದ ಮರಕ್ಕೆ ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದಿದ್ದು, ಸವಾರ ರಮೇಶ್ (28) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ನಾಗೇನಹಳ್ಳಿ ನಿವಾಸಿ ರಮೇಶ್, ದೊಮ್ಮಲೂರು ಬಳಿಯ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಮಾಡುತ್ತಿದ್ದರು. ಶನಿವಾರ ತಡರಾತ್ರಿ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಹೆಣ್ಣೂರು ಸಂಚಾರ ಪೊಲೀಸರು ಹೇಳಿದರು.

‘ರಮೇಶ್ ಅವರು ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ವಾಹನ, ರಸ್ತೆಯಲ್ಲಿ ಮರಕ್ಕೆ ಡಿಕ್ಕಿ ಹೊಡೆದಿತ್ತು. ರಮೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದರು.

ಮೂರು ದಿನ: ₹ 22.32 ಕೋಟಿ ದಂಡ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದ ಬಳಿಕ ಮೂರೇ ದಿನಗಳಲ್ಲಿ ಒಟ್ಟು ₹ 22.32 ಕೋಟಿ ದಂಡ ಸಂಗ್ರಹವಾಗಿದ್ದು, 7.41 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿವೆ.

ಸರ್ಕಾರ ಘೋಷಿಸಿರುವ ರಿಯಾಯಿತಿಗೆ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಜನರು ಉತ್ಸಾಹದಿಂದ ದಂಡ ಪಾವತಿಸಿದ್ದಾರೆ. ಭಾನುವಾರ ಒಂದೇ ದಿನದಲ್ಲಿ 2 ಲಕ್ಷ ಪ್ರಕರಣಗಳು ಇತ್ಯರ್ಥಗೊಂಡಿದ್ದು, ₹ 6.31 ಕೋಟಿ ದಂಡ ಸಂಗ್ರಹವಾಗಿದೆ.

ಇನ್ಫೆಂಟ್ರಿ ರಸ್ತೆಯಲ್ಲಿರುವ ಸಂಚಾರ ನಿರ್ವಹಣಾ ಕೇಂದ್ರದಲ್ಲಿ (ಟಿಎಂಸಿ) ಭಾನುವಾರವೂ ಪೊಲೀಸರು ದಂಡ ಕಟ್ಟಿಸಿಕೊಂಡರು. 1,053 ಮಂದಿ ಕೇಂದ್ರಕ್ಕೆ ಭೇಟಿ ನೀಡಿ, ಸರದಿಯಲ್ಲಿ ನಿಂತು ₹ 2.64 ಲಕ್ಷ ದಂಡ ಪಾವತಿಸಿದರು.

ಕದ್ದ ಚಿನ್ನ ಖರೀದಿ: ವ್ಯಾಪಾರಿ ಎಳೆದೊಯ್ದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನದ ಚಿನ್ನಾಭರಣ ಖರೀದಿಸಿದ್ದ ಆರೋಪದಡಿ ‘ಪೂಜಾ ಬ್ಯಾಂಕರ್ಸ್’ ಮಳಿಗೆ ಮಾಲೀಕ ಭವರ್ ಲಾಲ್ (51) ಅವರನ್ನು ಪೊಲೀಸರು ರಸ್ತೆಯಲ್ಲಿ ಎಳೆದೊಯ್ದು ಜೀಪಿಗೆ ಹತ್ತಿಸಿದ್ದು, ಈ ಘಟನೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ದೇವರಜೀವನಹಳ್ಳಿ (ಡಿ.ಜೆ.ಹಳ್ಳಿ) ಬಳಿಯ ಪಿಳ್ಳಪ್ಪ ಗಾರ್ಡನ್‌ನಲ್ಲಿ ಸ್ಥಳೀಯ ನಿವಾಸಿ ಭವರ್ ಲಾಲ್ ‘ಪೂಜಾ ಬ್ಯಾಂಕರ್ಸ್’ ಮಳಿಗೆ ಇಟ್ಟುಕೊಂಡಿದ್ದಾರೆ. ಇತ್ತೀಚೆಗೆ ಮಳಿಗೆಗೆ ಬಂದಿದ್ದ ವಿವೇಕನಗರ ಠಾಣೆ ಪೊಲೀಸರು, ಭವರ್ ಲಾಲ್ ಅವರನ್ನು ವಶಕ್ಕೆ ಪಡೆಯಲು ಮುಂದಾಗಿದ್ದರು’ ಎಂದು ಸ್ಥಳೀಯರು ಹೇಳಿದರು.

‘ತನ್ನದೇನೂ ತಪ್ಪಿಲ್ಲವೆಂದಿದ್ದ ಭವರ್ ಲಾಲ್ ಜೀಪು ಹತ್ತಲು ನಿರಾಕರಿಸಿದ್ದರು. ಅವರ ಕುಟುಂಬದವರು ಸಹ ಸ್ಥಳಕ್ಕೆ ಬಂದು, ಪೊಲೀಸರ ಜೊತೆ ವಾಗ್ವಾದ ನಡೆಸಿದ್ದರು. ಇದೇ ಸಂದರ್ಭದಲ್ಲೇ ಕೆಲ ಸಿಬ್ಬಂದಿ, ಭವರ್ ಲಾಲ್ ಅವರನ್ನು ಮಳಿಗೆಯಿಂದ ಹೊರಗೆ ಎಳೆದೊಯ್ದು ಜೀಪಿನಲ್ಲಿ ಕೂರಿಸಿದ್ದರು. ನಂತರ, ಠಾಣೆಗೆ ಕರೆದೊಯ್ದರು’ ಎಂದು ತಿಳಿಸಿದರು.

‘51 ವರ್ಷ ವಯಸ್ಸಿನ ಭವರ್ ಲಾಲ್ ಜೊತೆ ಪೊಲೀಸರು ಅಮಾನವೀಯನವಾಗಿ ವರ್ತಿಸಿದ್ದಾರೆ. ರಸ್ತೆಯಲ್ಲಿ ಎಳೆದೊಯ್ದಿದ್ದಾರೆ. ಈ ವರ್ತನೆ ಖಂಡನೀಯ’ ಎಂದು ಸ್ಥಳೀಯರು ಕಿಡಿಕಾಡಿದರು.

ನೋಟಿಸ್ ನೀಡಿದರೂ ವಿಚಾರಣೆಗೆ ಗೈರು: ‘ನಗರದ ಎಂಟು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಶ್ರೀನಿವಾಸ್ ಅಲಿಯಾಸ್ ಅಪ್ಪು ಎಂಬಾತನನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಇದೇ ಆರೋಪಿ, 100 ಗ್ರಾಂ ಚಿನ್ನ ಹಾಗೂ 350 ಗ್ರಾಂ ಬೆಳ್ಳಿ ಸಾಮಗ್ರಿಯನ್ನು ಭವರ್ ಲಾಲ್‌ಗೆ ಮಾರಿದ್ದ. ಹೆಚ್ಚಿನ ಮಾಹಿತಿ ಕಲೆಹಾಕಲು ಭವರ್‌ಲಾಲ್‌ಗೆ ನೋಟಿಸ್ ನೀಡಲಾಗಿತ್ತು. ಆದರೆ, ಅವರು ಎರಡು ಬಾರಿ ವಿಚಾರಣೆಗೆ ಗೈರಾಗಿದ್ದರು’ ಎಂದು ವಿವೇಕನಗರ ಪೊಲೀಸರು ಹೇಳಿದರು.

‘ಕಳ್ಳತನದ ಚಿನ್ನಾಭರಣ ಜಪ್ತಿ ಮಾಡಬೇಕಿತ್ತು. ವಿಚಾರಣೆಗೆ ಗೈರಾಗಿದ್ದರಿಂದ ಭವರ್ ಲಾಲ್ ಅವರನ್ನು ವಶಕ್ಕೆ ಪಡೆ ಯಲು ಸಿಬ್ಬಂದಿ ಮಳಿಗೆ ಬಳಿ ಹೋಗಿದ್ದರು. ಪೊಲೀಸರ ಕರ್ತವ್ಯಕ್ಕೆ ಭವರ್ ಲಾಲ್ ಹಾಗೂ ಕುಟುಂಬದವರು ಅಡ್ಡಿಪಡಿಸಿದ್ದರು. ಅದರ ನಡುವೆಯೇ ಸಿಬ್ಬಂದಿ, ಭವರ್‌ಲಾಲ್ ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದು ತಿಳಿಸಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು
ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.



‘ಸಂಕಟ ತಂದ ಪಾದಚಾರಿ ಮಾರ್ಗ’

ಕಬ್ಬನ್ ಉದ್ಯಾನದ ಮೆಟ್ರೊ ನಿಲ್ದಾಣದ ಎದುರು ಇರುವ ಪಾದಚಾರಿ ಮಾರ್ಗದಲ್ಲಿ ತೆರೆದ ಸ್ಥಿತಿಯಲ್ಲಿರುವ ಮ್ಯಾನ್‌ಹೋಲ್ ನಾಗರಿಕರ ಓಡಾಟಕ್ಕೆ ಸಮಸ್ಯೆಯಾಗಿದೆ. ಕಬ್ಬನ್ ಉದ್ಯಾನಕ್ಕೆ ಬರುವ ಸಾವಿರಾರು ಜನ ಈ ಮಾರ್ಗದಿಂದಲೇ ಸಾಗಬೇಕು. ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ಪಾದಚಾರಿ ಮಾರ್ಗದಲ್ಲಿ ತೆರೆದುಕೊಂಡಿರುವ ಹೊಂಡವನ್ನು ಮುಚ್ಚಿ, ಪಾದಚಾರಿಗಳಿಗೆ ಆಗುತ್ತಿರುವ ಅನನುಕೂಲವನ್ನು ತಪ್ಪಿಸಬೇಕು.

ನಿರಂಜನ ಶಾಸ್ತ್ರಿ, ಪಾದಚಾರಿ


ಕಬ್ಬನ್ ಉದ್ಯಾನದ ಮೆಟ್ರೊ ನಿಲ್ದಾಣದ ಮುಂಭಾಗದ ಪಾದಚಾರಿ ಮಾರ್ಗದಲ್ಲಿರುವ ಮ್ಯಾನ್‌ಹೋಲ್


ಮಲ್ಲೇಶ್ವರದ ಸಂಪಿಗೆ ರಸ್ತೆಯ ಪಾದಚಾರಿ ಮಾರ್ಗದ ಸ್ಥಿತಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ಮಲ್ಲೇಶ್ವರನ ಸಂಪಿಗೆ ರಸ್ತೆಯಲ್ಲಿ ಸಂಪಿಗೆ ಚಿತ್ರಮಂದಿರದ ಎದುರು ಪಾದಚಾರಿ ಮಾರ್ಗ ಹಾಳಾಗಿದ್ದು, ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯಾಗಿದೆ. ಈ ಮಾರ್ಗದಲ್ಲಿ ಹಾಳಾದ ವಾಹನಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದೆ. ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗವೂ ಮಕ್ಕಳು, ವೃದ್ಧರು ಸಾಗುವುದಕ್ಕೆ ಕಷ್ಟವಾಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು.

ಮಂಜುನಾಥ, ಸ್ಥಳೀಯ ನಿವಾಸಿ

‘ಕೆಂಗೇರಿ ಚೆಕ್‌ಪೋಸ್ಟ್ ಬಳಿ ಸ್ಕೈವಾಕ್ ಅಳವಡಿಸಿ’

ಕೆಂಗೇರಿಯ ಬಾಲಸಾಬರ ಪಾಳ್ಯ, ಬಸವನಗರ ಮತ್ತು ವೈಷ್ಣವಿನಗರದಿಂದ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ನಗರದ ವಿವಿಧೆಡೆ ಮತ್ತು ಬಿಡದಿ ಕಡೆಗೆ ಪ್ರತಿನಿತ್ಯ ಪ್ರಯಾಣಿಸುತ್ತಾರೆ. ಈಗ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ಪ್ರಾರಂಭವಾಗಿದ್ದು, ಎರಡು ಕಡೆಯಿಂದ ವಾಹನಗಳು ವೇಗವಾಗಿ ಚಲಿಸುತ್ತಿವೆ. ಇದರಿಂದ ವೃದ್ಧರು, ಮಕ್ಕಳು ಮತ್ತು ಮಹಿಳೆಯರು ಹೆದ್ದಾರಿ ದಾಟಲು ಹರ ಸಾಹಸಪಡಬೇಕಾದ ಪರಿಸ್ಥಿತಿ ಎದುರಾಗಿದೆ. ಅಲ್ಲದೆ ರಾತ್ರಿ ಸಮಯದಲ್ಲಿ ಬೀದಿ ದೀಪದ ವ್ಯವಸ್ಥೆ ಇಲ್ಲದಿರುವುದು ಅಪಾಯಕ್ಕೆ ಆಹ್ವಾನಿಸಿದಂತಿದೆ. ಇಲ್ಲಿ ಪ್ರತಿದಿನ ಒಂದಿಲ್ಲ ಒಂದು ಅಪಘಾತ ಸಂಭವಿಸುತ್ತಿದೆ. ಸಾರ್ವಜನಿಕರು ಸುಗಮವಾಗಿ ರಸ್ತೆ ದಾಟಲು, ಕೆಂಗೇರಿ ಚೆಕ್‌ಪೋಸ್ಟ್ 29ಕ್ಕೆ ಒಂದು ಸ್ಕೈವಾಕ್ ಅಥವಾ ಸಿಗ್ನಲ್ ದೀಪವನ್ನು ಅಳವಡಿಸಬೇಕು. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು.


ಕೆಂಗೇರಿ ಹೆದ್ದಾರಿ ರಸ್ತೆ

ಎಂ.ಟಿ. ಸ್ವಾಮಿ, ಸ್ಥಳೀಯ ನಿವಾಸಿ

‘ನಾಯಿ ಹಾವಳಿ ನಿಯಂತ್ರಿಸಿ’

ಬಿಟಿಎಂ ಬಡಾವಣೆಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ರಸ್ತೆಗೊಂದರಂತೆ 5–6 ಬೀದಿ ನಾಯಿಗಳಿವೆ. ನಾಯಿಗಳ ಹಾವಳಿಯಿಂದ ವಾಹನ ಸವಾರರು ಸಂಚರಿಸುವುದು ಸಹ ಕಷ್ಟವಾಗುತ್ತಿದೆ. ಬೈಕ್‌ಗಳ ಹಿಂದೆ ಈ ನಾಯಿಗಳು ಬೆನ್ನು ಹತ್ತುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ. ಜತೆಗೆ, ರಾತ್ರಿ ಸಮಯದಲ್ಲಿ ನಾಯಿಗಳು ಬೊಗಳಲು ಶುರು ಮಾಡಿ ನಿದ್ದೆ ಹಾಳು ಮಾಡುತ್ತಿವೆ. ಆದ್ದರಿಂದ ಇವುಗಳ ಹಾವಳಿ ತಪ್ಪಿಸಲು ಬಿಬಿಎಂಪಿ ಕ್ರಮ ಕೈಗೊಳ್ಳಬೇಕು.

ಎಂ. ಜೆ. ಅಭಿಷೇಕ್, ಬಿಟಿಎಂ ನಿವಾಸಿ


ಕೆಂಗೇರಿಯ ಭಗೀರಥ ಕ್ರಾಸ್‌ನಲ್ಲಿ ತೆರೆದ ಸ್ಥಿತಿಯಲ್ಲಿ ವಿದ್ಯುತ್ ಮ್ಯಾನ್‌ಹೋಲ್‌ನ ಮುಚ್ಚಳ

‘ತೆರೆದ ಸ್ಥಿತಿಯಲ್ಲಿ ವಿದ್ಯುತ್ ಮ್ಯಾನ್ ಹೋಲ್’

ಕೆಂಗೇರಿ ಉಪನಗರದ ಭಗೀರಥ ಬಡಾವಣೆಯ 1ನೇ ಕ್ರಾಸ್‌ನಲ್ಲಿ 11 ಕೆವಿ ವಿದ್ಯುತ್ ಮ್ಯಾನ್‌ಹೋಲ್ ಮುಚ್ಚಳ ತೆರೆದುಕೊಂಡ ಸ್ಥಿತಿಯಲ್ಲಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಿದ್ಯಾರ್ಥಿಗಳು, ಚಿಕ್ಕ ಮಕ್ಕಳು, ವೃದ್ಧರು, ಮಹಿಳೆಯರು ಓಡಾಡುತ್ತಾರೆ. ಅನಾಹುತ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ಈ ಮ್ಯಾನ್‌ಹೋಲ್‌ನ ಮುಚ್ಚಳವನ್ನು ಮುಚ್ಚಲು ಕ್ರಮಕೈಗೊಳ್ಳಬೇಕು ಎಂಬುದು ಸ್ಥಳೀಯ ಆಗ್ರಹ.

ಸಿ.ಎನ್. ಭಂಡಾರೆ, ಸ್ಥಳೀಯ ನಿವಾಸಿ

‘ತೆರೆದ ಚರಂಡಿ ಮುಚ್ಚಿ’

ಚಾಮುಂಡಿನಗರದ ಗಿರಿನಗರ ಬಡಾವಣೆಯ ಎಲ್ಲಾ ಅಡ್ಡರಸ್ತೆಗಳಲ್ಲಿ ಹೂಳು ತೆಗೆಯುವ ನೆಪದಲ್ಲಿ ಚರಂಡಿಗೆ ಅಳವಡಿಸಿರುವ ಕಲ್ಲುಗಳನ್ನು ತೆಗೆದು ಹಾಗೆಯೇ ಬಿಡಲಾಗಿದೆ. ಮನೆಯ ಮುಂದೆ ಇರುವ ಚರಂಡಿಗೆ ಹಾಕಿರುವ ಕಲ್ಲುಗಳನ್ನು ತೆಗೆದಿರುವುದರಿಂದ ಓಡಾಟಕ್ಕೆ ತೊಂದರೆಯಾಗಿದೆ. ಮಕ್ಕಳು, ಮಹಿಳೆಯರು, ವೃದ್ಧರು ಮನೆಯಿಂದ ಹೊರ ಬರಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಅವಘಡ ಸಂಭವಿಸುವ ಮುನ್ನ ಕೂಡಲೇ ಸಮಸ್ಯೆಯನ್ನು ಪರಿಹರಿಸಬೇಕು.


ಚಾಮುಂಡಿನಗರದ ಗಿರಿನಗರ ಬಡಾವಣೆಯಲ್ಲಿ ತೆರೆದಿರುವ ಚರಂಡಿ

ಕೃಷ್ಣಮೂರ್ತಿ, ಚಾಮುಂಡಿನಗರದ ನಿವಾಸಿ

ಸರಕು ಸಾಗಣೆ ವಾಹನ ಸಂಚಾರಕ್ಕೆ ನಿರ್ಬಂಧ

ಬೆಂಗಳೂರು: ನಗರದ ಹೊರವಲಯದಲ್ಲಿರುವ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ‘ಇಂಡಿಯಾ ಎನರ್ಜಿ ವೀಕ್–2023’ ಕಾರ್ಯಕ್ರಮ ನಡೆಯಲಿದ್ದು, ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ದೇಶ-ವಿದೇಶಗಳ ಗಣ್ಯರು, ವಿದೇಶಿ ರಾಯಭಾರಿಗಳು, ಕೇಂದ್ರ–ರಾಜ್ಯ ಸಚಿವರು, ವಾಣಿಜ್ಯೋದ್ಯಮಿಗಳು ಹಾಗೂ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಇವರೆಲ್ಲರಿಗೂ ಹಾಗೂ ಸ್ಥಳೀಯ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಸಂಚಾರ ವ್ಯವಸ್ಥೆಯಲ್ಲಿ ಕೆಲ ಬದಲಾವಣೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಫೆ. 8ರವರೆಗೆ ನಿತ್ಯವೂ ಬೆಳಿಗ್ಗೆ 6ರಿಂದ ರಾತ್ರಿ 10 ಗಂಟೆಯವರೆ ಲಘು, ಮಧ್ಯಮ ಹಾಗೂ ಭಾರಿ ಸರಕು ಸಾಗಣೆ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆ ಹಾಗೂ ಹೊರವರ್ತುಲ ರಸ್ತೆಯಲ್ಲಿ ಸರಕು ಸಾಗಣೆ ವಾಹನಗಳು ಸಂಚರಿಸುವಂತಿಲ್ಲ. ಕೆಲವೆಡೆ ಪರ್ಯಾಯ ಮಾರ್ಗಗಳನ್ನು ಕಲ್ಪಿಸಲಾಗಿದೆ’ ಎಂದು ಹೇಳಿದ್ದಾರೆ.

ನಿಧನ ವಾರ್ತೆ

ಎಲ್. ನಾಗಮಣಿ



ಬೆಂಗಳೂರು: ಲೇಖಕ ಡಾ.ಆರ್. ಲಕ್ಷ್ಮೀನಾರಾಯಣ ಅವರ ಪತ್ನಿ ಎಲ್. ನಾಗಮಣಿ (69) ಭಾನುವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರಿಯರು ಇದ್ದಾರೆ.

‘ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಂಗೇರಿಯ ವಿದ್ಯುತ್ ಚಿತಾಗಾರದಲ್ಲಿ ಭಾನುವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು’ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶಿಕ್ಷಣತಜ್ಞ ಎಚ್.ನರಸಿಂಹಯ್ಯ ಅವರು 'ಪಿಯುಸಿ' ಯನ್ನು 'ಪ್ಯುಪಿಲ್ ಅಂಡರ್ ಕನ್ಫ್ಯೂಶನ್' ಎನ್ನುತ್ತಿದ್ದರು. ಈಗ ಪೋಷಕರು, ತಮ್ಮ ಮಕ್ಕಳ ಓದಿಗಾಗಿ ಯಾವ ಕೋರ್ಸ್, ಕಾಲೇಜು ಸೂಕ್ತ ಎಂದು ಹುಡುಕುತ್ತಿರುವುದನ್ನು ನೋಡಿದರೆ, 'ಪೇರೆಂಟ್ಸ್ ಅಂಡರ್ ಕನ್ಫ್ಯೂಶನ್'ಎನ್ನುವಂತಾಗಿದೆ. ಪೋಷಕರು–ಮಕ್ಕಳಲ್ಲಿರಬಹುದಾದ ಕಾಲೇಜಿನ ಆಯ್ಕೆಯ ಗೊಂದಲಗಳಿಗೆ ಈ ಲೇಖನದಲ್ಲಿ ಉತ್ತರಿಸುವ ಪ್ರಯತ್ನ ಮಾಡಲಾಗಿದೆ.

ಪಿಯುಸಿ ಓದಿಗೆ ಹೀಗಿರಲಿ ಕಾಲೇಜು

ಗುರುರಾಜ್ ಎಸ್. ದಾವಣಗೆರೆ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆಗೆ ಆರು ವಾರಗಳು ಬಾಕಿ ಇವೆ. ಆದರೆ ವಿದ್ಯಾರ್ಥಿಗಳ ಪೋಷಕರು ಕಾಲೇಜುಗಳ ಎಡತಾಕಿ, ಏನೇನು ಕಾಂಬಿನೇಶನ್‌ಗಳಿವೆ, ಯಾವ ಭಾಷೆ ಬೋಧಿಸುತ್ತೀರಿ, ಕೋ ಎಜುಕೇಶನ್ನಾ? ಎಂದು ಕೇಳುತ್ತಿದ್ದಾರೆ.

ಇಂಟೆಗ್ರೇಟೆಡ್ ಕೋಚಿಂಗ್ ಇದೆಯಾ? ಕಾಲೇಜು ಪಾಠದ ಜೊತೆ ಹೆಚ್ಚುವರಿ ಪಾಠದ ಅವಶ್ಯಕತೆ ಇದೆಯಾ? ಎಂದು ತಿಳಿಯಲು ಪ್ರಯತ್ನಿಸುತ್ತಿದ್ದಾರೆ. ಸಿ.ಎ ಪರೀಕ್ಷೆಗೆ ತರಬೇತಿ ನೀಡುತ್ತೀರಾ, ನೀಟ್, ಜೆಇಇ ಕೋಚಿಂಗ್ ಇದೆಯಾ? ಸಿಲಬಸ್ ಯಾವಾಗ ಮುಗಿಸುತ್ತೀರಿ? ಎಂದು ವಿಚಾರಿಸುತ್ತಿದ್ದಾರೆ.

ಪ್ರಥಮ ಪಿಯುಸಿಗೆ ಪಬ್ಲಿಕ್ ಪರೀಕ್ಷೆನಾ? ಸ್ಟೇಟ್ ಸಿಲಬಸ್ ಅಥವಾ ಸಿಬಿಎಸ್‌ಸಿ ಸಿಲಬಸ್ ಕಲಿಸುತ್ತೀರಾ? ವಾಹನ ಸೌಲಭ್ಯ ಇದೆಯಾ? ಒಂದು ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ಕೂಡಿಸುತ್ತೀರಿ? ಪ್ರಯೋಗಾಲಯಗಳಲ್ಲಿ ಅಗತ್ಯ ಸಲಕರಣೆಗಳಿವೆಯಾ? ಹೀಗೆ ಪ್ರಶ್ನೆಗಳ ಪಟ್ಟಿ ಹಿಡಿದುಕೊಂಡೇ ಸುತ್ತಾಡುತ್ತಿದ್ದಾರೆ !

'ಕೆಲವರು ನಮ್ಮ ಮಗ ಕಿರಿಯರ ಕ್ರಿಕೆಟ್ ಟೀಂನಲ್ಲಿ ರಾಜ್ಯಮಟ್ಟದ ಸ್ಪರ್ಧಿ. ಅವನಿಗೆ ಮಧ್ಯಾಹ್ನದ ಹೊತ್ತು ಕೋಚಿಂಗ್ ಇರುತ್ತದೆ. ಆಗೆಲ್ಲ ಕ್ಲಾಸಿಗೆ ಬರಲ್ಲ. ಅಟೆಂಡೆನ್ಸ್ ಕೊಡ್ತೀರಾ' ಎಂದು ಪ್ರಶ್ನೆ ಕೇಳುತ್ತಾರೆ. ಪತಿ–ಪತ್ನಿಯರಿಬ್ಬರೂ ಕೆಲಸಕ್ಕೆ ಹೋಗುವವರು, ಶಿಕ್ಷಣ ಸಂಸ್ಥೆಗಳಲ್ಲಿ ವಸತಿ ಸೌಲಭ್ಯ ಸೌಲಭ್ಯವಿದೆಯಾ? ಎಂದು ಕೇಳುತ್ತಾರೆ.

'ಪಿಸಿಎಂಬಿ ಒಳ್ಳೆಯದಾ? ಅಥವಾ ಕಂಪ್ಯೂಟರ್ ಸೈನ್ಸ್/ಎಲೆಕ್ಟ್ರಾನಿಕ್ಸ್ ಕೊಡಿಸಬೇಕಾ? ಐ.ಟಿ ಉದ್ಯೋಗ ಕಡಿಮೆಯಾಗಿದೆ. ಕೆಲಸ ಸಿಗುತ್ತಾ?. ಕಾಮರ್ಸ್‌ನಲ್ಲಿ ಕರಿಯರ್ ಆಯ್ಕೆ ಏನು? ಆರ್ಟ್ಸ್‌ನಲ್ಲಿ ಸೈಕಾಲಜಿ ಬೇಕು. ಮಗ ಗಣಿತದಲ್ಲಿ ಸ್ವಲ್ಪ ವೀಕು. ಆದರೆ ವಿಜ್ಞಾನ ಇಷ್ಟ...' ಹೀಗೆ ಪೋಷಕರ ಪಟ್ಟಿ ಬೆಳೆಯುತ್ತ ಹೋಗುತ್ತದೆ.

ಕಾಲೇಜಿನ ಆಯ್ಕೆ ಹೀಗಿರಲಿ...

- ವಿಜ್ಞಾನ ವಿಷಯ ಓದಬೇಕೆನ್ನುವ ವಿದ್ಯಾರ್ಥಿಗಳು ಸುಸಜ್ಜಿತ ಪ್ರಯೋಗಾಲಯ ಮತ್ತು ನುರಿತ ಅಧ್ಯಾಪಕರಿರುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಬಗ್ಗೆ ತಿಳಿಯಲು ಪೋಷಕರು ಕಾಲೇಜುಗಳನ್ನು ಖುದ್ದಾಗಿ ಸಂದರ್ಶಿಸಬೇಕು. ಅಲ್ಲಿನ ಪ್ರಾಚಾರ್ಯರು, ದಾಖಲಾತಿ ಸಂಯೋಜಕರು, ವಿಭಾಗ ಮುಖ್ಯಸ್ಥರನ್ನು ಭೇಟಿ ಮಾಡಿ, ಸೂಕ್ತ ಅನುಮತಿಯೊಂದಿಗೆ ಪ್ರಯೋಗಾಲಯಗಳನ್ನು ಹೊಕ್ಕು ನೋಡಬೇಕು.
- ಆರ್ಟ್ಸ್ ಅಥವಾ ಕಾಮರ್ಸ್ ಆಯ್ಕೆ ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಉತ್ತಮ ಗ್ರಂಥಾಲಯವಿರುವ ಕಾಲೇಜನ್ನು ಆಯ್ಕೆ ಮಾಡಿಕೊಳ್ಳಬೇಕು. ಪಠ್ಯಪುಸ್ತಕದಲ್ಲಿರುವ ತಾತ್ವಿಕ ವಿಷಯಗಳು ಅರಿತುಕೊಳ್ಳಲು ಸಾಕಷ್ಟು ಪುಸ್ತಕಗಳು, ನಿಯತಕಾಲಿಕಗಳು ಇರಬೇಕು.
- ಹಂತ ಹಂತದ ಪರೀಕ್ಷೆ ನಡೆಸುವ, ಉತ್ತರ ಪತ್ರಿಕೆ ಮೌಲ್ಯ ಮಾಪನ ಮಾಡುವ, ಅಂಕಪಟ್ಟಿ ವಿತರಿಸುವ, ಪೋಷಕರ ಸಭೆಗಳನ್ನು ನಿಗದಿತವಾಗಿ ಕರೆದು ಕಲಿಕಾ ನ್ಯೂನತೆ ಮತ್ತು ಉತ್ತಮಿಕೆಗಳನ್ನು ಚರ್ಚಿಸುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಿ.
- ವರ್ಷದುದ್ದಕ್ಕೂ ಮಾಡಬೇಕಾದ ಪ್ರಯೋಗಗಳನ್ನು ಕೇವಲ ಒಂದು ತಿಂಗಳಿನಲ್ಲಿ ಕಲಿಸುವ ಕಾಲೇಜುಗಳೂ ಇವೆ. ಮಕ್ಕಳು ನೋಟ್ಸ್ ಬರೆದುಕೊಳ್ಳುವ ಅವಶ್ಯಕತೆ ಇಲ್ಲ. ಎಲ್ಲವೂ ಟ್ಯಾಬ್‌ನಲ್ಲಿ ಸಿಗುತ್ತವೆ ಎನ್ನುವ ಕಾಲೇಜುಗಳಿಂದ ದೂರವಿರಿ.
- ಓದಿನಲ್ಲಿ ಹಿಂದುಳಿಯುವ ಮಕ್ಕಳ ಸುಧಾರಣೆಗೆ ಕೌನ್ಸಿಲಿಂಗ್ ಅವಶ್ಯಕತೆ ಇರುತ್ತದೆ. ಆಪ್ತ ಸಮಾಲೋಚನಾ ವ್ಯವಸ್ಥೆ ಇರುವ ಕಾಲೇಜುಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿರುತ್ತದೆ.
- ಕಾಲೇಜಿನಲ್ಲಿ ಶೇ 75ರಷ್ಟು ಹಾಜರಾತಿ ಇರಲೇಬೇಕೆಂಬ ಕಠಿಣ ನಿಯಮವಿದೆ. ಇದನ್ನು ಪಾಲಿಸುವ ಕಾಲೇಜುಗಳಿಗೆ ಮಾತ್ರ ಮಕ್ಕಳನ್ನು ಸೇರಿಸುವುದು ಒಳಿತು.

ದೇಶದಾದ್ಯಂತ ಒಂದೇ ಸಿಲಬಸ್

ಪದವಿ ಪೂರ್ವ ಶಿಕ್ಷಣ ಬೋಧಿಸುವ ಎಲ್ಲಾ ರಾಜ್ಯಗಳು ಎನ್‌ಸಿಇಆರ್‌ಟಿ ಪಠ್ಯಕ್ರಮವನ್ನು ಬೋಧಿಸುತ್ತವೆ. ಸ್ಟೇಟ್ ಸಿಲಬಸ್ ಮತ್ತು ಸೆಂಟ್ರಲ್ ಸಿಲಬಸ್ ಎಂಬ ಭೇದಗಳಿಲ್ಲ. ಸಿಬಿಎಸ್‌ಇ ಪಠ್ಯಕ್ರಮದ ಶಾಲೆಗಳ 11ಮತ್ತು 12ನೇ ತರಗತಿಯ ಪಠ್ಯಕ್ರಮಕ್ಕೂ ನಮ್ಮ ರಾಜ್ಯದ ಪಿಯುಸಿ ಪಠ್ಯಕ್ರಮಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಪರೀಕ್ಷಾ ವಿಧಾನಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ.

ಓದಲು ಸಮಯ ಬೇಕು

ಯಾವುದೇ ಪದವಿ ಪೂರ್ವ ಕಾಲೇಜಿನಲ್ಲಿ ದಿನಕ್ಕೆ ಆರರಿಂದ ಎಂಟು ತಾಸುಗಳು ಶೈಕ್ಷಣಿಕ ಚಟುವಟಿಕೆ ನಡೆಯುತ್ತದೆ. ತಾತ್ವಿಕ -ಪ್ರಾಯೋಗಿಕ ತರಗತಿ, ಅಸೈನ್‌ಮೆಂಟ್, ಪರಿಹಾರ ಬೋಧನೆ, ಎನ್‌ರಿಚ್‌ಮೆಂಟ್ ಕೋಚಿಂಗ್, ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳ ತರಬೇತಿ, ಕಿರು, ಮಧ್ಯ, ಪೂರ್ವಭಾವಿ ಅಂತಿಮ ಪರೀಕ್ಷೆಗಳಿರುತ್ತವೆ. ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರವಾಸಗಳಿರುತ್ತವೆ. ಎಸ್‌ಎಸ್‌ಎಲ್‌ಸಿ ಗೆ ಹೋಲಿಸಿದರೆ ಪಿಯುಸಿ ಸಿಲಬಸ್ ಸವಾಲಿನದ್ದು. ಉತ್ತಮ ಅಂಕಗಳಿಸಲು ಹೆಚ್ಚಿನ ಶ್ರಮ ಪಡಬೇಕು. ಅದಕ್ಕಾಗಿ ಹೆಚ್ಚಿನ ಸಮಯ ಬೇಕು. ಕಾಲೇಜಿನ ನಂತರ ಮಕ್ಕಳು ಟ್ಯೂಶನ್‌ಗೆ ಹೋಗಬೇಕೆಂದು ಬಯಸುವವರು ಮನೆಯ ಸಮೀಪದ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವುದು ಅತ್ಯಂತ ಸೂಕ್ತ.

ಚಿಕ್ಕ ತರಗತಿ, ಚೊಕ್ಕ ಪಾಠ

ತರಗತಿಯಲ್ಲಿನ ವಿದ್ಯಾರ್ಥಿಗಳೆಷ್ಟು ಎಂಬುದನ್ನೂ ತಿಳಿದುಕೊಳ್ಳಿರಿ. 80, 100 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಕೂರಿಸಿ ಕೊಂಡು ಏನೇ ಪಾಠ ಮಾಡಿದರೂ ವಿದ್ಯಾರ್ಥಿಗಳಿಗೆ ಸರಿಯಾಗಿ ಅರ್ಥವಾಗುವುದಿಲ್ಲ. ಮೂಲಸೌಲಭ್ಯಗಳ ಕೊರತೆ ಇರುವ ಅನೇಕ ಕಾಲೇಜುಗಳಲ್ಲಿ ಈ ಸಮಸ್ಯೆ ಇದೆ. ಉಪನ್ಯಾಸಕ ವಿದ್ಯಾರ್ಥಿ ಅನುಪಾತ 50:1 ಇದ್ದರಷ್ಟೇ ಒಳಿತು.

ಬೋಧನಾ ಮಾಧ್ಯಮ ಬಹಳ ಮುಖ್ಯ

ಹೈಸ್ಕೂಲಿನವರೆಗೆ ಮಗುವಿನ ಶಿಕ್ಷಣ ಆಂಗ್ಲ ಮಾಧ್ಯಮದಲ್ಲೇ ಆಗಿದ್ದರೆ ಇದರಿಂದ ಪಿಯುಸಿ ವಿಜ್ಞಾನ ಶಿಕ್ಷಣಕ್ಕೆ ಅನುಕೂಲವಾಗುತ್ತದೆ. ಆದರೆ, ಕನ್ನಡ ಮಾಧ್ಯಮದಲ್ಲಿ ಓದಿದವರು ಆಂಗ್ಲ ಮಾಧ್ಯಮದ ವಿಜ್ಞಾನ ಶಿಕ್ಷಣಕ್ಕೆ ಹೊಂದಿಕೊಳ್ಳಲು ವಿಶೇಷ ಶ್ರಮ ವಹಿಸಬೇಕಾಗುತ್ತದೆ. ಏಕೆಂದರೆ ರಾಜ್ಯದಾದ್ಯಂತ ಪಿಯುಸಿ ವಿಜ್ಞಾನ ಶಿಕ್ಷಣ ಬೋಧಿಸುವ ಕಾಲೇಜುಗಳ ಬೋಧನಾ ಮಾಧ್ಯಮ ಇಂಗ್ಲಿಷ್ ಆಗಿದೆ.

ಗ್ರಾಮೀಣ ಹಾಗೂ ತಾಲ್ಲೂಕು ಕೇಂದ್ರಗಳ ಕೆಲ ಕಾಲೇಜುಗಳಲ್ಲಿ ಕನ್ನಡದಲ್ಲಿ ಬೋಧನೆ ನಡೆಯುತ್ತದೆಯಾದರೂ ವಾರ್ಷಿಕ ಪರೀಕ್ಷೆಯನ್ನು ಆಂಗ್ಲ ಮಾಧ್ಯಮದಲ್ಲೇ ಬರೆಯಬೇಕಾಗುತ್ತದೆ. ಆರ್ಟ್ಸ್ ಮತ್ತು ಕಾಮರ್ಸ್ ವಿಭಾಗದವರು ಕನ್ನಡದ ಮಾಧ್ಯಮದಲ್ಲಿಯೇ ಕಲಿಯಬಹುದು ಮತ್ತು ಪರೀಕ್ಷೆ ಎದುರಿಸಬಹುದು.

ಇನ್ನಷ್ಟು ಟಿಪ್ಸ್


- ಕಾಲೇಜು ಹತ್ತು - ಹದಿನೈದು – ಇಪ್ಪತ್ತೈದು ವರ್ಷಗಳಷ್ಟು ಹಳೆಯದಾಗಿದ್ದರೆ ಕಳೆದ ಐದು ವರ್ಷಗಳ ದ್ವಿತೀಯ ಪಿಯುಸಿ ಫಲಿತಾಂಶ ಹೇಗಿತ್ತು ಎಂಬುದನ್ನು ತಿಳಿದುಕೊಳ್ಳಿ. ಉತ್ತೀರ್ಣ ಪ್ರಮಾಣ ಶೇ 50ಕ್ಕಿಂತ ಕಡಿಮೆ ಇರುವ ಕಾಲೇಜುಗಳು ಬೇಡ.
- ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡುವ ಉಪನ್ಯಾಸಕರಿಗೆ ಇತರರಿಗಿಂತ ಹೆಚ್ಚು ವಿಷಯ ಜ್ಞಾನವಿರುತ್ತದೆ. ಅಂಥ ಉಪನ್ಯಾಸಕರು ಹೆಚ್ಚಿರುವ ಕಾಲೇಜುಗಳು ನಿಮ್ಮ ಮಗುವಿನ ಪಿಯುಸಿ ಓದಿಗೆ ಅತ್ಯಂತ ಸೂಕ್ತ.
- ಸಿಇಟಿ, ನೀಟ್, ಐಐಟಿ, ಜೆಇಇ ರ್‍ಯಾಂಕಿಂಗ್ ಚೆನ್ನಾಗಿರುವ ಕಾಲೇಜುಗಳು ಉತ್ತಮ ಶಿಕ್ಷಣ ನೀಡುತ್ತವೆ. ಆದರೆ ಅಲ್ಲಿನ ಶುಲ್ಕ ದುಬಾರಿ ಇರುತ್ತದೆ. ಸಂದಾಯ ಮಾಡುವ ಶಕ್ತಿ ಇದ್ದರೆ ಮಾತ್ರ ಆಯ್ಕೆ ಮಾಡಿಕೊಳ್ಳಿರಿ.
- ದೇಶದ ರಾಷ್ಟ್ರೀಯ ಹಬ್ಬ, ನಾಡಹಬ್ಬ, ಸಾಂಸ್ಕೃತಿಕ - ಸಾಂವಿಧಾನಿಕ ಮಹತ್ವದ ಹಬ್ಬಗಳನ್ನು ತಪ್ಪದೇ ಅಚರಿಸುವ ಕಾಲೇಜುಗಳು ಉತ್ತಮ ಆಯ್ಕೆ.
- ಸಮವಸ್ತ್ರ ಕಡ್ಡಾಯಗೊಳಿಸಿರುವ ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಇಲಾಖೆಯ ನಿಯಮಗಳ ಜೊತೆ ಆಯಾ ಸಂಸ್ಥೆಗಳು ವಿಧಿಸುವ ಕೆಲವು ಆಂತರಿಕ ಷರತ್ತು ಗಳನ್ನು ವಿದ್ಯಾರ್ಥಿಗಳು ಪಾಲಿಸಬೇಕಾಗುತ್ತದೆ.

ಡಿಪ್ಲೊಮಾ ನಂತರ ಮುಂದೇನು?

- **ನಾನು 2017ರಲ್ಲಿ ಡಿಪ್ಲೊಮಾ (ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್) ಮುಗಿಸಿದ್ದೇನೆ. ಎಂಜಿನಿಯರಿಂಗ್ ಬಿಟ್ಟು ಬೇರೆ ಯಾವ ಪದವಿ/ಕೋರ್ಸ್ ಮಾಡಬಹುದು? ದೂರ ಶಿಕ್ಷಣದಲ್ಲಿ ಮಾಡಬಹುದೇ?**

ಹೆಸರು, ಊರು ತಿಳಿಸಿಲ್ಲ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ನೀವು ಈಗ ಯಾವ ಉದ್ಯೋಗದಲ್ಲಿದ್ದೀರಿ ಎಂದು ತಿಳಿಸಿಲ್ಲ. ಹಾಗಾಗಿ, ಈಗ ಉದ್ಯೋಗದಲ್ಲಿರುವ ಅಥವಾ ನಿಮ್ಮ ಆಸಕ್ತಿ ಮತ್ತು ಅಭಿರುಚಿಯಂತೆ ಯಾವ ಉದ್ಯೋಗವನ್ನು ಮಾಡಲು ಇಚ್ಛಿಸುತ್ತೀರ, ಅದಕ್ಕೆ ಅನುಗುಣವಾಗಿ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್ ಮಾಡಬಹುದು. ಉದಾಹರಣೆಗೆ ರೊಬೊಟಿಕ್ಸ್, ಮೆಕಾಟ್ರಾನಿಕ್ಸ್, ವಿಎಲ್‌ಎಸ್‌ಐ, ಪಿಎಲ್‌ಸಿ, ನೆಟ್‌ವರ್ಕಿಂಗ್, ಏರ್‌ಕ್ರಾಫ್ಟ್ ನಿರ್ವಹಣೆ, ಪ್ರೋಗ್ರಾಮಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಮತ್ತು ನಿರ್ವಹಣೆ ಇತ್ಯಾದಿ. ಈ ಕೋರ್ಸ್‌ಗಳನ್ನು ವಾರಾಂತ್ಯ/ದೂರಶಿಕ್ಷಣ/ಆನ್‌ಲೈನ್ ಪದ್ಧತಿಗಳಲ್ಲಿ ಮಾಡಬಹುದು. ಹಾಗಾಗಿ, ವೃತ್ತಿಯ ಅನುಭವ, ಆಸಕ್ತಿ ಮತ್ತು ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ವೃತ್ತಿಯೋಜನೆಯನ್ನು ಮಾಡಿದರೆ, ಮುಂದಿನ ಹಾದಿ ಸ್ಪಷ್ಟವಾಗುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/@ExpertCareerConsultantAuthor

- **ನಾನು ಪದವಿ ಮುಗಿಸಿ ಸರ್ಕಾರಿ ಹುದ್ದೆಯನ್ನು ಅರಸುತ್ತಿದ್ದೇನೆ. ನನ್ನ ಬಾಲ್ಯದ ಶಿಕ್ಷಣವನ್ನು ನಮ್ಮ ಹಳ್ಳಿಯ ಕನ್ನಡ ಶಾಲೆಯಲ್ಲಿ ಮುಗಿಸಿದ್ದು, ಗ್ರಾಮೀಣ ಮತ್ತು ಕನ್ನಡ ಮಾಧ್ಯಮದ ಸರ್ಟಿಫಿಕೆಟ್ ಪಡೆಯಲು ಹೋದಾಗ ಶಾಲೆ ಬಿಟ್ಟ ಮಕ್ಕಳ ಚಿಣ್ಣರ ಅಂಗಳ ಕಾರ್ಯಕ್ರಮದಡಿ ನಿನ್ನನ್ನು ನೇರವಾಗಿ 2ನೇ ತರಗತಿಗೆ ದಾಖಲಿಸಿಕೊಳ್ಳಲಾಗಿದೆ ಎಂದರು. ಆದ್ದರಿಂದ, ಈಗ ಕನ್ನಡ ಮತ್ತು ಗ್ರಾಮೀಣ ಮಾಧ್ಯಮ ಸರ್ಟಿಫಿಕೆಟ್ ಸಿಗದೆ, ನನಗೆ ಕಲ್ಯಾಣ ಕರ್ನಾಟಕ ಸರ್ಟಿಫಿಕೆಟ್ ಕೂಡ ತಿರಸ್ಕರಿಸಿದ್ದಾರೆ. ಹಾಗಾಗಿ, ಸರ್ಕಾರಿ ಹುದ್ದೆಗಳಿಗೆ ಮೀಸಲಾತಿ ಸಿಗದೆ, ತೊಂದರೆಯಲ್ಲಿದ್ದೇನೆ. ದಯವಿಟ್ಟು ಸಲಹೆ ನೀಡಿ.**

ಹೆಸರು, ಊರು ತಿಳಿಸಿಲ್ಲ



ಚಿಣ್ಣರ ಅಂಗಳ ಕಾರ್ಯಕ್ರಮದ ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ, ಅವರನ್ನು ಶಾಲಾವಾಹಿನಿಗೆ ಕರೆತರುವುದು ಸರ್ಕಾರದ ಅಧಿಕೃತ ಯೋಜನೆ. ನೀವು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಮಗೆ ಅರ್ಹತಾ ಧೃಡೀಕರಣ ಪತ್ರವನ್ನು ನೀಡಬೇಕು. ಹಾಗಾಗಿ, ನಮ್ಮ ಅಭಿಪ್ರಾಯದಂತೆ ಈಗಲೂ ಈ ಅರ್ಹತಾ ಪತ್ರವನ್ನು ಪಡೆದುಕೊಂಡು, ಕಲ್ಯಾಣ ಕರ್ನಾಟಕ ಸರ್ಟಿಫಿಕೆಟ್‌ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಸಹಾಯಕ ಆಯುಕ್ತರ ಕಚೇರಿಯಲ್ಲಿ ವಿಚಾರಿಸಿ ಅಥವಾ ಈ ಜಾಲತಾಣವನ್ನು ಗಮನಿಸಿ: **https://nadakacheri.karnataka.gov.in/ajsk**

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ: ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಹಾಗೂ ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in**ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ನೆಟಾಪ್ಸ್ ಫೌಂಡೇಷನ್ ಇಂಟರ್ನ್‌ಷಿಪ್‌ಗೆ ಅರ್ಜಿ ಆಹ್ವಾನ

ದೇಶ ಮತ್ತು ವಿದೇಶಗಳಲ್ಲಿ ಸಲಹೆ ಮತ್ತು ಸೇವೆ ಮೂಲಕ ಶಿಕ್ಷಣ ನೀಡುತ್ತಿರುವ ಹೆಸರಾಂತ ಸಂಸ್ಥೆ ನೆಟಾಪ್ಸ್(NETAPS) ಫೌಂಡೇಷನ್, ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಂದ 'ಲೀಡ್ ಜನರೇಷನ್ ಎಕ್ಸಿಕ್ಯೂಟಿವ್ ಇಂಟರ್ನ್‌ಷಿಪ್ – 2023'ಗಾಗಿ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ಕೌಶಲ ಮತ್ತು ಆಸಕ್ತಿಗಳಿರುವ ಪದವಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಇದು 6 ತಿಂಗಳ ಅವಧಿಯದ್ದಾಗಿದೆ.

ಆರ್ಥಿಕ ನೆರವು: ಮಾಸಿಕ ₹ 10,000 ಮತ್ತು ಇತರೆ ಸೌಲಭ್ಯಗಳು

ಅರ್ಜಿ ಸಲ್ಲಿಕೆ ಕೊನೆ ದಿನ: ಮಾರ್ಚ್ 31, 2023

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/TASD4ಷ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

7) ನಾವು ಪರ್ಯಾಯ ಇಂಧನ ಆಕರಗಳತ್ತ ಗಮನ ಹರಿಸುತ್ತೇವೆ ಏಕೆ?

ಉತ್ತರ:- (ಜೂನ್2020)

- ನಮ್ಮ ಶಕ್ತಿಯ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.
- ಸಾಂಪ್ರದಾಯಿಕ ಶಕ್ತಿಯ ಆಕರಗಳ ವಿಪರೀತ ಬಳಕೆಯಿಂದಾಗಿ ಪರಿಸರ ಮಾಲಿನ್ಯದ ಸಮಸ್ಯೆ ಉಂಟಾಗುತ್ತದೆ.
- ಪರಿಸರ ಮಾಲಿನ್ಯದ ಸಮಸ್ಯೆಗಳಿಂದಾಗಿ ಸಾಕಷ್ಟು ರೋಗಗಳು ಉಲ್ಬಣವಾಗುತ್ತದೆ.
- ಅಂತರರಾಷ್ಟ್ರೀಯವಾಗಿ ಭಾರತವು ಅನೇಕ ತರಹದ ಒಪ್ಪಂದ ಮಾಡಿಕೊಂಡಿದ್ದು, 2030ರ ಹೊತ್ತಿಗೆ ಪರಿಸರ ಮಾಲಿನ್ಯ ತಡೆಯುವಂತಹ ಇಂಧನ ಬಳಸುವಲ್ಲಿ ನಾವು ಮುನ್ನಡೆಯಬೇಕಾಗಿದೆ.

8) ಹೈಪರ್ ಮೆಟ್ರೋಪಿಯಾ ಅಥವಾ ದೂರದೃಷ್ಟಿ ಎಂದರೇನು? ಅದನ್ನು ಸರಿಪಡಿಸಲು ಬಳಸುವ ಮಸೂರದ ವಿಧವನ್ನು ಹೆಸರಿಸಿ.

ಉತ್ತರ:- ದೂರದೃಷ್ಟಿ ಹೊದಿರುವ ವ್ಯಕ್ತಿ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲ ಆದರೆ ಹತ್ತಿರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರ.

ಈ ದೋಷವನ್ನು ಪೀನ ಮಸೂರದ ಸಹಾಯದಿಂದ ಸರಿಪಡಿಸಬಹುದು.

9) ಒಂದು ವಿದ್ಯುತ್ ಹೀಟರ್, ವಿದ್ಯುತ್ ಮೂಲದಿಂದ 4 A ವಿದ್ಯುತ್ ಸೆಳೆಯುವಾಗ ಅದರ ತುದಿಗಳ ನಡುವಿನ ವಿಭವಾಂತರವು 60 V ಆಗಿದ್ದು ಸದರಿ ವಿದ್ಯುತ್ ಹಿಟರ್‌ನ ವಿಭವಾಂತರವನ್ನು 120 V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹಿಟರ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

ಪರಿಹಾರ :

ಕೊಟ್ಟಿರುವುದು, ವಿಭವಾಂತರ V = 60 V,

ವಿದ್ಯುತ್‌ಪ್ರವಾಹ I = 4 A.

ಓಮ್‌ನ ನಿಯಮದ ಪ್ರಕಾರ,

$$R = \frac{V}{I} = \frac{60V}{4A} = 15\Omega$$


ವಿದ್ಯುತ್ ಹಿಟರ್‌ನ ವಿಭವಾಂತರವನ್ನು 120 Vಗೆ ಹೆಚ್ಚಿಸಿದಾಗ ಆ ವಿದ್ಯುತ್ ಹಿಟರ್ ಸೆಳೆಯುವ ವಿದ್ಯುತ್ ಪ್ರವಾಹವು

ವಿದ್ಯುತ್ ಪ್ರವಾಹ $= \frac{V}{R} = \frac{120V}{15\Omega} = 8A$

ವಿದ್ಯುತ್ ಹಿಟರ್ ಸೆಳೆಯುವ ವಿದ್ಯುತ್ ಪ್ರವಾಹ 8 A.

10) ಮಾನವನ ಜೀರ್ಣಾಂಗವ್ಯೂಹದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ


ಉತ್ತರ:-



11) ವಿದ್ಯುತ್ ಮೋಟಾರ್ ಹೇಗೆ ಕೆಲಸ ಮಾಡುತ್ತದೆ?

ಉತ್ತರ:- ಚಿತ್ರದಲ್ಲಿ ತೋರಿಸಿರುವಂತೆ ವಿದ್ಯುತ್ ಮೋಟಾರ್, ಒಂದು ಅವಾಹಕ ಲೇಪನವಿರುವ ತಾಮ್ರದ ತಂತಿಯನ್ನೊಳಗೊಂಡ ಆಯತಾಕಾರದ ಸುರುಳಿ ABCಯನ್ನು ಹೊಂದಿದೆ. ಅಯಸ್ಕಾಂತದ ಎರಡು ಧ್ರುವಗಳ ನಡುವೆ ಸುರುಳಿಯನ್ನು ಇರಿಸಲಾಗಿದೆ. ಸುರುಳಿಯ AB ಮತ್ತು CD ಬದಿಗಳು ಕಾಂತಕ್ಷೇತ್ರದ ದಿಕ್ಕಿಗೆ ಲಂಬವಾಗಿರುತ್ತವೆ. ಸುರುಳಿಯ ತುದಿಗಳನ್ನು ಎರಡು ಒಡಕು ಉಂಗುರ (Split rings)) ಗಳಾದ P ಮತ್ತು Q ಗಳಿಗೆ ಜೋಡಿಸಲಾಗಿದೆ. ಒಡಕು ಉಂಗುರಗಳ ಆಂತರಿಕ ಬದಿಗಳನ್ನು ಇನ್ಸುಲೇಟ್ ಮಾಡಿ ಒಂದು ದಂಡಕ್ಕೆ (axle)) ಲಗತ್ತಿಸಲಾಗಿದೆ. ಚಿತ್ರದಲ್ಲಿ ತೋರಿಸಿರುವಂತೆ ಸ್ಪರ್ಶಿಸುವ ಒಡಕು ಉಂಗುರ P ಮತ್ತು Q ಗಳ ಬಾಹ್ಯ ವಾಹಕ ತುದಿಗಳು ಅನುಕ್ರಮವಾಗಿ ಸ್ಥಿರ ವಾಹಕ ಕುಂಚ (brush)) X ಮತ್ತು y ಗಳನ್ನು ಸ್ಪರ್ಶಿಸಿವೆ. ಸುರುಳಿABCDಯಲ್ಲಿನ ವಿದ್ಯುತ್ ಪ್ರವಾಹವು ವಿದ್ಯುತ್ ಕೋಶದಿಂದ ವಾಹಕ ಕುಂಚ Xನ ಮೂಲಕ ಪ್ರವೇಶಿಸಿ ಮತ್ತು ವಾಹಕ ಕುಂಚ Y ನ ಮೂಲಕ ವಿದ್ಯುತ್ ಕೋಶಕ್ಕೆ ವಾಪಾಸಾಗುತ್ತದೆ. ಸುರುಳಿಯ ಒಂದು ಬಾಹು ABಯಲ್ಲಿ ವಿದ್ಯುತ್ A ನಿಂದ Bಗೆ ಹರಿಯುತ್ತದೆ.

CD ಬಾಹುವಿನಲ್ಲಿ Cಯಿಂದ Dಗೆ ಹರಿಯುತ್ತದೆ. ಅಂದರೆ, ವಿದ್ಯುತ್ AB ಬಾಹುವಿನಲ್ಲಿನ ದಿಕ್ಕಿನ ವಿರುದ್ದ ದಿಕ್ಕಿನಲ್ಲಿ ಹರಿಯುತ್ತದೆ. ಫ್ಲೆಮಿಂಗನ ಎಡಗೈ ನಿಯಮವನ್ನು ಅನ್ವಯಿಸಿದಾಗ ಕಾಂತಕ್ಷೇತ್ರದಲ್ಲಿ ವಿದ್ಯುತ್ ಪ್ರವಹಿಸುತ್ತಿರುವ ವಾಹಕದ ಮೇಲೆ ಉಂಟಾಗುವ ಬಲದ ದಿಕ್ಕು ತಿಳಿಯುತ್ತದೆ (ಚಿತ್ರ ನೋಡಿ). ಸುರುಳಿಯ ಒಂದು ಬಾಹು ABಯ ಮೇಲೆ ಕಾರ್ಯನಿರ್ವಹಿಸುವ ಬಲವು ಅದನ್ನು ಕೆಳಕ್ಕೆ ತಳ್ಳುತ್ತದೆ. ಆದರೆ ಬಾಹು CD ಯ ಮೇಲೆ ಉಂಟಾಗುವ ಬಲವು ಅದನ್ನು ಮೇಲಕ್ಕೆ ತಳ್ಳುತ್ತದೆ. ಆದ್ದರಿಂದ ಸುರುಳಿ ಮತ್ತು ದಂಡ O ಗಳು ಅಕ್ಷದ (axis) ಮೇಲೆ ಮುಕ್ತವಾಗಿ ಅಪ್ರದಕ್ಷಿಣಾಕಾರವಾಗಿ ತಿರುಗುತ್ತವೆ. ಅರ್ಧ ಪರಿಭ್ರಮಣೆಯ ಸಮಯದಲ್ಲಿ Q ಯು ಕುಂಚ X ನೊಂದಿಗೆ ಮತ್ತು P ಯು ಕುಂಚ Yನೊಂದಿಗೆ ಸಂಪರ್ಕ ಹೊಂದುತ್ತದೆ. ಆದರಿಂದ ಸುರುಳಿಯಲ್ಲಿನ ವಿದ್ಯುತ್ ಪ್ರವಾಹವು ಹಿಮ್ಮುಖಗೊಳ್ಳುತ್ತದೆ ಮತ್ತು DCBAಮಾರ್ಗದಲ್ಲಿ ಪ್ರವಹಿಸುತ್ತದೆ. ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುವ ಸಾಧನವನ್ನು ದಿಕ್ಪರಿವರ್ತಕ (commutator) ಎಂದು ಕರೆಯುತ್ತಾರೆ. ವಿದ್ಯುತ್ ಮೋಟಾರ್‌ಗಳಲ್ಲಿ ಒಡಕು ಉಂಗುರಗಳು (split rings) ದಿಕ್ಪರಿವರ್ತಕಗಳಾಗಿ ಕಾರ್ಯನಿರ್ವಹಿಸುತ್ತವೆ. ಹಿಮ್ಮುಖವಾದ ವಿದ್ಯುತ್‌ಪ್ರವಾಹವು ಎರಡೂ ಬದಿಗಳಾದ AB ಮತ್ತು CD ಮೇಲೆ ವರ್ತಿಸುವ ಬಲದ ದಿಕ್ಕನ್ನು ಕೂಡ ಹಿಮ್ಮುಖಗೊಳಿಸುತ್ತದೆ. ಹೀಗೆ,



ಮೊದಲು ಕೆಳಕ್ಕೆ ತಳ್ಳಲ್ಪಟ್ಟ ಸುರುಳಿಯ AB ಬದಿಯು ಈಗ ಮೇಲಕ್ಕೆ ತಳ್ಳಲ್ಪಡುತ್ತದೆ. ಮತ್ತು ಮೊದಲು ಮೇಲಕ್ಕೆ ತಳ್ಳಲ್ಪಟ್ಟ CD ಬದಿಯು ಈಗ ಕೆಳಕ್ಕೆ ತಳ್ಳಲ್ಪಡುತ್ತದೆ. ಆದ್ದರಿಂದ ಸುರುಳಿ ಮತ್ತು ದಂಡವು ಅದೇ ದಿಕ್ಕಿನಲ್ಲಿ ಅರ್ಧಸುತ್ತು ಹೆಚ್ಚು ಸುತ್ತುತ್ತವೆ. ಪ್ರತಿ ಅರ್ಧಸುತ್ತಿನ ತಿರುಗುವಿಕೆಯಲ್ಲಿ ವಿದ್ಯುತ್ ಪ್ರವಾಹದ ದಿಕ್ಕು ಹಿಮ್ಮುಖವಾಗುತ್ತದೆ. ಇದು ಸುರುಳಿ ಮತ್ತು ದಂಡದ ನಿರಂತರ ಸುತ್ತುವಿಕೆಗೆ ಕಾರಣವಾಗುತ್ತದೆ. ವಾಣಿಜ್ಯ ಮೋಟಾರ್‌ಗಳಲ್ಲಿ (i) ಸ್ಥಿರವಾದ ಕಾಂತದ ಸ್ಥಳದಲ್ಲಿ ವಿದ್ಯುತ್ಕಾಂತವನ್ನು (ii) ವಿದ್ಯುತ್ ವಾಹಕ ಸುರುಳಿಯಲ್ಲಿ ಹೆಚ್ಚಿನ ಸಂಖ್ಯೆಯ ಸುತ್ತುಗಳನ್ನು ಹೊಂದಿರುವ ತಂತಿಗಳನ್ನು ಮತ್ತು (iii) ಸುರುಳಿಯಿಂದ ಸುತ್ತಲ್ಪಟ್ಟ ಮೃದು ಕಬ್ಬಿಣವನ್ನು ಬಳಸಲಾಗುತ್ತದೆ. ಮೃದುವಾದ ಕಬ್ಬಿಣದ ಮೇಲೆ ತಂತಿ ಸುರುಳಿಯನ್ನು ಸುತ್ತಿರುವುದು ಮತ್ತು ಸುರುಳಿಗಳನ್ನು ಒಳಗೊಂಡ ರಚನೆಯನ್ನು ಆರ್ಮೇಚರ್ ಎಂದು ಕರೆಯುವರು. ಇದು ಮೋಟಾರಿನ ಶಕ್ತಿಯನ್ನು ಹೆಚ್ಚಿಸುತ್ತದೆ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮಾದರಿ ಪ್ರಶ್ನೋತ್ತರ

ಪಿಯುಸಿಯ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಪ್ರಜಾವಾಣಿ ನೋಡಿಯೊ

ಗಣಿತ

39) $y = 3x + 2$ ಸರಳ ರೇಖೆ, x–ಅಕ್ಷ, $x = -1$ ಮತ್ತು $x = 1$ ಗಳಲ್ಲಿ x–ಅಕ್ಷಕ್ಕೆ ಎಳೆದಿರುವ ಲಂಬಗಳಿಂದ ಆವೃತವಾಗಿರುವ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಪರಿಹಾರ: ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ,

y=3x+2 ಸರಳರೇಖೆಯು x-ಅಕ್ಷವನ್ನು $x = \frac{-2}{3}$ ಆದಾಗ ಸಂಧಿಸುತ್ತದೆ. ಅದರ ನಕ್ಷೆ $x \in \left(-1, \frac{-2}{3}\right)$ ಆದಾಗ x-ಅಕ್ಷದ ಕೆಳಗಿರುತ್ತದೆ ಮತ್ತು $x \in \left(\frac{-2}{3}, 1\right)$ ಆದಾಗ x-ಅಕ್ಷದ ಮೇಲಿರುತ್ತದೆ.



ಬೇಕಾದ ಕ್ಷೇತ್ರಫಲ =

ACBA ಪ್ರದೇಶದ ಕ್ಷೇತ್ರಫಲ + ADEA ಪ್ರದೇಶದ ಕ್ಷೇತ್ರಫಲ

$$= \left|\int_{-1}^{-2/3} (3x+2)dx\right| + \int_{\frac{-2}{3}}^{1} (3x+2)dx$$

$$= \left(\frac{3x^2}{2} + 2x\right)_{-1}^{-2/3} + \left(\frac{3x^2}{2} + 2x\right)_{-2/3}^{1}$$

$$= \frac{1}{6} + \frac{25}{6} = \frac{26}{6} = \frac{13}{3}$$

40)

$$A = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}, B = \begin{bmatrix} 1 & 3 \\ 0 & 2 \\ -1 & 4 \end{bmatrix} \text{ ಮತ್ತು } C = \begin{bmatrix} 1 & 2 & 3 & -4 \\ 2 & 0 & -2 & 1 \end{bmatrix}$$

ಆದರೆ, A(BC) ಮತ್ತು (AB)Cಗಳನ್ನು ಕಂಡುಹಿಡಿಯಿರಿ ಹಾಗೂ (AB)C = A(BC) ಎಂದು ತೋರಿಸಿ.

ಪರಿಹಾರ:–

$$AB = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}\begin{bmatrix} 1 & 3 \\ 0 & 2 \\ -1 & 4 \end{bmatrix} = \begin{bmatrix} 1+0+1 & 3+2-4 \\ 2+0-3 & 6+0+12 \\ 3+0-2 & 9-2+8 \end{bmatrix} = \begin{bmatrix} 2 & 1 \\ -1 & 18 \\ 1 & 15 \end{bmatrix}$$

$$(AB)(C) = \begin{bmatrix} 2 & 1 \\ -1 & 18 \\ 1 & 15 \end{bmatrix}\begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 2+2 & 4+0 & 6-2 & -8+1 \\ -1+36 & -2+0 & -3-36 & 4+18 \\ 1+30 & 2+0 & 3-30 & -4+15 \end{bmatrix}$$

$$= \begin{bmatrix} 4 & 4 & 4 & -7 \\ 35 & -2 & -39 & 22 \\ 31 & 2 & -27 & 11 \end{bmatrix}$$

ಈಗ $BC = \begin{bmatrix} 1 & 3 \\ 0 & 2 \\ -1 & 4 \end{bmatrix}\begin{bmatrix} 1 & 2 & 3 & -4 \\ 2 & 0 & -2 & 1 \end{bmatrix} = \begin{bmatrix} 1+6 & 2+0 & 3-6 & -4+3 \\ 0+4 & 0+0 & 0-4 & 0+2 \\ -1+8 & -2+0 & -3-8 & 4+4 \end{bmatrix}$

$$= \begin{bmatrix} 7 & 2 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$$

ಆದ್ದರಿಂದ, $A(BC) = \begin{bmatrix} 1 & 1 & -1 \\ 2 & 0 & 3 \\ 3 & -1 & 2 \end{bmatrix}\begin{bmatrix} 7 & 2 & -3 & -1 \\ 4 & 0 & -4 & 2 \\ 7 & -2 & -11 & 8 \end{bmatrix}$

$$= \begin{bmatrix} 7+4-7 & 2+0+2 & -3-4+11 & -1+2-8 \\ 14+0+21 & 4+0-6 & -6+0-33 & -2+0+24 \\ 21-4+14 & 6+0-4 & -9+4-22 & -3-2+16 \end{bmatrix} = \begin{bmatrix} 4 & 4 & 4 & -7 \\ 35 & -2 & -39 & 22 \\ 31 & 2 & -27 & 11 \end{bmatrix}$$

ಸ್ಪಷ್ಟವಾಗಿ, (AB)C = A(BC) ಎಂದಾಗುತ್ತದೆ.


41) x - ಅಕ್ಷವನ್ನು ಮೂಲ ಬಿಂದುವಿನಲ್ಲಿ ಸ್ಪರ್ಶ ಮಾಡುವ ವೃತ್ತಗಳ ಸಮೂಹದ ಅವಕಲನ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ: x - ಅಕ್ಷವನ್ನು ಮೂಲ ಬಿಂದುವಿನಲ್ಲಿ ಸ್ಪರ್ಶ ಮಾಡುವ ವೃತ್ತಗಳ ಸಮೂಹವು C ಆಗಿರಲಿ. ಈ ಸಮೂಹಕ್ಕೆ ಸೇರಿದ ಯಾವುದೇ ಒಂದು ವೃತ್ತದ ಕೇಂದ್ರವು (0, a) ಆಗಿರಲಿ, ಆದ್ದರಿಂದ ಸಮೂಹ Cಯ ಸಮೀಕರಣವು

$$x^2 + (y - a)^2 = a^2 \text{ ಅಥವಾ } x^2 + y^2 = 2ay \ldots (1)$$

ಆಗಿರುತ್ತದೆ.

ಇಲ್ಲಿ a ಒಂದು ಅನಿಯಂತ್ರಿತ ಸ್ಥಿರಾಂಕ. ಸಮೀಕರಣ (1)ರ ಎರಡೂ ಬದಿಯನ್ನು x ಗೆ ಅನುಗುಣವಾಗಿ ಅವಕಲಿಸಿದಾಗ



$$2x + 2y\frac{dy}{dx} = 2a\frac{dy}{dx}$$

ಅಥವಾ $x + y\frac{dy}{dx} = a\frac{dy}{dx}$

ಅಥವಾ $a = \dfrac{x + y\frac{dy}{dx}}{\frac{dy}{dx}}$ ....(2)

a ನ ಬೆಲೆಯನ್ನು ಸಮೀಕರಣ (2)ರಿಂದ ಸಮೀಕರಣ (1)ರಲ್ಲಿ ಆದೇಶಿಸಿದಾಗ

(ಮುಂದುವರಿಯುವುದು.....)

5.2.23

ಪಂಚರತ್ನ ಯಾತ್ರೆ ಟೀಕಿಸಿದ್ದಕ್ಕೆ ಪ್ರತಿಕ್ರಿಯೆ • ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ

‘ಶೃಂಗೇರಿ ಮಠ ಒಡೆದ, ಗಾಂಧಿಯ ಕೊಂದ ವಂಶದವರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಳೆ ಕರ್ನಾಟಕ ಭಾಗದ ಬ್ರಾಹ್ಮಣರಂತೆ ಸುಸಂಸ್ಕೃತರಲ್ಲ. ಶೃಂಗೇರಿ ಮಠವನ್ನು ಧ್ವಂಸ ಮಾಡಿದ, ಗಾಂಧೀಜಿಯನ್ನು ಕೊಂದ ವಂಶಕ್ಕೆ ಸೇರಿದ ಬ್ರಾಹ್ಮಣರು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಜೆಡಿಎಸ್‌ನ ಪಂಚರತ್ನ ಯಾತ್ರೆ ಕುರಿತು ಪ್ರಲ್ಹಾದ ಜೋಶಿ ಮಾಡಿದ್ದ ಟೀಕೆಗೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ನಡೆದ ‘ಪಂಚರತ್ನ ಯಾತ್ರೆ’ಯ ಮಧ್ಯದಲ್ಲೇ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಜೋಶಿಯವರು ದಕ್ಷಿಣ ಕರ್ನಾಟಕದ ಬ್ರಾಹ್ಮಣರ ಸಂಸ್ಕೃತಿಯವರಲ್ಲ. ಬ್ರಾಹ್ಮಣ ವೃತ್ತಿ ಮತ್ತು ಸಂಸ್ಕಾರದಲ್ಲಿ ಎರಡು, ಮೂರು ವಿಧಗಳಿವೆ. ಶೃಂಗೇರಿ ಮಠವನ್ನು, ಅಲ್ಲಿಯ ದೇವರ ವಿಗ್ರಹಗಳನ್ನು ಒಡೆದು ಹಾಕಿದ ಪೇಶ್ವೆ ವಂಶಕ್ಕೆ ಸೇರಿದವರು. ಶೃಂಗೇರಿ ಮಠವನ್ನು ಧ್ವಂಸ ಮಾಡಿದ ದೇಶಸ್ಥ ಬ್ರಾಹ್ಮಣ ವಂಶದವರು’ ಎಂದರು.

‘ಹಳೆ ಕರ್ನಾಟಕ ಭಾಗದ ನಮ್ಮ ಬ್ರಾಹ್ಮಣ ಸಮಾಜದವರು ಸರ್ವೇ ಜನಾ ಸುಖಿನೋ ಭವಂತು ಎನ್ನುತ್ತಾರೆ. ಪೇಶ್ವೆ ವಂಶಕ್ಕೆ ಸೇರಿದ ಇವರಿಗೆ ಸಂಸ್ಕೃತಿ ಬೇಕಿಲ್ಲ. ದೇಶ ಒಡೆಯುವುದು, ಕುತಂತ್ರದ ರಾಜಕಾರಣ ಮಾಡುವುದು. ದೇಶಕ್ಕೆ ಕೊಡುಗೆ ನೀಡಿದವರನ್ನು ದೇಶಭಕ್ತಿಯ ಹೆಸರಿನಲ್ಲಿ ಮಾರಣಹೋಮ ಮಾಡುವ ಪ್ರವೃತ್ತಿಯವರು ಇವರು’ ಎಂದು ಟೀಕಿಸಿದರು.

‘ಇಂತಹವರನ್ನು ಸಿ.ಎಂ ಮಾಡಿ ರಾಜ್ಯ ಒಡೆಯುತ್ತಾರೆ. ಎಚ್ಚರದಿಂದಿರಿ. ಇಂತಹ ವ್ಯಕ್ತಿಗಳನ್ನು ಮುಂದಿಟ್ಟು ರಾಜ್ಯವನ್ನು ಕುಲಗೆಡಿಸುವ ಪ್ರಯತ್ನದ ವಿರುದ್ಧವೇ ನನ್ನ ಹೋರಾಟ’ ಎಂದರು.



ಕರ್ನಾಟಕ ವಿಧಾನಸಭಾ ಚುನಾವಣೆ - 2023

ವೀರಶೈವ ಸಮಾಜ, ಒಕ್ಕಲಿಗರು, ದಲಿತರು, ಹಿಂದುಳಿದವರು ಎಲ್ಲರಿಗೂ ಹೇಳುತ್ತಿದ್ದೇನೆ. ಬಿಜೆಪಿಯ ಈ ಹುನ್ನಾರವನ್ನು ಅರ್ಥ ಮಾಡಿಕೊಳ್ಳಬೇಕು

ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕುಮಾರಸ್ವಾಮಿ ಮಾತುಗಳನ್ನು ಖಂಡಿಸುತ್ತೇನೆ. ಅವರು ಬ್ರಾಹ್ಮಣ ಸಮಾಜದ ಕ್ಷಮೆ ಕೇಳಲಿ. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರ ತ್ಯಾಗ, ಬಲಿದಾನ ಸಾಕಷ್ಟಿದೆ.

ಆರ್‌.ಅಶೋಕ, ಸಚಿವ


‘ಪ್ರಲ್ಹಾದ ಜೋಶಿ ಸಿಎಂ ಆರ್‌ಎಸ್‌ಎಸ್ ಹುನ್ನಾರ’



‘ನನಗೆ ಲಭಿಸಿರುವ ಮಾಹಿತಿಯ ಪ್ರಕಾರ, ಮುಂದಿನ ಚುನಾವಣೆ ಬಳಿಕ ಪ್ರಲ್ಹಾದ ಜೋಶಿ ಅವರನ್ನು ಮುಖ್ಯಮಂತ್ರಿ ಮಾಡುವ ಹುನ್ನಾರ ಆರ್‌ಎಸ್‌ಎಸ್‌ನಲ್ಲಿ ನಡೆದಿದೆ. ಅದೇ ಕಾರಣಕ್ಕಾಗಿ ಅವರು ನಮ್ಮ ಕುಟುಂಬದ ವಿರುದ್ಧ ಮಾತನಾಡಲು ಆರಂಭಿಸಿದ್ದಾರೆ’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ಪ್ರಲ್ಹಾದ ಜೋಶಿಯವರನ್ನು ಮುಖ್ಯಮಂತ್ರಿ ಮಾಡಿ, ಎಂಟು ಜನರನ್ನು ಡಿ.ಸಿ.ಎಂ ಮಾಡುವ ಕುರಿತು ದೆಹಲಿಯಲ್ಲಿ ಸಭೆ ನಡೆದಿದೆ. ಆ ಎಲ್ಲ ವಿವರ ನನಗೆ ಗೊತ್ತಿದೆ. ಉಪ ಮುಖ್ಯಮಂತ್ರಿ ಹುದ್ದೆಗೆ ಗುರುತಿಸಿರುವ ಎಂಟು ಮಂದಿಯ ಪಟ್ಟಿಯೂ ಇದೆ’ ಎಂದರು.

ತಮ್ಮ ಪಕ್ಷದ ಬಗ್ಗೆ ಎಚ್‌ಡಿಕೆ ಯೋಚಿಸಲಿ: ಬೊಮ್ಮಾಯಿ



ನವದೆಹಲಿ: ಬಿಜೆಪಿಯಲ್ಲಿ ಮುಂದಿನ ಮುಖ್ಯಮಂತ್ರಿ ಯಾರು ಎಂದು ಪಕ್ಷ ನಿರ್ಧರಿಸಲಿದೆ. ಎಚ್‌.ಡಿ. ಕುಮಾರಸ್ವಾಮಿ ತಮ್ಮ ಪಕ್ಷದ ಕುರಿತು ಯೋಚಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದರು.

‘ಪ್ರಲ್ಹಾದ ಜೋಶಿ ಅವರು ಪಕ್ಷದ ಹಿರಿಯ ನಾಯಕರು. ಅವರ ವಿರುದ್ಧ ಹೇಳಿಕೆ ನೀಡುವ ಮೂಲಕ ಕುಮಾರಸ್ವಾಮಿ ಅವರು ದೇವೇಗೌಡರ ಘನತೆಗೆ ಕುಂದುಂಟು ಮಾಡಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.

ಸಾರ್ವಜನಿಕ ಜೀವನದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ದೇವೇಗೌಡರಿಂದ ಕಲಿಯಲಿ’ ಎಂದರು.

‘ಸ್ವಜಾತಿ ಕೂಪಮಂಡೂಕ’

ಬೆಂಗಳೂರು: ‘ಕುಮಾರಸ್ವಾಮಿ ತಮ್ಮ ಜಾತಿಯ ಸುತ್ತವೇ ರಾಜಕಾರಣ ಮಾಡುವ ಸ್ವಜಾತಿ ಕೂಪಮಂಡೂಕ’ ಎಂದು ವಿಧಾನ ಪರಿಷತ್ ಸದಸ್ಯ, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್‌.ರವಿಕುಮಾರ್ ಟೀಕಿಸಿದರು.

‘ಪ್ರಲ್ಹಾದ ಜೋಶಿ ಮತ್ತು ಬ್ರಾಹ್ಮಣರನ್ನು ಕುಮಾರಸ್ವಾಮಿ ಅವರು ಅವಹೇಳನ ಮಾಡಿರುವುದನ್ನು ಬಿಜೆಪಿ ಖಂಡಿಸುತ್ತದೆ. ಸಾವರ್ಕರ್, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್ ಸೇರಿ ಹಲವು ಬ್ರಾಹ್ಮಣರು ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಅವರು ಯಾವತ್ತೂ ಜಾತಿಯ ಬಗ್ಗೆ ಯೋಚಿಸಿರಲಿಲ್ಲ’ ಎಂದರು.

ಜೋಶಿಯವರು ಸರಿ ಹೇಳಿದ್ದಾರೆ. ಕುಮಾರಸ್ವಾಮಿ ಮನೆಯಲ್ಲಿ ದೇವೆಗೌಡರಿಂದ ಸೂರಜ್‌ವರೆಗೆ ನವರತ್ನ ರಾಜಕಾರಣಿಗಳಿದ್ದಾರೆ. ಅದಕ್ಕಾಗಿಯೇ ಪಂಚರತ್ನ ಬದಲಿಗೆ ನವರತ್ನ ಯಾತ್ರೆ ಮಾಡಲು ಹೇಳಿದ್ದಾರೆ’ ಎಂದರು.

ಯಾವುದೇ ಜಾತಿಯ ಹೆಸರು ಹಿಡಿದು ಆರೋಪ ಮಾಡುವುದು ಶೋಭೆ ತರುವುದಿಲ್ಲ. ಎಲ್ಲ ಜಾತಿ ಸಮುದಾಯದಲ್ಲೂ ಅನೇಕ ಉಪ ಜಾತಿಗಳಿವೆ

ದಿನೇಶ್ ಗುಂಡೂರಾವ್, ಶಾಸಕ

‘ಯಡಿಯೂರಪ್ಪ ಇಲ್ಲದೇ ಸಿದ್ದರಾಮಯ್ಯ ಗೆಲ್ಲಲ್ಲ’

ಹುಬ್ಬಳ್ಳಿ: ‘ಶಾಸಕ ಬಿ.ಎಸ್‌. ಯಡಿಯೂರಪ್ಪ ಅವರ ಬೆಂಬಲವಿಲ್ಲದೇ ವರುಣಾ ಕ್ಷೇತ್ರದಲ್ಲಿಯೂ ಸಿದ್ದರಾಮಯ್ಯ ಗೆಲ್ಲಲ್ಲ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಲೇವಡಿ ಮಾಡಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋಲಾರದಿಂದಲೂ ಕೂಡ ಸ್ಪರ್ಧಿಸಬೇಡಿ ಎಂದು ಸಲಹೆ ನೀಡಿದ್ದೇನೆ. ಅಷ್ಟೇ ಅಲ್ಲ, ಸಿದ್ದರಾಮಯ್ಯಗೆ ಎರಡು ಬಾರಿ ನಾನು ರಾಜಕೀಯ ಜೀವನ ನೀಡಿದೆ. ಆದರೂ ಕೃತಜ್ಞತೆ ಇಲ್ಲ’ ಎಂದರು.

‘ಕುಪೇಂದ್ರ ರೆಡ್ಡಿ ಅವರನ್ನು ಗೆಲ್ಲಿಸುವಾಗ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಏಜೆಂಟ್ ಆಗಿ ಕೆಲಸ ಮಾಡಿದ್ದರು. ನಿಮ್ಮ ಪಕ್ಷದವರನ್ನು ಬೇರೆ ಪಕ್ಷಕ್ಕೆ ಕಳಿಸಿ, ಅಲ್ಲಿ ಮೇಯ್ರಿ, ಇಲ್ಲಿ ಬರ್‍ರಿ ಎನ್ನುತ್ತೀರಾ. ನಮಗೆ ಬಿ ಟೀಂ ಅಂತೀರಾ’ ಎಂದು ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.

‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ತಮ್ಮ ಅಣ್ಣ ಭಾಗಿಯಾಗಿದ್ದ ಬ್ಯಾಂಕ್ ಹಗರಣವನ್ನು ಮುಚ್ಚಿ ಹಾಕಿದರು’ ಎಂದು ಟೀಕಿಸಿದ ಇಬ್ರಾಹಿಂ, ಶಾಸಕ ಜಗದೀಶ ಶೆಟ್ಟರ್ ವಿರುದ್ಧವೂ ಹರಿಹಾಯ್ದರು.

‘ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಕೂರಿಸಿದ್ದೇ ನಿಮ್ಮ ಸಾಧನೆಯೇ? ಮೇಲ್ಸೇತುವೆ ನಿರ್ಮಿಸುವ ಅವಕಾಶವಿದ್ದರೂ, ಬೈರಿದೇವರಕೊಪ್ಪದಲ್ಲಿ ದರ್ಗಾ ಉರುಳಿಸಿದಿರಿ. ಅದಕ್ಕಾಗಿ ಬೊಮ್ಮಾಯಿ ಕ್ಷಮೆ ಕೇಳಿದರು. ಸಮಾಜದ ಜನರೂ ಶಾಂತ ರೀತಿಯಲ್ಲಿ ವರ್ತಿಸಿದ್ದರಿಂದ ಯಾವುದೇ ಅನಾಹುತ ಆಗಲಿಲ್ಲ’ ಎಂದರು.

‘2ನೇ ಪಟ್ಟಿ ಶೀಘ್ರ’

‘ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಶೀಘ್ರ ಬಿಡುಗಡೆಯಾಗಲಿದ್ದು, ಮೊದಲ ಪಟ್ಟಿಯಲ್ಲಿ ಕೆಲ ಬದಲಾವಣೆಗಳಾಗಲಿವೆ. ಅಭ್ಯರ್ಥಿಗಳ ಆಯ್ಕೆ ಪಕ್ಷಕ್ಕೆ ಬಿಟ್ಟ ವಿಚಾರ. ಕೆಲವರು ಆಶಾವಾದದಿಂದ ತಾನೇ ಅಭ್ಯರ್ಥಿ ಎನ್ನುತ್ತಿರಬಹುದು’ ಎಂದು ಭವಾನಿ ರೇವಣ್ಣ ಅವರಿಗೆ ಹಾಸನ ಕ್ಷೇತ್ರದ ಟಿಕೆಟ್ ಕುರಿತ ಪ್ರಶ್ನೆಗೆ ಇಬ್ರಾಹಿಂ ಅವರು ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಲಿಂಗಾಯತ ಮಹಾಧಿವೇಶನ ಮಾರ್ಚ್ 4, 5ರಂದು

ಧಾರವಾಡ: ಜಾಗತಿಕ ಲಿಂಗಾಯತ ಮಹಾಸಭಾ ವತಿಯಿಂದ ಸಾಹಿತಿ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಪ್ರಥಮ ಲಿಂಗಾಯತ ಮಹಾಧಿವೇಶನ ಮಾ.4, 5ರಂದು ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ನಡೆಯಲಿದೆ.

ನಗರದ ಮುರುಘಾಮಠದ ಸಭಾ ಭವನದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಭಾನುವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಾನಂದ ಜಾಮದಾರ ಮಾತನಾಡಿ, ‘200ಕ್ಕೂ ಹೆಚ್ಚು ಮಠಾಧೀಶರು, ಸಾಹಿತಿಗಳು, ಸಂಶೋಧಕರು ಭಾಗವಹಿಸಲಿದ್ದಾರೆ’ ಎಂದರು.

‘ಈ ಅಧಿವೇಶನವು ರಾಜಕಿಯೇತರವಾಗಿದ್ದು, ಸರ್ಕಾರದ ಪರ ಮತ್ತು ವಿರೋಧವಲ್ಲ’ ಎಂದು ತಿಳಿಸಿದರು.

‘ಕೋಮು ಗಲಭೆ ನಡೆಸಲು ಬಿಜೆಪಿ ತಯಾರಿ’


ಬೆಂಗಳೂರು: ‘ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಕೋಮು ಗಲಭೆ ನಡೆಸಲು ಬಿಜೆಪಿ ತಯಾರಿ ನಡೆಸುತ್ತಿದೆ’ ಎಂದು ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಆರೋಪಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಚುನಾವಣೆ ಗೆಲ್ಲಲು ಬಿಜೆಪಿಯವರು ಏನು ಬೇಕಾದರೂ ಮಾಡುತ್ತಾರೆ’ ಎಂದರು.

‘ನಮ್ಮ ಸರ್ವೆ ಬಗ್ಗೆ ಬಿಜೆಪಿ ನಾಯಕ ಸಿ.ಟಿ.ರವಿ ವ್ಯಂಗ್ಯ ಮಾಡಿದ್ದಾರೆ. ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲು ಸಿ.ಟಿ. ರವಿ ಪಾಕ್ ವಿಚಾರ ಪ್ರಸ್ತಾಪಿಸಿದ್ದಾರೆ. ಬಿಜೆಪಿಯವರು ನೀಚರು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮತದಾರರ ಸಂಖ್ಯೆ 6 ಪಟ್ಟು ಹೆಚ್ಚಳ

1951ರಿಂದ 2023ರ ವರೆಗೆ ಮತದಾರರ ಸಂಖ್ಯೆಯಲ್ಲಿ ಆರು ಪಟ್ಟು ಹೆಚ್ಚಳ ದಾಖಲಾಗಿದೆ. 2023ರ ಜನವರಿಯ ಮಾಹಿತಿ ಪ್ರಕಾರ, 94.50 ಕೋಟಿ ಮತದಾರರು ದೇಶದಲ್ಲಿ ಇದ್ದಾರೆ. ಮತದಾರರ ಸಂಖ್ಯೆಯ ಜೊತೆಗೆ ಮತ ಚಲಾಯಿಸುವವರ ಪ್ರಮಾಣವು ಹೆಚ್ಚುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಈ ವರೆಗಿನ ಗರಿಷ್ಠ ಅಂದರೆ, ಶೇ 67.40ರಷ್ಟು ಮತದಾನವಾಗಿತ್ತು. ಹಾಗಿದ್ದರೂ ಶೇ 32.60ರಷ್ಟು ಜನರು ಮತದಾನದಿಂದ ದೂರ ಉಳಿದಿದ್ದರು. ಈ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಚುನಾವಣಾ ಆಯೋಗವು ವಲಸಿಗರಿಗಾಗಿ ರೂಪಿಸಿರುವ ಮತಯಂತ್ರ ವ್ಯವಸ್ಥೆ ಜಾರಿಗೆ ತರುವ ಕುರಿತು ಚಿಂತನೆ ನಡೆಸಿದೆ







- 2019ರ ಲೋಕಸಭಾ ಚುನಾವಣೆಯಲ್ಲಿ ಮತದಾರರ ಪ್ರಮಾಣವು ಶೇ 75ರಷ್ಟನ್ನು ದಾಟಿದ್ದರೂ 30 ಕೋಟಿ ಮಂದಿ ಮತದಾನ ಮಾಡಿರಲಿಲ್ಲ. ಈ ಸಂಖ್ಯೆಯಲ್ಲಿ ನಗರವಾಸಿಗಳು, ಯುವಜನರು ಹಾಗೂ ವಲಸೆ ಕಾರ್ಮಿಕರು ಹೆಚ್ಚಿದ್ದಾರೆ
- ಹಿಮಾಚಲ ಪ್ರದೇಶ ಹಾಗೂ ಗುಜರಾತ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಗರವಾಸಿಗಳು ಮತದಾನಕ್ಕೆ ನಿರಾಸಕ್ತಿ ತೋರಿದ್ದಾರೆ ಎಂದು ಆಯೋಗ ಹೇಳಿದೆ

ಆಧಾರ: ಪಿಟಿಐ

ಬಿಲ್ ಪಾವತಿಗೆ ₹400 ಕೋಟಿ ಸಾಲ

ಒಂದನೇ ಪುಟದಿಂದ...

‘ಈ ವ್ಯವಸ್ಥೆಯಲ್ಲಿ ಪಾಲಿಕೆ ಒಡಂಬಡಿಕೆ ಮಾಡಿಕೊಂಡಿರುವ ಮತ್ತು ಗುತ್ತಿಗೆದಾರರಿಗೆ ಅನುಕೂಲಕರವಾದ ಬಡ್ಡಿ ದರ ಮತ್ತು ಅವಧಿಯನ್ನು ನಿಗದಿಪಡಿಸುವ ಬ್ಯಾಂಕ್‌ನಲ್ಲಿ ಅಗತ್ಯವಿರುವವರು ಸ್ವಇಚ್ಛೆಯಿಂದ ಬಿಲ್ ಡಿಸ್ಕೌಂಟ್ ಮಾಡಿಕೊಂಡು ಹಣ ಪಡೆಯಬಹುದು. ಬ್ಯಾಂಕುಗಳು ನಿಗದಿಪಡಿಸಿದ ಅವಧಿಯ ಆಧಾರದಲ್ಲಿ ನಿರ್ದಿಷ್ಟ ಅವಧಿಯ ಒಳಗೆ ಪಾಲಿಕೆ ಪಾವತಿಸಬಹುದಾದ ಬಿಲ್‌ಗಳಿಗೆ ಮಾತ್ರ ಈ ಪದ್ಧತಿಯಲ್ಲಿ ಭಾಗವಹಿಸಲು ಅವಕಾಶ ನೀಡಬಹುದು.’

‘ಈ ವ್ಯವಸ್ಥೆಯಲ್ಲಿ ಬಡ್ಡಿ ದರವನ್ನು ಗುತ್ತಿಗೆದಾರರು ಭರಿಸಬೇಕು. ಜ್ಯೇಷ್ಠತೆ ಆಧಾರದಲ್ಲಿ ಗುತ್ತಿಗೆಯ ಪೂರ್ಣ ಮೊತ್ತವನ್ನು ಸಂಬಂಧಿಸಿದ ಬ್ಯಾಂಕ್‌ಗೆ ಪಾಲಿಕೆ ಪಾವತಿಸಲಿದೆ. ಉದಾಹರಣೆಗೆ, 18 ತಿಂಗಳು ಬಿಲ್ ಡಿಸ್ಕೌಂಟಿಂಗ್ ಸೌಲಭ್ಯ ನೀಡುವ ಬ್ಯಾಂಕಿಗೆ, ಮುಂದಿನ 18 ತಿಂಗಳ ಒಳಗೆ ಪಾವತಿ ಮಾಡಬಹುದಾದ ಬಿಲ್‌ಗಳನ್ನು ಡಿಸ್ಕೌಂಟ್ ಮಾಡಲಾಗುತ್ತದೆ. ಕೇವಲ ಆರು ತಿಂಗಳ ಅವಧಿಯ ಸೌಲಭ್ಯ ನೀಡುವ ಬ್ಯಾಂಕಿಗೆ ಆರು ತಿಂಗಳ ಒಳಗೆ ಪಾವತಿ ಮಾಡುವ ಬಿಲ್‌ಗಳನ್ನು ಮಾತ್ರ ಡಿಸ್ಕೌಂಟ್ ಮಾಡಲಾಗುತ್ತದೆ. ಇದರಿಂದ ಪಾಲಿಕೆಯ ಮೇಲೆ ಬಡ್ಡಿಯ ಹೊರೆ ಬೀಳುವುದಿಲ್ಲ’ ಎಂದೂ ವಿವರಿಸಿದ್ದರು.

ಸರ್ಕಾರದ ಷರತ್ತುಗಳೇನು?



- ಸಾಲ ಮರುಪಾವತಿಗೆ ಬಿಬಿಎಂಪಿ ‘ಎಸ್ಕ್ರೋ’ (ನಿರ್ದಿಷ್ಟ) ಖಾತೆ ತೆರೆದು, ಎಲ್ಲ ಆದಾಯವನ್ನು ಆ ಖಾತೆಗೆ ಜಮೆ ಮಾಡಬೇಕು.
- ಸಾಲಕ್ಕೆ ತಗಲುವ ವೆಚ್ಚದ (ಬಡ್ಡಿ) ಹೊರೆ ತನ್ನ ಮೇಲೆ ಬೀಳದಂತೆ ಬಿಬಿಎಂಪಿ ನೋಡಿಕೊಳ್ಳಬೇಕು. ಅಂಥ ವೆಚ್ಚಕ್ಕೆ ಸರ್ಕಾರವೂ ಹೊಣೆಯಲ್ಲ.
- ಬಿಬಿಎಂಪಿಯು ಮರುಪಾವತಿಗೆ ನಿಗದಿಪಡಿಸಿದ ದಿನದ ಸಹಿತ ಒವಿಡಿಎಸ್ ಬಿಡ್‌ಗಳನ್ನು (ಗುತ್ತಿಗೆದಾರರ ಒಪ್ಪಿಗೆಯ ಬಳಿಕ) ಮುಕ್ತವಾಗಿ ಪ್ರಕಟಿಸುವುದು ಸೇರಿದಂತೆ ಪಾರದರ್ಶಕ ಕಾರ್ಯವಿಧಾನ ಅನುಸರಿಸಬೇಕು. ಅತಿ ಕಡಿಮೆ ಬಿಡ್ ಮಾಡಿದ ಬ್ಯಾಂಕ್ ಜೊತೆ ಕರಾರು ಮಾಡಿಕೊಳ್ಳಬೇಕು
- ಬಿಲ್‌ಗಳ ಜ್ಯೇಷ್ಠತೆಯ ಆಧಾರದಲ್ಲಿ ಒವಿಡಿಎಸ್ ಹರಾಜು ಹಾಕಬೇಕು. ಗುತ್ತಿಗೆದಾರನ ವಿವರ, ಕಾಮಗಾರಿ ಪ್ರಗತಿ ಮತ್ತು ಬಿಬಿಎಂಪಿಯಿಂದ ಸಾಲ ಮರುಪಾವತಿ ನಿರೀಕ್ಷಿಸಬಹುದಾದ ದಿನ ಬಿಡ್‌ನಲ್ಲಿ ಇರಬೇಕು
- ಕರಾರು ಉಲ್ಲಂಘನೆಯಾದರೆ ಸರ್ಕಾರ ಹೊಣೆಯಲ್ಲ.
- ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಗೆ ಮಾತ್ರ ಭಾಗವಹಿಸಲು ಅವಕಾಶ ನೀಡಬೇಕು.

ಸಂಗಮದಲ್ಲಿ ಮಿಂದೆದ್ದ 20 ಲಕ್ಷ ಭಕ್ತರು

ಪ್ರಯಾಗರಾಜ್ (ಪಿಟಿಐ): ‘ಮಾಘಿ ಪೂರ್ಣಿಮದ’ ಹಿನ್ನೆಲೆಯಲ್ಲಿ ಸುಮಾರು 20 ಲಕ್ಷ ಜನರು ಭಾನುವಾರ ಸಂಗಮದಲ್ಲಿ ಮಿಂದೆದ್ದರು ಎಂದು ಅಧಿಕಾರಿಗಳು ತಿಳಿಸಿದರು.

ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಒಂದೆಡೆ ಸೇರುವ ಪವಿತ್ರ ಸ್ಥಳವೇ ಸಂಗಮ.

‘ಭದ್ರತೆ ದೃಷ್ಟಿಯಿಂದ 5000ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ನದಿ ಆಂಬುಲೆನ್ಸ್ ಮತ್ತು ತೇಲುವ ಪೊಲೀಸ್ ಉಪಠಾಣೆ ವ್ಯವಸ್ಥೆ ಕಲ್ಪಿಸಲಾಗಿತ್ತು’ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಮಾಘ ಮೇಳ) ರಾಜೀವ್ ನಾರಾಯಣ್ ಮಿಶ್ರಾ ತಿಳಿಸಿದರು.

ಫೆ.18ರಂದು ಮಹಾಶಿವರಾತ್ರಿಯ ದಿನ ಮುಂದಿನ ‘ಪವಿತ್ರ ಸ್ನಾನ’ ನಡೆಯಲಿದೆ. ಅಂದು ಮಾಘ ಮೇಳ ಸಮಾರೋಪಗೊಳ್ಳಲಿದೆ.

ಅಮೆರಿಕ: ಚೀನಾ ಬಲೂನ್ ನಾಶ

ಒಂದನೇ ಪುಟದಿಂದ...

ಅಧ್ಯಕ್ಷ ಜೋ ಬೈಡನ್ ಅವರ ನಿರ್ದೇಶನದಂತೆ ಅಮೆರಿಕ ಸೇನೆಯು ಸ್ಥಳೀಯ ಕಾಲಮಾನ ಮಧ್ಯಾಹ್ನ 2.39ರಲ್ಲಿ, ಶಂಕಿತ ಕಣ್ಗಾವಲು ಬಲೂನ್ ಅನ್ನು ನಾರ್ತ್ ಕೆರೋಲಿನಾ ಕಡಲತೀರದಲ್ಲಿ ಹೊಡೆದುರುಳಿಸಿತು. ಯಾವುದೇ ಜೀವ, ಆಸ್ತಿ ಹಾನಿಯಾಗಿಲ್ಲ. ಶಂಕಿತ ಬಲೂನ್ ಗುರಿಯಾಗಿಸಿ ವರ್ಜೀನಿಯಾದ ವಾಯುನೆಲೆಯಿಂದ ಕ್ಷಿಪಣಿ ಉಡಾವಣೆ ಮಾಡಿದ್ದು, ಅವಶೇಷಗಳು ಅಮೆರಿಕ ಭೂವ್ಯಾಪ್ತಿಯಲ್ಲೇ ಬಿದ್ದಿವೆ ಎಂದು ಸೇನೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಬುಧವಾರವಷ್ಟೇ ಅಧಿಕಾರಿಗಳು ಈ ಬಗ್ಗೆ ಮಾಹಿತಿ ನೀಡಿದ್ದರು. ಎಷ್ಟು ಸಾಧ್ಯವೋ ಅಷ್ಟು ಬೇಗ ಅದನ್ನು ಹೊಡೆದುರುಳಿಸುವಂತೆ ನಾನೇ ಸೂಚಿಸಿದ್ದೆ’ ಎಂದು ಬೈಡನ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಈ ಬೆಳವಣಿಗೆಗೆ ಚೀನಾ ತೀವ್ರ ಬೇಸರ ವ್ಯಕ್ತಪಡಿಸಿದೆ. ‘ಚೀನಾದ ಮಾನವರಹಿತ ಏರ್‌ಶಿಪ್ ನಾಶಕ್ಕೆ ಅಮೆರಿಕ ಸೇನಾಬಲವನ್ನು ಬಳಸಿದೆ. ಅದು, ಅಂತರರಾಷ್ಟ್ರೀಯ ನಿಯಮಾವಳಿಗಳಿಗೆ ವಿರುದ್ಧವಾದುದು’ ಎಂದು ಚೀನಾದ ವಿದೇಶಾಂಗ ಸಚಿವಾಲಯದ ಹೇಳಿಕೆಯನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

‘ಸಂಬಂಧಿತ ಕಂಪನಿಯ ಶಾಸನಬದ್ಧ ಹಕ್ಕು, ಹಿತಾಸಕ್ತಿಯನ್ನು ಚೀನಾ ರಕ್ಷಿಸಲಿದೆ. ಅಲ್ಲದೆ, ಪ್ರತಿಕ್ರಿಯಾತ್ಮಕವಾಗಿ ಅನುಸರಿಸಬೇಕಾದ ಹಕ್ಕನ್ನು ಕಾಯ್ದುಕೊಳ್ಳಲಿದೆ’ ಎಂದು ವಿದೇಶಾಂಗ ಸಚಿವಾಲಯದ ಹೇಳಿಕೆ ತಿಳಿಸಿದೆ. ಉಲ್ಲೇಖಿತ ಏರ್‌ಶಿಪ್ ಅನ್ನು ಹವಾಮಾನ ಅಧ್ಯಯನಕ್ಕಾಗಿ ಹಾರಿಬಿಡಲಾಗಿತ್ತು ಎಂದೂ ಚೀನಾ ಪ್ರತಿಪಾದಿಸಿದೆ.

‘ಪರಿಶೀಲನೆಯ ಬಳಿಕ, ಇದು ನಾಗರಿಕ ಉದ್ದೇಶದ ಏರ್‌ಶಿಪ್. ಅಮೆರಿಕದ ವಾಯುಗಡಿಗೆ ಆಕಸ್ಮಿಕವಾಗಿ ಪ್ರವೇಶಿಸಿದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಗಿತ್ತು. ಅಲ್ಲದೆ, ಒಟ್ಟು ಪರಿಸ್ಥಿತಿಯನ್ನು ಶಾಂತಿಯುತವಾಗಿ, ವೃತ್ತಿಪರ ರೀತಿಯಲ್ಲಿ ನಿಭಾಯಿಸುವಂತೆಯೂ ಕೋರಲಾಗಿತ್ತು’ ಎಂದು ಹೇಳಿಕೆ ತಿಳಿಸಿದೆ.



ಅಮೆರಿಕ ಗಡಿ ಪ್ರವೇಶಿಸಿದ್ದ ಚೀನಾದ್ದು ಎಂದು ಶಂಕಿಸಲಾದ ಕಣ್ಗಾವಲು ಬಲೂನ್ ನಾಶಪಡಿಸಲು ಅಮೆರಿಕ ಸೇನೆ ಕ್ಷಿಪಣಿ ಉಡಾವಣೆ ಮಾಡಿರುವ ಕುರಿತು ಕಿಂಗ್‌ಸ್ಟೌನ್‌ನ ಬ್ರಿಯಾನ್ ಬ್ರಾಂಚ್ ಒದಗಿಸಿರುವ ಫೋಟೊ. – ಎಪಿ ಚಿತ್ರ

1 ಕೋಟಿ ಮನೆಗೆ ಭರವಸೆ ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಸೂಕ್ತ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಮತದಾರರನ್ನು ನೇರವಾಗಿ ತಟ್ಟುವ ವಿಷಯಗಳನ್ನು ಮುಂದಿಟ್ಟು ಮತಬೇಟೆಗಿಳಿಯಲು ಕಾಂಗ್ರೆಸ್ ತಯಾರಿ ನಡೆಸಿದೆ.

‘ಅಲ್ಲದೆ, ತನ್ನ ‘ಭರವಸೆ’ಯ ಕಾರ್ಡ್‌ಗಳನ್ನು ಒಂದು ಕೋಟಿ ಮನೆಗಳಿಗೆ ತಲುಪಿಸಲು ಮುಂದಾಗಿದೆ. ಈ ಕಾರ್ಡ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಸಹಿ ಇರಲಿದೆ.



‘ಮೂರು ‘ಸಿ’ಗಳ (ಕ್ಯಾಂಡಿಡೇಟ್, ಕಾಸ್ಟ್, ಕ್ಯಾಶ್) ನಡುವೆಯೇ ಈ ಬಾರಿ ಚುನಾವಣೆ ಎಂಬ ಜನಸಾಮಾನ್ಯರ ಅಭಿಪ್ರಾಯದ ಜೊತೆಗೆ ಹೆಜ್ಜೆ ಇಡುತ್ತಲೇ, ಭ್ರಷ್ಟಾಚಾರ, ಬೆಲೆ ಏರಿಕೆ, ಸರ್ಕಾರದ ಆಡಳಿತ ವೈಫಲ್ಯವನ್ನು ಮತದಾರರ ಮುಂದಿಡಲು ಪಕ್ಷದಲ್ಲಿ ತಯಾರಿ ನಡೆದಿದೆ. ಮತದಾರರ ನಾಡಿಮಿಡಿತ ಅರಿತು, ಪ್ರಣಾಳಿಕೆ ರೂಪಿಸಲು ಮತ್ತು ಪ್ರಚಾರ ಕಾರ್ಯತಂತ್ರ ರೂಪಿಸಲು ಚರ್ಚೆ ನಡೆದಿದೆ’ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಹೇಳಿದರು.

‘2018ರ ಚುನಾವಣೆಯಲ್ಲಿ ಮಾಡಿದ್ದ ತಪ್ಪುಗಳನ್ನು ಈ ಬಾರಿ ತಿದ್ದಿಕೊಳ್ಳಬೇಕು. ಮುಖ್ಯವಾಗಿ ಅಭ್ಯರ್ಥಿಗಳ ಆಯ್ಕೆ, ವರ್ಚಸ್ಸು, ಚುನಾವಣೆ ಎದುರಿಸಲು ಎಲ್ಲ ರೀತಿಯಲ್ಲೂ ‘ಸಾಮರ್ಥ್ಯ’ ಇರುವವರಿಗೆ ಟಿಕೆಟ್ ನೀಡಬೇಕು. ಅಲ್ಪಸಂಖ್ಯಾತರು ಬೇಡಿಕೆ ಇಡುವ ಕ್ಷೇತ್ರವನ್ನು ನೀಡಿದ ಪರಿಣಾಮ ಕ್ಷೇತ್ರ ಕಳೆದುಕೊಂಡಿರುವುದು, ಸೋಲುಕಂಡ ಅಭ್ಯರ್ಥಿಗಳಿಗೆ ನಿರಂತರ ಅವಕಾಶ ನೀಡದಿರುವುದರಿಂದ ಎದುರಾಗಿರುವ ಅಭ್ಯರ್ಥಿ ಕೊರತೆ, ಸಾಮೂಹಿಕ ನಾಯಕತ್ವದಿಂದ ಆಗಬಹುದಾದ ಲಾಭ... ಈ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಈ ಬಾರಿ ಟಿಕೆಟ್ ಹಂಚಿಕೆ ಮಾಡಲು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ನಡುವೆ ಚರ್ಚೆಯಾಗಿದೆ ಎಂದೂ ತಿಳಿಸಿದರು.

‘ಹಳೆ ಮೈಸೂರು ಭಾಗದಲ್ಲಿ ಡಿ.ಕೆ. ಶಿವಕುಮಾರ್ ಅವರ ವರ್ಚಸ್ಸು ಹೆಚ್ಚಿಸಿ, ಅವರ ನಾಯಕತ್ವದ ದಾಳ ಉರುಳಿಸಿ ಜೆಡಿಎಸ್ ಮತ ಸೆಳೆಯಲು ಕೂಡಾ ತಂತ್ರಗಾರಿಕೆ ರೂಪಿಸಲಾಗುತ್ತಿದೆ. ಇದರಿಂದ ಜೆಡಿಎಸ್ ಗಳಿಸಬಹುದಾದ ಸ್ಥಾನ ಸಂಖ್ಯೆ ಕುಸಿಯಬಹುದು. ಜೊತೆಗೆ, ಉತ್ತರ ಕರ್ನಾಟಕ ಭಾಗದಲ್ಲಿ ಲಿಂಗಾಯತ ಸಮುದಾಯವನ್ನು ಓಲೈಸಲು ಕೂಡಾ ಕಾರ್ಯತಂತ್ರವೂ ರೂಪಿಸಲಾಗುತ್ತಿದೆ. ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ, ಪಂಚಮಸಾಲಿ, ಒಕ್ಕಲಿಗರು ಸೇರಿದಂತೆ ವಿವಿಧ ಸಮುದಾಯಗಳ ಮೀಸಲಾತಿ ಬೇಡಿಕೆ ಬಗ್ಗೆ ಸರ್ಕಾರದ ನಿಲುವು ಮತದಾರರ ಮೇಲೆ ಉಂಟು ಮಾಡಬಹುದಾದ ಪರಿಣಾಮ, ಕಾಂಗ್ರೆಸ್ ಈಗಾಗಲೇ ನೀಡಿದ ಭರವಸೆಗಳಿಗೆ ಮತದಾರರ ಸ್ಪಂದನೆ ಇಂಥ ವಿಚಾರಗಳ ಬಗ್ಗೆಯೂ ಅವಲೋಕನ ನಡೆಯುತ್ತಿದೆ’ ಎಂದರು.

‘ಸರ್ವೆಗಳು ಪಕ್ಷಕ್ಕೆ ಸ್ಪಷ್ಟ ಬಹುಮತ (136 ಸೀಟು) ತೋರಿಸಿವೆ. ಮತದಾರರ ವಿಶ್ವಾಸವನ್ನು ಸರ್ವೆಗಳು ವ್ಯಕ್ತಪಡಿಸಿವೆ. ಆದರೆ, ಖಾಸಗಿ ಸಂಸ್ಥೆಯ ಸರ್ವೆಯನ್ನಷ್ಟೇ ಪೂರ್ಣ ನೆಚ್ಚಿಕೊಳ್ಳದೆ, ಕಾರ್ಯಕರ್ತರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬೂತ್‌ಮಟ್ಟದಲ್ಲಿ ಅಭಿಪ್ರಾಯ ಸಂಗ್ರಹಿಸುವ ಕೆಲಸ ನಡೆದಿದೆ. ಮತದಾರರಲ್ಲಿ ಭರವಸೆ ಮೂಡಿಸಲು ಸಾಕಷ್ಟು ಕೆಲಸ ಮಾಡಿದೆ. ಹೀಗಾಗಿ, ಪಕ್ಷದ ಪರವಾದ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಮುಂದೆ ಇನ್ನೂ ಕೆಲ ಮಹತ್ವದ ಭರವಸೆಗಳನ್ನು ನೀಡಲು ಉದ್ದೇಶಿಸಲಾಗಿದೆ’ ಎಂದೂ ನಾಯಕರೊಬ್ಬರು ತಿಳಿಸಿದರು.


ಭೂಮಾಲೀಕರಿಗೆ ಪರಿಹಾರ

ಒಂದನೇ ಪುಟದಿಂದ...

‘ಮಂಡಳಿಯ ವಿಶೇಷ ಭೂಸ್ವಾಧೀನ ಅಧಿಕಾರಿಯವರನ್ನು ಮಾತ್ರ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡಿಲ್ಲ’ ಎಂದು ಆಕ್ಷೇಪಿಸಿ ಕೆಐಎಡಿಬಿ ಹೈಕೋರ್ಟ್‌ನ ಧಾರವಾಡ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಬಳ್ಳಾರಿ ನ್ಯಾಯಾಲಯದ ಆದೇಶವನ್ನು 2018ರಲ್ಲಿ ರದ್ದುಪಡಿಸಿದ ಹೈಕೋರ್ಟ್, ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡಿಕೊಂಡು ಪ್ರಕರಣದ ವಿಚಾರಣೆ ನಡೆಸಬೇಕು ಎಂದು ಅಧೀನ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು.



ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಬಿ.ರವಿಪ್ರಕಾಶ್ ಹಾಗೂ ಇತರರು 2018ರಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. 2023ರ ಜನವರಿ 31ರಂದು ತೀರ್ಪು ನೀಡಿರುವ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠ, ‘ಈ ಪ್ರಕರಣದಲ್ಲಿ ಸರ್ಕಾರದ ಲಾಭಕ್ಕಾಗಿ ಭೂಸ್ವಾಧೀನ ಮಾಡುತ್ತಿಲ್ಲ. ಕೈಗಾರಿಕೆ ಸ್ಥಾಪನೆಗೆ ಭೂಸ್ವಾಧೀನ ಮಾಡಲು ಅರ್ಸೆಲರ್ ಮಿತ್ತಲ್ ಹಾಗೂ ಕೆಐಎಡಿಬಿ ಒಪ್ಪಂದ ಮಾಡಿಕೊಂಡಿವೆ. ಪರಿಹಾರದ ಮೊತ್ತವನ್ನು ಕಂಪನಿ ಪಾವತಿಸಬೇಕಿದೆ. ವಿಶೇಷ ಭೂಸ್ವಾಧೀನ ಅಧಿಕಾರಿಯವರು ದಾಖಲೆಗಳ ಪರಿಶೀಲನೆ ನಡೆಸಿ ಪ್ರಕ್ರಿಯೆ ನಡೆಸಿದ್ದಾರೆ. ಇಲ್ಲಿ ಮಂಡಳಿಯ ಪಾತ್ರ ಏನಿಲ್ಲ. ಹೀಗಾಗಿ, ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡಬೇಕು ಎಂಬ ಹೈಕೋರ್ಟ್ ವ್ಯಾಖ್ಯಾನ ಸರಿಯಿಲ್ಲ’ ಎಂದು ಅಭಿಪ್ರಾಯಪಟ್ಟಿದೆ.



ಸುಭಾಷಿತ

ಜ್ಞಾನ ಮತ್ತು ಅಹಂ ಎರಡಕ್ಕೂ ನೇರವಾದ ಸಂಬಂಧ ಇರುತ್ತದೆ. ಜ್ಞಾನ ಕಡಿಮೆ ಇದ್ದಷ್ಟೂ ಅಹಂ ಹೆಚ್ಚಿರುತ್ತದೆ.
–ಆಲ್ಬರ್ಟ್ ಐನ್‌ಸ್ಟೀನ್

ಉನ್ನತ ಶಿಕ್ಷಣದಲ್ಲಿ ಮಹಿಳೆ ಕೋವಿಡ್ ಸಂದರ್ಭದಲ್ಲಿ ಹಿನ್ನಡೆ

ಕೋವಿಡ್–19 ಸಾಂಕ್ರಾಮಿಕದ ಪ್ರಭಾವವು ಕಡಿಮೆ ಆದ ನಂತರ ದೇಶದ ಉನ್ನತ ಶಿಕ್ಷಣ ವಲಯದಲ್ಲಿ ಏನಾಗಿದೆ ಎಂಬ ವಿಚಾರದಲ್ಲಿ 2020– 21ನೇ ಸಾಲಿನ ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯು (ಎಐಎಸ್‌ಎಚ್‌ಇ) ಮಿಶ್ರ ಚಿತ್ರಣವನ್ನು ನೀಡಿದೆ. ವರದಿಯು ಒಳ್ಳೆಯ ವಿಚಾರಗಳನ್ನು ಹೇಳಿದೆ, ಕೆಲ ಸಂಗತಿಗಳನ್ನು ತಿಳಿಸಿದೆ. ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪಡೆಯುವುದು ಹೆಚ್ಚಾಗಿದೆ ಎಂಬುದನ್ನು ವರದಿ ಹೇಳಿದೆ. 2019–20ರಲ್ಲಿ 3.85 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದರೆ, 2020–21ರಲ್ಲಿ ಆ ಸಂಖ್ಯೆಯು 4.14 ಕೋಟಿಗೆ ಹೆಚ್ಚಾಗಿದೆ. ಇದೇ ಅವಧಿಯಲ್ಲಿ ವಿದ್ಯಾರ್ಥಿನಿಯರ ಪ್ರವೇಶ ಪ್ರಮಾಣವು 1.88 ಕೋಟಿ ಇದ್ದದ್ದು 2.01 ಕೋಟಿಗೆ ಹೆಚ್ಚಾಗಿದೆ. ವಿಶ್ವವಿದ್ಯಾಲಯಗಳ ಒಟ್ಟು ಸಂಖ್ಯೆಯಲ್ಲಿ ಸರ್ಕಾರದ ವಿಶ್ವವಿದ್ಯಾಲಯಗಳ ಪ್ರಮಾಣವು ಶೇ 59.1ರಷ್ಟು ಇದೆ. ಸರ್ಕಾರದ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪಡೆಯುವ ಪ್ರಮಾಣ ಹೆಚ್ಚಾಗಿದ್ದು, ವಿಶ್ವವಿದ್ಯಾಲಯಗಳಿಗೆ ಸೇರುವ ವಿದ್ಯಾರ್ಥಿಗಳ ಪೈಕಿ ಶೇ 73.1ರಷ್ಟು ಮಂದಿ ಇಲ್ಲಿಗೆ ಸೇರುತ್ತಿದ್ದಾರೆ. ವಿಶ್ವವಿದ್ಯಾಲಯಗಳು, ಕಾಲೇಜುಗಳು ಹಾಗೂ ಬೋಧಕರ ಸಂಖ್ಯೆ ಕೂಡ ಹೆಚ್ಚಾಗಿದೆ. ಪರಿಶಿಷ್ಟ ಜಾತಿಗಳಿಗೆ (ಎಸ್‌ಸಿ) ಸೇರಿದ ವಿದ್ಯಾರ್ಥಿಗಳು, ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದೆ. ದೂರಶಿಕ್ಷಣ ಕೋರ್ಸ್‌ಗಳಿಗೆ ಸೇರಿದವರ ಸಂಖ್ಯೆ ಏರಿಕೆ ಕಂಡಿದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು ಹಾಗೂ ನಿರ್ದಿಷ್ಟ ಪ್ರದೇಶದಲ್ಲಿ ಕಾಲೇಜುಗಳ ಪ್ರಮಾಣದ ವಿಚಾರದಲ್ಲಿ ಕರ್ನಾಟಕವು ದೇಶದಲ್ಲಿ ಮುಂಚೂಣಿ ಸ್ಥಾನದಲ್ಲಿದೆ. ಆದರೆ, ಎಂಜಿನಿಯರಿಂಗ್, ವಾಣಿಜ್ಯ ಮತ್ತು ಆಡಳಿತ ನಿರ್ವಹಣೆಯಂತಹ ಕೋರ್ಸ್‌ಗಳಲ್ಲಿ ವಿದ್ಯಾರ್ಥಿನಿಯರ ಪ್ರಾತಿನಿಧ್ಯವು ಕಡಿಮೆ ಆಗಿರುವುದು ಗಂಭೀರವಾದ ವಿಚಾರ.



ವಿದ್ಯಾರ್ಥಿವೇತನ ಹಾಗೂ ಇತರ ನೆರವುಗಳನ್ನು ಒದಗಿಸಿ, ವಿದ್ಯಾರ್ಥಿನಿಯರು ಉನ್ನತ ಶಿಕ್ಷಣದ ಕೋರ್ಸ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆ ಆಗುವಂತೆ ಮಾಡಬೇಕು

ವೃತ್ತಿಪರ ಹಾಗೂ ವಾಣಿಜ್ಯ ಕೋರ್ಸ್‌ಗಳಲ್ಲಿ ಲಿಂಗ ಸಮಾನತೆಯನ್ನು ದೊಡ್ಡ ಮಟ್ಟದಲ್ಲಿ ಸಾಧಿಸಲಾಗಿತ್ತು. ಆದರೆ ಈಗ ಆ ಸಮಾನತೆಯ ಹದ ತಪ್ಪಿದೆ. ತಂತ್ರಜ್ಞಾನ, ಕಾನೂನು ಮತ್ತು ವಾಣಿಜ್ಯ ಆಡಳಿತದಂತಹ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯ ಹೆಚ್ಚಾಗಿದೆ. ತರಗತಿಗಳಲ್ಲಿ ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಯರ ಸಂಖ್ಯೆಯಲ್ಲಿ ವರ್ಷಗಳಿಂದ ಸುಧಾರಣೆ ಕಂಡುಬರುತ್ತಿತ್ತು, ಆದರೆ ತರಗತಿಗಳಲ್ಲಿನ ಲಿಂಗ ಸಮಾನತೆಗೆ ಕೋವಿಡ್ ಸಂದರ್ಭದಲ್ಲಿ ಹಿನ್ನಡೆ ಆಗಿದೆ. ಆ ಅವಧಿಯಲ್ಲಿ ಕುಟುಂಬಗಳಲ್ಲಿ ಹಾಗೂ ಸಮಾಜದಲ್ಲಿ ಮಹಿಳೆಯರು ಹೆಚ್ಚಿನ ಬೆಲೆ ತೆರಬೇಕಾಯಿತು ಎಂಬ ವಾಸ್ತವದ ಜೊತೆಯಲ್ಲೇ ಈ ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕು. ಮಹಿಳೆಯರು ಕೆಲಸ ಕಳೆದುಕೊಂಡ ಪ್ರಮಾಣ ಹೆಚ್ಚಿತ್ತು, ಅವರು ಹೆಚ್ಚಿನ ಸಂಖ್ಯೆಯಲ್ಲಿ ಅನಾರೋಗ್ಯಕ್ಕೆ ಈಡಾದರು, [illegible] ಸಮಾಜದಲ್ಲಿ ಒಟ್ಟಾರೆಯಾಗಿ ಮಹಿಳೆಯರು ಹೆಚ್ಚು ತೊಂದರೆ ಅನುಭವಿಸಿದರು. [illegible] ಹಲವು ವರ್ಷಗಳಲ್ಲಿ ಸಂಪಾದಿಸಿದ್ದನ್ನು ಕಳೆದುಕೊಂಡರು. ಶಿಕ್ಷಣವು ಅಂತಹ ಒಂದು ಕ್ಷೇತ್ರ. ಆದರೆ, ಕೋವಿಡ್‌ನ ಕಾರಣದಿಂದಾಗಿ ಇಡೀ ಸಮಾಜವು ಸವಾಲನ್ನು ಎದುರಿಸುತ್ತಿತ್ತು. ಆ ಸಂದರ್ಭದಲ್ಲಿ, ಹಿಂದಿನಿಂದಲೂ ಆಚರಣೆಯಲ್ಲಿ ಬಂದಿರುವ ಸಾಮಾಜಿಕ ಹಾಗೂ ಸಾಂಪ್ರದಾಯಿಕ ವರ್ತನೆಗಳು ಮತ್ತಷ್ಟು ಹೆಚ್ಚು ವ್ಯಕ್ತವಾದವು. ಅವುಗಳ ಪರಿಣಾಮವು ಎಲ್ಲೆಡೆಯೂ ಕಂಡುಬಂದಿದೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತಕ್ಕೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ ಆಗಿರುವುದು ಒಂದು ಪ್ರವೃತ್ತಿಯಾಗಿರಬಹುದು ಎಂಬುದನ್ನು ಈಗಲೇ ಹೇಳಲಾಗದು. ಆದರೂ, ಸರ್ಕಾರಗಳು ಹಾಗೂ ಶಿಕ್ಷಣ ಸಂಸ್ಥೆಗಳು ಹೆಚ್ಚು ನೀತಿಗಳನ್ನು ರೂಪಿಸುವ ಮೂಲಕ ಇಂತಹ ಬದಲಾವಣೆಗಳಿಗೆ ತಡೆಯೊಡ್ಡಬೇಕು. ವಿದ್ಯಾರ್ಥಿವೇತನ ಹಾಗೂ ಇತರ ನೆರವುಗಳನ್ನು [illegible] ಒದಗಿಸಿ, ವಿದ್ಯಾರ್ಥಿನಿಯರು ಈ ಕೋರ್ಸ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆ ಆಗುವಂತೆ ಮಾಡಬೇಕು. ಶಿಕ್ಷಣದ ಪ್ರತೀ ವಿಭಾಗದಲ್ಲಿಯೂ ಪ್ರತೀ ಕೋರ್ಸ್‌ನಲ್ಲಿಯೂ ಲಿಂಗ ಸಮಾನತೆ ಸಾಧಿಸುವ ಗುರಿ ಇರಬೇಕು. ಹಾಗೆ ನೋಡಿದರೆ, ವಿದ್ಯಾರ್ಥಿನಿಯರಿಗೆ ಹೆಚ್ಚು ಅನುಕೂಲ ಆಗುವ ರೀತಿಯಲ್ಲಿ ನೀತಿ ರೂಪಿಸಿದರೂ ಒಳ್ಳೆಯದೇ. ಏಕೆಂದರೆ, ಸುಶಿಕ್ಷಿತ ಹೆಣ್ಣು ಸಮಾಜಕ್ಕೆ ಸುಶಿಕ್ಷಿತ ಪುರುಷನಿಗಿಂತ ಹೆಚ್ಚಿನ ವಿಧಗಳಲ್ಲಿ ನೆರವಿಗೆ ಬರುತ್ತಾಳೆ. ಸುಶಿಕ್ಷಿತ ಹೆಣ್ಣಿನಿಂದ ಅರ್ಥ ವ್ಯವಸ್ಥೆಗೆ ಸಿಗುವ ಪ್ರಯೋಜನಗಳೂ ಹೆಚ್ಚಿನ ಮಟ್ಟದಲ್ಲಿಯೇ ಇರುತ್ತವೆ.

ದಿನದ ಟ್ವೀಟ್

ದ್ವಂದ್ವ ನಿಲುವಿನ ನಾಯಕ



ಮಿಲಿಟರಿ ಸರ್ವಾಧಿಕಾರಿಯಾಗಿದ್ದ ಮುಷರಫ್ ಅವರು ವಾಜಪೇಯಿ ಅವರು ಆಯೋಜಿಸಿದ್ದ 2001ರ ಆಗ್ರಾ ಶೃಂಗಸಭೆಯಲ್ಲಿ ಭಾರತ–ಪಾಕಿಸ್ತಾನದ ನಡುವೆ ಶಾಂತಿ ಸ್ಥಾಪನೆಯ ಅವಕಾಶಗಳನ್ನು ಹಾಳುಮಾಡಿದ್ದರು. ಅವರು ಕಾರ್ಗಿಲ್ ಯುದ್ಧದ ರೂವಾರಿಯೂ ಹೌದು. ನಂತರ, ಕಾಶ್ಮೀರ ವಿವಾದದ ಶಾಂತಿಯುತ ಪರಿಹಾರಕ್ಕಾಗಿ ಅವರು ವಿವೇಕಯುತವಾದ ಪ್ರಸ್ತಾವವನ್ನು ಮಂಡಿಸಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಆತ್ಮೀಯ ಮುಖ್ಯಮಂತ್ರಿ ಅವರೇ, ಬೆಂಗಳೂರಿನ ಸ್ಯಾಂಕಿ ಕೆರೆ ರಸ್ತೆಯನ್ನು ಅಗಲ ಮಾಡುವ ತುರ್ತಾದರೂ ಏನು? ಈ ಕುರಿತು ಸ್ಪಷ್ಟೀಕರಣ ಬಯಸಿರುವ ಅರ್ಜಿಗೆ 22,000 ಮಂದಿ ಸಹಿ ಹಾಕಿದ್ದಾರೆ ಮತ್ತು 2,000 ಮಕ್ಕಳು ತಮ್ಮ ಬಸವರಾಜ ಬೊಮ್ಮಾಯಿ ಅಂಕಲ್‌ಗೆ ಪತ್ರ ಬರೆದಿದ್ದಾರೆ. ಅವರು ಕೇಳುತ್ತಿರುವುದು ಸರಳವಾದ ಪ್ರಶ್ನೆ– ಫ್ಲೈ ಓವರ್ ಯಾಕೆ?

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ
ಶುಕ್ರವಾರ, 6-2-1998

• **ಕೃಷಿ ಅಭಿವೃದ್ಧಿಗೆ ಆದ್ಯತೆ ಸಣ್ಣ ರಾಜ್ಯಗಳಿಗೆ ಒಲವು**

ನವದೆಹಲಿ, ಫೆ. 5– ಸುಭದ್ರತೆ, ಅಧಿಕಾರ ವಿಕೇಂದ್ರೀಕರಣ, ಆರ್ಥಿಕ ಉದಾರೀಕರಣ ನೀತಿಯ ಪುನರ್‌ಪರಿಶೀಲನೆ ಹಾಗೂ ಕೃಷಿ ರಂಗಕ್ಕೆ ಆದ್ಯತೆ ನೀಡುವ ಭರವಸೆಯ ಜನತಾದಳದ ಪ್ರಣಾಳಿಕೆಯನ್ನು ಇಂದು ಇಲ್ಲಿ ಬಿಡುಗಡೆ ಮಾಡಲಾಯಿತು. ಈ ಉದ್ದೇಶ ಸಾಧನೆಗಾಗಿ ಸಂಯುಕ್ತರಂಗಕ್ಕೆ ಸ್ಪಷ್ಟ ಜನಾದೇಶ ನೀಡುವಂತೆ ಪ್ರಣಾಳಿಕೆಯು ಜನರಲ್ಲಿ ಮನವಿ ಮಾಡಿಕೊಂಡಿದೆ.

ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಮತ್ತು ಜನತಾದಳದ ಹಿರಿಯ ನಾಯಕ ಮಧು ದಂಡವತೆ ಅವರು ಬಿಡುಗಡೆ ಮಾಡಿದ 20 ಪುಟಗಳ ಪ್ರಣಾಳಿಕೆ, ಸಣ್ಣ ರಾಜ್ಯಗಳ ನಿರ್ಮಾಣ, ವಿಮಾ ಕ್ಷೇತ್ರದಲ್ಲಿ ವಿದೇಶಿ ಸಂಸ್ಥೆಗಳಿಗೆ ನಿಷೇಧ, ಮೂಲಭೂತ ಸೌಲಭ್ಯ ಒದಗಿಸುವ ಕ್ಷೇತ್ರಗಳಲ್ಲಿ ವಿದೇಶಿ ಸಂಸ್ಥೆಗಳಿಗೆ ಅವಕಾಶ, ಉನ್ನತ ಸ್ಥಾನದಲ್ಲಿ ಭ್ರಷ್ಟಾಚಾರ ತಡೆಗೆ ಪ್ರಧಾನಿ ಸೇರಿ ಉನ್ನತ ಸರ್ಕಾರಿ ಅಧಿಕಾರಿಗಳನ್ನು ಒಳಗೊಳ್ಳುವಂತೆ ಲೋಕಪಾಲ ಕಾಯ್ದೆ ರಚನೆಯ ಭರವಸೆಗಳನ್ನು ಪ್ರಣಾಳಿಕೆ ಒಳಗೊಂಡಿದೆ.

• **ಸೋನಿಯಾ ರಾಜಕಾರಣಿ ಆಗಲು ಸಾಧ್ಯವಿಲ್ಲ: ಬಸು**

ಕಲ್ಕತ್ತ, ಫೆ. 5 (ಪಿಟಿಐ)– ಕಾಂಗ್ರೆಸ್ ಪಕ್ಷವು ಸೋನಿಯಾ ಗಾಂಧಿ ಅವರನ್ನು ಪ್ರಧಾನಿ ಅಭ್ಯರ್ಥಿಯೆಂದು ಪ್ರಚಾರ ಮಾಡುತ್ತಿರುವುದನ್ನು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಟೀಕಿಸಿದ್ದಾರೆ.

‘ಆಕೆ ಒಬ್ಬ ಗೃಹಿಣಿಯೇ ವಿನಾ ರಾಜಕಾರಣಿಯಾಗಲು ಸಾಧ್ಯವೇ ಇಲ್ಲ’ ಎಂದು ಅವರು ನುಡಿದರು.

‘ಚುನಾವಣೆಯಲ್ಲಿ ರಾಜಕೀಯ ಮತ್ತು ಆರ್ಥಿಕ ವಿಷಯಗಳೇ ಪ್ರಮುಖ ಪಾತ್ರ ವಹಿಸುವುದರಿಂದ ಯಾವುದೋ ವ್ಯಕ್ತಿ ಭಾರತವನ್ನು ರಕ್ಷಿಸಲು ಸ್ವರ್ಗದಿಂದ ಬರುವ ಪ್ರಶ್ನೆ ಏಳುವುದಿಲ್ಲ’ ಎಂದು ಹೇಳಿದರು.

50 ವರ್ಷಗಳ ಹಿಂದೆ
ಮಂಗಳವಾರ, 6-2-1973

• **ಬರಪೀಡಿತರ ನೆರವಿಗಾಗಿ ಚಲನಚಿತ್ರ ಕಲಾವಿದರಿಂದ ನಗರದಲ್ಲಿ ನಿಧಿ ಸಂಗ್ರಹ**

ಬೆಂಗಳೂರು, ಫೆ. 5– ಕನ್ನಡ ಚಲನಚಿತ್ರ ಕಲಾವಿದರು ಇಂದು ಬೆಳಿಗ್ಗೆ ನಗರದಲ್ಲಿ ಮೆರವಣಿಗೆಯಲ್ಲಿ ಹೊರಟು ಕ್ಷಾಮಪೀಡಿತ ಜಿಲ್ಲೆಗಳ ಸಂತ್ರಸ್ತರಿಗಾಗಿ ನಿಧಿ ಸಂಗ್ರಹಿಸಿದರು.

ಕನ್ನಡ ಪಕ್ಷದ ಆಶ್ರಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸೂಕ್ತ ಸಂಘಟನೆ ಇಲ್ಲದೆ ನಾಗರಿಕರು ನೂಕು ನುಗ್ಗಾಟದಲ್ಲಿ ಸಿಕ್ಕಿ, ಪೊಲೀಸರ ಬೆತ್ತ ಪ್ರಹಾರಕ್ಕೆ ಗುರಿಯಾದರು.

ಬೆಂಗಳೂರು ನಗರ ಕಾರ್ಪೊರೇಷನ್ನಿನ ಮೇಯರ್ ಶ್ರೀ ಎ.ಕೆ. ಅನಂತಕೃಷ್ಣ ಅವರು ಮೈಸೂರು ಬ್ಯಾಂಕ್ ಬಳಿ ಇರುವ ಆಂಜನೇಯ ಸ್ವಾಮಿಗೆ ನಮಸ್ಕರಿಸಿ 11 ರೂ. ಕಾಣಿಕೆ ನೀಡಿ ಕಾರ್ಯಕ್ರಮ ಉದ್ಘಾಟಿಸಿದರು. ಅಲ್ಲಿ, ಕಲಾವಿದರ ದರ್ಶನ ಪಡೆಯಲು ಜನರಿಂದ ನೂಕುನುಗ್ಗಲು ನಡೆಯಿತು.

• **ಬರಪೀಡಿತರ ಎರಡನೇ ತಂಡ ನಗರದಲ್ಲಿ**

ಬೆಂಗಳೂರು, ಫೆ. 5– ಕಲಬುರ್ಗಿ ಜಿಲ್ಲೆಯ ಯಾದ್ಗೀರ್ ತಾಲ್ಲೂಕಿನ ರಾಮಸಮುದ್ರವು ಬೆಂಗಳೂರಿಗೆ ಹತ್ತಿರವೇನಲ್ಲ. ಆ ಜನರಿಗೆ ಇಲ್ಲಿಗೆ ಬರುವುದು ಸುಲಭವೂ ಆಗಿರಲಿಲ್ಲ.

ಬರದೆ ಬೇರೆ ಮಾರ್ಗ ಇರಲಿಲ್ಲ, ಬಂದೇ ಬಿಟ್ಟರು. ಇಂದು ಬರದಿದ್ದರೆ ‘ಪ್ರಯಾಣಕ್ಕೆ ಮಾತ್ರ ಇದ್ದ’ ಹಣವೂ ವೆಚ್ಚವಾಗಿಹೋಗುವ ಭಯ. ಹಾಲು ಕುಡಿಯುವ ಹಸುಳೆ, ಬೆನ್ನು ಬಾಗಿದ ಮುದುಕಿಯೂ ಸೇರಿ ಸುಮಾರು 70 ಮಂದಿ ನಿನ್ನೆ ರಾತ್ರಿ ರೈಲು ನಿಲ್ದಾಣದಲ್ಲಿ ಬಂದಿಳಿದಾಗ ಕೆಲಸದ ಪ್ರಶ್ನೆ ಇರಲಿ ರಾತ್ರಿ ತಂಗುವ ಸ್ಥಳಾವಕಾಶವೂ ಖಚಿತವಿರಲಿಲ್ಲ.

ಕಸ, ಕೊಳಚೆ, ಕೃಷಿತ್ಯಾಜ್ಯಗಳನ್ನೆಲ್ಲ ಗೊಬ್ಬರವಾಗಿಸಿ ಮೇಲ್ಮಣ್ಣಿನ ಫಲವತ್ತತೆ ಹೆಚ್ಚಿಸಲೇಬೇಕಿದೆ ಈಗ

ಸಮೃದ್ಧಿ ಮರಳೀತೇ ಮೇಲ್ಮಣ್ಣಿಗೆ?



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಒಂದು ಹಿಡಿ ಮಣ್ಣನ್ನು ಕೈಯಲ್ಲಿ ಹಿಡಿದು ಅದರ ಗುಣಾವಗುಣಗಳನ್ನೆಲ್ಲ ಖಚಿತವಾಗಿ ಊಹಿಸಬಲ್ಲ ಸಾಮರ್ಥ್ಯದ ರೈತರು ನಾಡಿನಲ್ಲಿದ್ದಾರೆ. ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ಒಯ್ದರೆ, ಅದರ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಲಕ್ಷಣಗಳನ್ನೆಲ್ಲ ವಿಶ್ಲೇಷಿಸಿ, ಮೇಲ್ಮಣ್ಣಿನ ಸಂಪೂರ್ಣ ಜಾತಕವನ್ನೂ ಪಡೆಯಬಹುದು. ಆದರೆ, ಕೆಲವು ದಶಕಗಳಿಂದ ಭೂಸಾರ ಅದೆಷ್ಟು ನಷ್ಟವಾಗುತ್ತಿದೆ ಎಂದರೆ, ಹೊಲ, ತೋಟಗಳಿಗೆ ಕಾಲಿಟ್ಟೊಡನೆ, ಮಣ್ಣು ಬಡವಾಗುತ್ತಿರುವುದನ್ನು ಮೇಲ್ನೋಟದಲ್ಲಿಯೇ ಗುರುತಿಸಿಬಿಡಬಹುದು! ಸ್ವಾತಂತ್ರ್ಯ ಬಂದ ನಂತರ ಆಹಾರ ಉತ್ಪಾದನೆ ಹೆಚ್ಚಿಸಲೆಂದು ದೇಶದಲ್ಲಿ ಅಳವಡಿಸಿಕೊಂಡ ಹಸಿರುಕ್ರಾಂತಿ ತಂತ್ರಜ್ಞಾನಗಳನ್ನು ಆನಂತರದಲ್ಲೂ ದಿಕ್ಕುದೆಸೆಯಿಲ್ಲದೆ ವಿಸ್ತರಿಸಿದ್ದರ ಫಲಶ್ರುತಿಯಿದು.

ಮಿತಿಮೀರಿದ ರಸಗೊಬ್ಬರ ಬಳಕೆಯೂ ಅದರ ಘೋರ ಪರಿಣಾಮಗಳಲ್ಲಿ ಒಂದು. ಬೆಳೆಗಳಿಗೆ ಅಗತ್ಯವಾದ ಹಲವು ಪೋಷಕಾಂಶಗಳಲ್ಲಿ ಸಾರಜನಕ, ರಂಜಕ ಹಾಗೂ ಪೊಟ್ಯಾಶ್ (ಎನ್.ಪಿ.ಕೆ.) ಮಾತ್ರ ಮುಖ್ಯವೆಂದು ಪರಿಗಣಿಸಿ, ಅವುಗಳ ರಸಗೊಬ್ಬರವನ್ನಷ್ಟೇ ಅಧಿಕವಾಗಿ ನೀಡತೊಡಗಿದೆವು. ಮಿತಿಯಿಲ್ಲದೆ ಸುರಿಯುವ ಎನ್.ಪಿ.ಕೆ.ಯಿಂದಾಗಿ, ಹೆಚ್ಚುವರಿ ಸಾರಜನಕವು ಹರಿಯುವ ನೀರಿನ ಜೊತೆ ಕೆರೆ, ನದಿಗಳನ್ನು ಸೇರಿ ಹುಲುಸಾದ ಕಳೆ ಬೆಳೆಸುತ್ತಿದೆ!

ರಂಜಕವು ಹೆಚ್ಚಾಗಿ ಮಣ್ಣಿನ ಸೂಕ್ಷ್ಮಾಣುಜೀವಿ ಲೋಕವನ್ನು ನಾಶ ಮಾಡುತ್ತಿದೆ. ಅತಿಯಾದ ಪೊಟ್ಯಾಶ್ ಬಳಕೆಯು ರಸಸಾರವನ್ನು ಹೆಚ್ಚಿಸಿ ಮಣ್ಣನ್ನು ಬರಡಾಗಿಸುತ್ತಿದೆ. ರಸಗೊಬ್ಬರದ ಪರಿಣಾಮ ಹಿಗ್ಗಿಸಲು ಒಣಭೂಮಿಯಲ್ಲೂ ಅಗತ್ಯ ಮೀರಿ ನೀರಾವರಿ ಕೈಗೊಂಡೆವು. ಹೊಳೆ, ಕೆರೆ, ಕಾಲುವೆಗಳ ನೀರು ಸಾಲದಾಗಿ, ಕೊಳವೆ ಬಾವಿಗಳು ವ್ಯಾಪಕವಾಗಿ ಅಂತರ್ಜಲವು ಅಪಾಯಕಾರಿ ಹಂತಕ್ಕೆ ಕುಸಿಯುತ್ತಿದೆ. ಅತಿ ನೀರಾವರಿಯು ಮಣ್ಣನ್ನು ಜೌಗನ್ನಾಗಿಸಿ, ಕ್ಷಾರತೆ ಹೆಚ್ಚಿಸುತ್ತಿದೆ. ರಸಸಾರ, ಪೋಷಕಾಂಶ, ನೀರು ಹಿಡಿದಿಡುವ ಗುಣ, ಸೂಕ್ಷ್ಮಾಣುಜೀವಿಗಳ ಲಭ್ಯತೆ, ಇಳುವರಿ- ಈ ಯಾವುದನ್ನು ಪರಿಗಣಿಸಿದರೂ ಮಣ್ಣಿನ ಸಾಮರ್ಥ್ಯ ತೀವ್ರವಾಗಿ ಕುಸಿದಿರುವುದನ್ನು ರೈತರು ಈಗ ಅನುಭವಿಸುತ್ತಿದ್ದಾರೆ.

ಮಣ್ಣಿನ ಸಾರ ನಾಶವಾಗುತ್ತಿರುವುದು ಈಗ ಕೃಷಿ ಕ್ಷೇತ್ರದ ಒಂದು ದೊಡ್ಡ ಬಿಕ್ಕಟ್ಟೇ ಸರಿ. ಹೀಗಾಗಿಯೇ ‘ಮೇಲ್ಮಣ್ಣು ಸಂರಕ್ಷಿಸಿ’ ಎಂಬ ಕೂಗು ಎಲ್ಲೆಡೆ ಕೇಳಿಬರುತ್ತಿರುವುದು. ಭವಿಷ್ಯದಲ್ಲಿ ಇದನ್ನು ಸುಸ್ಥಿತಿಗೆ ತರಬೇಕೆಂದರೆ, ದಶಕಗಳ ಹಿಂದಿನ ಆರೋಗ್ಯಕರ ಸ್ಥಿತಿಗೆ ಮಣ್ಣನ್ನು ಹಿಂತಿರುಗಿಸಲೇಬೇಕಿದೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಮಂಡಿಸಿರುವ ಮುಂಗಡಪತ್ರದಲ್ಲಿರುವ ‘ಪ್ರಧಾನಮಂತ್ರಿ- ಪ್ರಣಾಮ’ ಎಂಬ ನೂತನ ಯೋಜನೆಯ ಹಿಂದಿರುವುದು ಈ ಚಿಂತನೆ. ಮಣ್ಣಿನ ಸಾಮರ್ಥ್ಯವನ್ನು ಬಹು ಆಯಾಮಗಳಲ್ಲಿ ಪುನರುಜ್ಜೀವನಗೊಳಿಸುವ, ಕೃತಕ ರಸಗೊಬ್ಬರಗಳ ಅತಿಬಳಕೆಯ ಅನಾಹುತಗಳನ್ನು ನಿಯಂತ್ರಿಸಲು, ಕೃಷಿಕ್ಷೇತ್ರವನ್ನು ಹಂತಹಂತವಾಗಿ ಸಜ್ಜುಗೊಳಿಸುವ ಈ ಯೋಜನೆ ಸ್ವಾಗತಾರ್ಹವೇ. ಆದರೆ, ಈ ಬಗೆಯ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಒಂದು ಪ್ರಮುಖ ಸವಾಲಿದೆ. ಕೃತಕ ರಾಸಾಯನಿಕ ಬಳಸದೆ ಕೃಷಿಯು ಸಾಧ್ಯವೇ ಇಲ್ಲ ಎಂದು ಬಲವಾಗಿ ನಂಬುವವರ ಪ್ರತಿರೋಧವದು. ರಾಜಕೀಯವರ್ಗ, ಅಧಿಕಾರಶಾಹಿ, ಉದ್ಯಮಿಗಳು, ಕೃಷಿವಿಜ್ಞಾನಿಗಳು- ಎಲ್ಲೆಡೆಯೂ ಈ ಮನಃಸ್ಥಿತಿಯವರಿದ್ದಾರೆ. ಹಿಂದಿನ ವರ್ಷ ಶ್ರೀಲಂಕಾ ಅನುಭವಿಸಿದ ಆರ್ಥಿಕ ಕುಸಿತಕ್ಕೆ ಇದುವೇ ಕಾರಣ ಎಂದೂ ಅವರು ವಾದಿಸಿಯಾರು. ಆದರೆ ಅದು ತೀರಾ ಸರಳೀಕೃತ ತಿಳಿವಳಿಕೆ ಮತ್ತು ಅರ್ಧಸತ್ಯ ಎಂಬುದನ್ನು ಇತ್ತೀಚಿನ ಅಧ್ಯಯನಗಳು ಸಾಬೀತುಮಾಡಿವೆ. ದಶಕಗಳ ಕಾಲ ಸತತವಾಗಿ ಆ ದೇಶವು ಕೈಗೊಂಡ ತಪ್ಪು ಆರ್ಥಿಕ ನೀತಿ ನಿರ್ಧಾರಗಳು, ಭ್ರಷ್ಟಾಚಾರ, ಜಾಗತಿಕ ರಾಜಕಾರಣ- ಇವೆಲ್ಲವುಗಳಿಂದ ಉಂಟಾದ ಆ ವಿದ್ಯಮಾನವು ಭಿನ್ನ ಸಂದರ್ಭದ್ದು ಎಂಬುದನ್ನು ಗಮನಿಸಬೇಕಿದೆ.

ಮಣ್ಣಿನ ಸಹಜಗುಣಗಳನ್ನೆಲ್ಲ ಕಸಿಯುವ ಕೃತಕ ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿ, ಸೂಕ್ತ ಪೋಷಕಾಂಶಗಳನ್ನು ಪೂರೈಸಬಲ್ಲ ಹಲವಾರು ಜೈವಿಕ ವಿಧಾನಗಳ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಇತ್ತೀಚಿನ ದಶಕಗಳಲ್ಲಾಗಿವೆ. ಅಂಥವನ್ನು ಅನುಸರಿಸಿ ಯಶಸ್ಸು ಕಂಡ ಪ್ರಗತಿಪರ ರೈತರೂ ಬಹಳಷ್ಟಿದ್ದಾರೆ. ಬೆಳೆ ಹಾಗೂ ಕೃಷಿ ಕ್ಷೇತ್ರದ ಸ್ವರೂಪವನ್ನಾಧರಿಸಿ ಹಂತಹಂತವಾಗಿ ಕೃತಕ ರಸಗೊಬ್ಬರಗಳ ಬಳಕೆ ಕಡಿಮೆ ಮಾಡುವ ಬೇಸಾಯ ಕ್ರಮಗಳನ್ನು ಅವರು ಕಂಡುಕೊಳ್ಳುತ್ತಿದ್ದಾರೆ. ಈ ದಿಸೆಯಲ್ಲಿ ರೈತರಿಗೆ ಸಹಾಯಹಸ್ತ ನೀಡುವ ಹೊಣೆ ಸರ್ಕಾರ, ಕೃಷಿ ಇಲಾಖೆ ಹಾಗೂ ಕೃಷಿವಿಜ್ಞಾನದ್ದಾಗಬೇಕಿದೆ.

ಅಗತ್ಯವಿರುವ ಪೋಷಕಾಂಶಗಳನ್ನು ಒದಗಿಸುವ ಆ ಪ್ರಯೋಗಸಿದ್ಧ ಮಾದರಿಗಳು ಯಾವುವು? ಅಂಥ ಕೆಲವು ಪ್ರಮುಖ ಜೈವಿಕ ವಿಧಾನಗಳನ್ನು ನಾವಿಲ್ಲಿ ಪರಿಶೀಲಿಸಬಹುದು. ಮುಖ್ಯ ಪೋಷಕಾಂಶಗಳಾದ ಎನ್.ಪಿ.ಕೆ.ಯನ್ನು ಒದಗಿಸಬಲ್ಲ ನಿಸರ್ಗಸ್ನೇಹಿ ಒಳಸುರಿಗಳನ್ನೇ ಮೊದಲು ನೋಡೋಣ. ಕಾಡಿನ ಸೊಪ್ಪು, ಹೊಲದಂಚಿನಲ್ಲಿ ಬೆಳೆಸಿದ ಗಿಡಮರಗಳ ಹಸಿರೆಲೆ, ಕೃಷಿಭೂಮಿ ತ್ಯಾಜ್ಯ, ಗೋಮಾಳದ ಹುಲ್ಲು, ಸಗಣಿಗೊಬ್ಬರ, ಹಟ್ಟಿಯಲ್ಲಿ ತಯಾರಿಸುವ ಕಂಪೋಸ್ಟ್, ಸಂಸ್ಕರಿಸಿದ ಕೊಳಚೆ- ಇವೆಲ್ಲ, ಬೆಳೆಗಳಿಗೆ ಸಾರಜನಕ ಉಣಿಸಬಲ್ಲವು. ಬಯೋಗ್ಯಾಸ್ ಸ್ಥಾವರ ಸ್ಥಾಪಿಸಿ ಸಗಣಿಯಿಂದ ಸಾರಜನಕಭರಿತ ಸ್ಲರಿಗೊಬ್ಬರದ ಜೊತೆಗೆ, ಮಿಥೇನ್ ಅನಿಲದ ಅಡುಗೆ ಇಂಧನವನ್ನೂ ಪಡೆಯಲಾಗುತ್ತಿದೆ. ಸಾರಜನಕದ ಈ ಮೂಲಗಳನ್ನೆಲ್ಲ ಸೂಕ್ತ ಸಂಯೋಜನೆಯಲ್ಲಿ ಬಳಸಿದರೆ, ಮಣ್ಣಿನಲ್ಲಿ ಗಣನೀಯವಾಗಿ ಕುಸಿಯುತ್ತಿರುವ ‘ಸಾವಯವ ಇಂಗಾಲ’ದ ಪ್ರಮಾಣವನ್ನು ಹೆಚ್ಚಿಸಬಹುದು. ಬೆಳೆಗಳಿಗೆ ಅಗತ್ಯವಿರುವ ‘ಸಾರಜನಕ-ಇಂಗಾಲ’ದ ಪ್ರಮಾಣವನ್ನೂ ನಿರ್ವಹಿಸಬಹುದು. ರಂಜಕವನ್ನು ಸಾಕುಪ್ರಾಣಿಗಳ ಅವಶೇಷ, ಮಾಂಸ ಉತ್ಪಾದನಾ ಘಟಕಗಳಲ್ಲಿ ದೊರೆಯುವ ಎಲುಬಿನಪುಡಿ ಮಿಶ್ರಣದಿಂದ ಪಡೆಯಬಹುದು. ಹಸಿರೆಲೆ ಗೊಬ್ಬರದಲ್ಲೂ ಅದು ಧಾರಾಳವಾಗಿದೆ. ಹೊಲ ತೋಟಗಳ ಒಣತ್ಯಾಜ್ಯವನ್ನು ಸುಟ್ಟು ತಯಾರಿಸುವ ಸುಡುಬೂದಿ ಹಾಗೂ ಕಂಪೋಸ್ಟ್ ಗೊಬ್ಬರಗಳು ಪೊಟ್ಯಾಶ್ ಪೂರೈಸಬಲ್ಲವು. ಈ ಎಲ್ಲ ಸುರಕ್ಷಿತ ಎನ್.ಪಿ.ಕೆ. ಒಳಸುರಿಗಳು ಬೇಸಾಯ ಸಂಸ್ಕೃತಿಯ ಮುನ್ನೆಲೆಗೆ ಬರಬೇಕಿದೆ ಈಗ.

ಎನ್.ಪಿ.ಕೆ ಹೊರತಾಗಿಯೂ ಮಣ್ಣಿನ ಪೋಷಕಾಂಶಗಳನ್ನು ನಿರ್ಧರಿಸುವ ಅನೇಕ ಅಂಶಗಳಿವೆ. ಕ್ಯಾಲ್ಸಿಯಂ, ಮ್ಯಾಂಗನೀಸ್, ಕಬ್ಬಿಣ, ಝಿಂಕ್, ಬೋರಾನ್ ನಂತಹವೂ ಅಗತ್ಯ. ಇವನ್ನು ಸಹ ಸಗಣಿ ಹಾಗೂ ಕಂಪೋಸ್ಟ್ ಗೊಬ್ಬರಗಳು ಪೂರೈಸಬಲ್ಲವು. ಮಣ್ಣಿನ ಸಂರಚನೆ ರೂಪಿಸುವಲ್ಲಿ ಅಸಂಖ್ಯಾತ ಸೂಕ್ಷ್ಮಾಣುಜೀವಿಗಳ ಪಾತ್ರವೂ ಇದೆ. ಇದನ್ನು ಬಲ್ಲ ರೈತರು ರೈಝೋಬಿಯಂ, ಅಜೋಸ್ಪೈರಿಲ್ಲಮ್, ಅಝಟೊಬ್ಯಾಕ್ಟರ್‌ನಂತಹ ಜೈವಿಕಗೊಬ್ಬರಗಳನ್ನು ಈಗಾಗಲೇ ಬಳಸುತ್ತಿದ್ದಾರೆ.

ಕಸಕಡ್ಡಿ, ಕಟ್ಟಿಗೆಯಂತಹ ವಸ್ತುಗಳನ್ನು ಸೀಮಿತ ಆಮ್ಲಜನಕದೊಂದಿಗೆ ಸುಟ್ಟು ಉತ್ಪಾದಿಸುವ ‘ಜೈವಿಕ ಇಂಗಾಲ’ವನ್ನು (ಬಯೋಚಾರ್) ಕೃಷಿಯ ಕಪ್ಪುಬಂಗಾರ ಎಂದೇ ಜಾಗತಿಕವಾಗಿ ಗುರುತಿಸಲಾಗುತ್ತಿದೆ. ಇಂಗಾಲದ ಈ ಮಿದುಪುಡಿಯನ್ನು ಮಣ್ಣಿಗೆ ನಿಯಮಿತವಾಗಿ ಬೆರೆಸುವುದರಿಂದ ತೇವಾಂಶ ಹಿಡಿದಿಡುವ ಸಾಮರ್ಥ್ಯ, ಗಾಳಿ ತೂರಿಕೊಳ್ಳುವ ಪ್ರಮಾಣ, ಪೋಷಕಾಂಶಗಳ ಕರಗುವಿಕೆ, ಸೂಕ್ಷ್ಮಾಣುಜೀವಿಗಳ ವರ್ಧನೆ ಇವೆಲ್ಲವನ್ನೂ ಹೆಚ್ಚಿಸಬಹುದು. ಹಳ್ಳಿ, ಪಟ್ಟಣಗಳ ಜೈವಿಕತ್ಯಾಜ್ಯವನ್ನೆಲ್ಲ ಸಮೃದ್ಧ ಗೊಬ್ಬರವಾಗಿಸುವ ಈ ‘ಹಸಿರು ತಂತ್ರಜ್ಞಾನ’ಗಳನ್ನೆಲ್ಲ ರೈತರ ಅಂಗಳಕ್ಕೆ ತರಬೇಕಿದೆ.




ಕೃತಕ ರಸಗೊಬ್ಬರಗಳಿಂದ ಜೈವಿಕ ಗೊಬ್ಬರಗಳೆಡೆಗೆ ರೂಪಾಂತರಗೊಳ್ಳಬೇಕಾದ ಈ ಪ್ರಕ್ರಿಯೆಯು, ಭವಿಷ್ಯದ ಆಹಾರ ಭದ್ರತೆಗಾಗಿ ಅನಿವಾರ್ಯವಾಗಿ ತುಳಿಯಲೇಬೇಕಾದ ದಾರಿ. ಇದು ಸಾಧ್ಯವಾಗಲು ಸಂತುಲಿತ ಬೇಸಾಯಕ್ರಮಗಳು, ಸುರಕ್ಷಿತ ಒಳಸುರಿಗಳು ಕೃಷಿಯ ಮುಖ್ಯವಾಹಿನಿಗೆ ಯಶಸ್ವಿಯಾಗಿ ಬರಬೇಕು. ಇದನ್ನು ಸಾಧಿಸಲು, ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ರೈತರ ಸಹಭಾಗಿತ್ವ ಸಾಧ್ಯವಾಗಬೇಕು. ಪರಿಸರದ ಹಿತ ಹಾಗೂ ನಿರಂತರ ಕೃಷಿ ಉತ್ಪಾದನೆ ಪರಸ್ಪರ ಪೂರಕ ಎಂಬ ಅಂಶವನ್ನು ಒಪ್ಪುವ ಕೃಷಿ ನೀತಿ ನಮ್ಮದಾದರೆ ಈ ಗುರಿಯೇನೂ ಕಷ್ಟವಲ್ಲ. ಕೃಷಿಯ ಪರಿಣಾಮವನ್ನು ಸುರಕ್ಷಿತವಾಗಿಸುತ್ತಲೇ ಇಳುವರಿಯನ್ನು ಸುಸ್ಥಿರವಾಗಿಸುವ ದಿಕ್ಕಿನಲ್ಲಿ ಸಾಗಬೇಕಾದ ಈ ಸಂಕೀರ್ಣ ಪಯಣಕ್ಕೆ, ‘ಪ್ರಧಾನಮಂತ್ರಿ- ಪ್ರಣಾಮ’ ಯೋಜನೆ ಬಲ ನೀಡೀತೇ?

ಮಣ್ಣಿಗೆ ಸೂಕ್ತ ಪೋಷಕಾಂಶಗಳೂ ಕೃಷಿಗೆ ವಿವೇಕವೂ ಮರಳಬೇಕಿದೆ ಈಗ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಸಿ.ಡಿ ಸೇಡು

• ಮಣ್ಣೆ ರಾಜು

‘ದೀಪಾವಳಿಯಲ್ಲಿ ಪಟಾಕಿ ಸದ್ದಿನಂತೆ ಎಲೆಕ್ಷನ್ ಸಮಯದಲ್ಲಿ ಸಿ.ಡಿಗಳು ಸದ್ದು ಮಾಡುತ್ತವೆ. ಈಗಾಗಲೇ ಸಿ.ಡಿಗಳು ಸಿಡಿಯಲು ಶುರುವಾಗಿವೆ. ಸಿ.ಡಿ ಸಂತ್ರಸ್ತರ ಪಾಡೇನಾಗುವುದೋ...’ ಎನ್ನುತ್ತಾ ಸುಮಿ ಟಿ.ವಿ ಆಫ್ ಮಾಡಿದಳು.

‘ಸಿ.ಡಿ ಬಾಧಿತರಿಗೆ ಶಾಂತಿಭಂಗ, ಮಾನಹಾನಿ, ವ್ಯವಹಾರ ಕಷ್ಟ, ಅಧಿಕಾರ ನಷ್ಟ, ಕುಟುಂಬ ಕಲಹ, ಸಿಟ್ಟು, ಸಂಕಟದಿಂದ ಆರೋಗ್ಯ ಹಾನಿಯೂ ಆಗಬಹುದು’ ಅಂದ ಶಂಕ್ರಿ.

‘ಹೌದು, ಮಾತು ಮನೆ ಕೆಡಿಸಿದಂತೆ ಸಿ.ಡಿ ಸಂಬಂಧ ಕೆಡಿಸಿಬಿಡುತ್ತದೆ. ಅಣ್ಣ ತಮ್ಮಂದಿರಂತೆ ಇದ್ದವರೂ ಸಿ.ಡಿ ಸಹವಾಸದಿಂದ ಶತ್ರುಗಳಾಗುತ್ತಾರಂತೆ. ಶತ್ರು ದಮನಕ್ಕೂ ಸಿ.ಡಿ ಹರಿತ ಅಸ್ತ್ರವಾಗುತ್ತದೆ. ಅಧಿಕಾರದ ಹಾದಿಗೆ ಮುಳ್ಳಾಗುವವರನ್ನು ಮಟ್ಟಹಾಕಲು, ಎದುರಾಳಿಗಳನ್ನು ಕಟ್ಟಿಹಾಕಿ ಅಡಿಯಾಳು ಮಾಡಿಕೊಳ್ಳಲು ಸಿ.ಡಿ ಸಮರ್ಥ ಸಾಧನ ಅಂತ ಸಿ.ಡಿ ಸಾಧಕರು ಹೇಳುತಾರೆ’.

‘ಅಪಾಯಕಾರಿ ಸಿ.ಡಿಯೊಂದು ಸರ್ಕಾರವನ್ನೂ ಬೀಳಿಸಬಲ್ಲದು, ಪ್ರಭಾವಿಗಳನ್ನೂ ಫಜೀತಿಗೊಳಿಸಬಲ್ಲದು. ಕೆಲ ನಾಯಕರ ಬಳಿ ಹತ್ತಾರು ಚುನಾವಣೆಗಳಲ್ಲಿ ಸಿಡಿಸುವಷ್ಟು ಸಿ.ಡಿ ಸರಕು ಸ್ಟಾಕ್ ಇದೆಯಂತೆ. ಹೆಚ್ಚು ಸಿ.ಡಿ ಹೊಂದಿದವರು ಬಲಿಷ್ಠ ನಾಯಕರಾಗುತ್ತಾರಂತೆ!’

‘ಈ ಸಿ.ಡಿ ಸಂಕಟ ಶಮನಕ್ಕೆ ಮದ್ದಿಲ್ಲವೇನ್ರೀ?’

‘ಸಿ.ಡಿ ಬಾಧೆಗೆ ಸಿ.ಡಿಯೇ ಮದ್ದು. ಸಿ.ಡಿಯನ್ನು ಸಿ.ಡಿಯಿಂದಲೇ ಗೆಲ್ಲಬೇಕು. ಸಿ.ಡಿಯ ಸೇಡಿಗೆ ಸಿ.ಡಿಯೇ ಅಸ್ತ್ರ ಎಂಬುದು ಸಿ.ಡಿ ಸಿದ್ಧಾಂತಿಗಳ ಸಿದ್ಧಾಂತ. ಚುನಾವಣೆ ಹತ್ತಿರವಾದಂತೆ ಇನ್ನಷ್ಟು ಸಿ.ಡಿಗಳು ಸಿಡಿಯಬಹುದು. ಆ ಸಿಡಿತಕ್ಕೆ ಯಾರ್‍ಯಾರು ಸಿಡಿದುಹೋಗುವರೋ, ಇನ್ಯಾರು ಸಿಡಿದೇಳುವರೋ ಕಾದು ನೋಡಬೇಕು...’ ಅಂದ ಶಂಕ್ರಿ.

ಸಂಗತ

ಮೃದು ಮಾತು, ಪ್ರೀತಿಯೆಂಬ ಮಂತ್ರ

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಎರಡು ಪ್ರಕರಣಗಳು ಜನಸಮುದಾಯದಲ್ಲಿ ಮಾನವೀಯತೆಯ ಸೆಲೆ ಬತ್ತಿ ಹೋಗುತ್ತಿರುವುದರ ಸಂಕೇತವಾಗಿ ನಮಗೆ ಕಾಣುತ್ತಿವೆಯೇ?

• ಡಾ. ಎಚ್.ಬಿ.ಚಂದ್ರಶೇಖರ್

ಸ್ಕೂಟರ್‌ನ ಹಿಂಬದಿಯನ್ನು ಹಿರಿಯರೊಬ್ಬರು ಹಿಡಿದುಕೊಂಡಿದ್ದರೂ ವಾಹನವನ್ನು ನಿಲ್ಲಿಸದೆ ದಾರಿಯುದ್ದಕ್ಕೂ ಎಳೆದೊಯ್ದ ಯುವಕ ಹಾಗೂ ತನ್ನ ಕಾರಿನ ಬಾನೆಟ್ ಮೇಲೆ ಬಿದ್ದ ಯುವಕನನ್ನು ಲೆಕ್ಕಿಸದೆ ಎರಡು ಕಿಲೊಮೀಟರ್‌ಗೂ ಹೆಚ್ಚು ದೂರ ಕಾರನ್ನು ಚಲಾಯಿಸಿಕೊಂಡೇ ಹೋದ ಮಹಿಳೆ- ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಈ ಎರಡು ಪ್ರಕರಣಗಳು ಜನಸಮುದಾಯದಲ್ಲಿ ದಯೆ, ಕರುಣೆ ಹಾಗೂ ಮಾನವೀಯತೆಯ ಸೆಲೆಗಳು ಬತ್ತಿ ಹೋಗುತ್ತಿರುವುದರ ಸಂಕೇತವಾಗಿ ನಮಗೆ ಕಾಣುತ್ತಿವೆಯೇ ಎಂಬ ಅನುಮಾನ ಕಾಡುತ್ತದೆ.

ಪ್ರಾಣಿಗಳು ಆಹಾರದ ಕಾರಣವನ್ನು ಹೊರತುಪಡಿಸಿ ಸಾಮಾನ್ಯವಾಗಿ ಇತರ ಪ್ರಾಣಿಗಳ ಮೇಲೆ ಆಕ್ರಮಣ ಮಾಡುವುದಿಲ್ಲ. ಆದರೆ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಕೆಲವೊಮ್ಮೆ ಪ್ರಾಣಿಗಳಿಗಿಂತಲೂ ಹೆಚ್ಚು ಕ್ರೂರವಾಗಿ ನಡೆಸಿಕೊಳ್ಳುತ್ತಾನೆ. ಆಲೋಚನೆ, ಚಿಂತನೆ, ವಿಮರ್ಶಾತ್ಮಕ ಆಲೋಚನೆಯ ಸಾಮರ್ಥ್ಯಗಳನ್ನು ಹೊಂದಿದ ಮನುಷ್ಯನನ್ನು ಸರಿದಾರಿಯಲ್ಲಿ ನಡೆಯುವಂತೆ ಮಾಡಲು ಧರ್ಮವು ಹುಟ್ಟಿಕೊಂಡಿತು. ಎಲ್ಲ ಧರ್ಮಗಳು ಮಾನವೀಯತೆಯನ್ನೇ ಮೂಲಮಂತ್ರವನ್ನಾಗಿ ಪ್ರತಿಪಾದಿಸಿವೆ. ದಯೆ, ಕರುಣೆ, ಮೃದುಮಾತು, ಉತ್ತಮ ನಡವಳಿಕೆಗಳು ಮಾನವೀಯತೆಯ ಸಂಕೇತಗಳಾಗಿವೆ. ಆದರೆ ಮನುಷ್ಯ ಕೆಲವೊಮ್ಮೆ ಕ್ರೂರತನ, ಹಿಂಸೆ, ಕಟುಮಾತು, ಕೆಟ್ಟ ನಡವಳಿಕೆಗಳ ಮೂಲಕ ಸಹ ಮಾನವರನ್ನು ನೋವು, ಹಿಂಸೆಯಲ್ಲಿ ಕೆಡವುತ್ತಾನೆ.

ಕುಟುಂಬ, ಕಚೇರಿ, ಸಾರ್ವಜನಿಕ ಸ್ಥಳಗಳಲ್ಲಿ ಕಟುಮಾತು, ಸಲ್ಲದ ನಡವಳಿಕೆ, ನಿರ್ದಯಿ ವರ್ತನೆ, ಹಿಂಸಾತ್ಮಕ ಮನೋಭಾವದಂತಹ ವರ್ತನೆಗಳು ಹೆಚ್ಚುತ್ತಿರುವುದನ್ನು ಗಮನಿಸುತ್ತೇವೆ.

ಯಾವ ವ್ಯಕ್ತಿ ತನ್ನೊಳಗೆ ತಾನು ಸಂತಸ, ತಾಳ್ಮೆಯಿಂದ ಇರಲು ಸಾಧ್ಯವಿಲ್ಲವೋ ಅಂತಹ ವ್ಯಕ್ತಿ ಇತರರ ಜೊತೆಗೂ ತಾಳ್ಮೆ, ಸಹನೆಯಿಂದ ಇರಲಾರ. ಆಧುನಿಕ ಜಗತ್ತಿನ ಯಾಂತ್ರಿಕತೆ, ತಂತ್ರಜ್ಞಾನದ ಅತಿ ಬಳಕೆ, ವ್ಯಕ್ತಿ ಅನುಭವಿಸುವ ಒತ್ತಡ, ಆತಂಕ, ಖಿನ್ನತೆ, ಅನಾರೋಗ್ಯವು ಮನಸ್ಸಿನಲ್ಲಿ ಅಶಾಂತಿ, ಅತೃಪ್ತಿಯನ್ನು ಹುಟ್ಟುಹಾಕುತ್ತವೆ. ಇವು ಕಟುಮಾತು, ನಿರ್ದಯ ನಡವಳಿಕೆಯ ಮೂಲಕ ಪ್ರಕಟವಾಗುತ್ತವೆ.

ನಮ್ಮಲ್ಲಿ ಅನೇಕರು ಹೆಚ್ಚಿನ ವೇಳೆ ಪರಿಪೂರ್ಣತೆಗಾಗಿ ತುಡಿಯುತ್ತಾರೆ. ಎಲ್ಲವೂ ಪರಿಪೂರ್ಣವಾಗಿ ಇರಬೇಕು ಎಂದು ಬಯಸುತ್ತಾರೆ. ತನ್ನ ಸುತ್ತಲಿನ ವ್ಯಕ್ತಿಯಲ್ಲಿ ಅಥವಾ ವಾತಾವರಣದಲ್ಲಿ ಅರೆಕೊರೆ, ನ್ಯೂನತೆಗಳು ಕಂಡುಬಂದಲ್ಲಿ, ಇಂತಹ ವ್ಯಕ್ತಿಗಳು ವಿಪರೀತದ ವರ್ತನೆ ತೋರುತ್ತಾರೆ. ಇತರರ ಮೇಲೆ ಸಿಡಿಮಿಡಿ ಮಾಡುತ್ತಾ, ತಮ್ಮೊಳಗಿನ ಶಾಂತಿಯ ಕಡಲನ್ನು ಕದಡುವುದರ ಜೊತೆಗೆ ತಮ್ಮ ಸುತ್ತಲಿನ ವಾತಾವರಣದಲ್ಲಿನ ನೆಮ್ಮದಿಯನ್ನೂ ಹಾಳುಮಾಡಿ, ಕ್ಷೋಭೆಯನ್ನು ಹುಟ್ಟುಹಾಕುತ್ತಾರೆ. ತಮ್ಮ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ತಮ್ಮನ್ನು ತಾವೇ ಉದಾರವಾಗಿ ಕ್ಷಮಿಸಿಕೊಳ್ಳುತ್ತಾರೆ ಅಥವಾ ಅವರಲ್ಲಿನ ಕುಂದುಕೊರತೆಗಳು ಅವರ ಅರಿವಿಗೆ ಬರುವುದೇ ಇಲ್ಲ ಎನ್ನಬಹುದು.

ಒಬ್ಬ ವ್ಯಕ್ತಿ ಕೆಲಸಗಳಲ್ಲಿ ಅಚ್ಚುಕಟ್ಟುತನ ನಿರೀಕ್ಷಿಸುವುದು ತಪ್ಪಲ್ಲ. ಆದರೆ ಇತರರಲ್ಲಿ ಕಂಡುಬರುವ ನ್ಯೂನತೆ ಹಾಗೂ ಕುಂದುಕೊರತೆಗಳನ್ನು ಸರಿಪಡಿಸಲು ಹಿಂಸಾತ್ಮಕವಾದ ಮಾತು, ನಡವಳಿಕೆಗಳು ಎಂದಿಗೂ ಸಮರ್ಥನೀಯವಲ್ಲ.



ಬಸವಣ್ಣನವರು ‘ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ’ ಎಂದಿದ್ದಾರೆ. ಪ್ರತಿಯೊಬ್ಬರೂ ತಮ್ಮಷ್ಟಕ್ಕೇ ತಾವು ಉತ್ತಮ ಮಾತು, ನಡವಳಿಕೆ ತೋರುವುದರ ಮಹತ್ವವನ್ನು ವಚನದ ಈ ಸಾಲುಗಳು ನೆನಪಿಸುತ್ತವೆ. ಮನದೊಳಗಿನ ಅತೃಪ್ತಿ, ಅಸಮಾಧಾನವನ್ನು ವ್ಯಕ್ತಪಡಿಸುವಂತಹ ಅನಿವಾರ್ಯ ಸಂದರ್ಭಗಳು ಕೆಲವೊಮ್ಮೆ ಬರಬಹುದು. ಅಂತಹ ಸಂದರ್ಭಗಳಲ್ಲಿ ಸೌಜನ್ಯದ ಎಲ್ಲೆ ಮೀರದೆ ಅತೃಪ್ತಿ, ಅಸಮಾಧಾನವನ್ನು ಹೊರಹಾಕಬಹುದು.

ಬಸವಣ್ಣನವರ ವಚನದ ‘ಮೃದು ವಚನವೆ ಸಕಲ ಜಪಂಗಳಯ್ಯಾ, ಮೃದು ವಚನವೆ ಸಕಲ ತಪಂಗಳಯ್ಯಾ, ಸದುವಿನಯವೆ ಸದಾಶಿವನ ಒಲುಮೆಯಯ್ಯಾ’ ಎಂಬ ಸಾಲುಗಳು ನಮ್ಮೊಳಗನ್ನು ಸದಾ ಮೃದುಮಾತು, ವಿನಯಪೂರ್ವಕ ವರ್ತನೆಗಳಿಗೆ ಪ್ರೇರೇಪಿಸಬೇಕು.

ಸ್ವತಃ ತನ್ನಲ್ಲಿನ ಮತ್ತು ಇತರರಲ್ಲಿನ ಓರೆಕೋರೆ, ದೋಷ, ಮಿತಿಗಳನ್ನು ಒಂದಷ್ಟು ಉದಾರ ಗುಣ ತೋರಿ ಕ್ಷಮಿಸುವ ಮತ್ತು ಅವುಗಳನ್ನು ಪ್ರೀತಿಯಿಂದಲೇ ಒಪ್ಪಿಕೊಳ್ಳುವ ಮನೋಭಾವವನ್ನು ರೂಢಿಸಿಕೊಳ್ಳಬೇಕು. ಪರಿಚಿತರು ಹಾಗೂ ಅಪರಿಚಿತರನ್ನು ನೋಡಿ ಮುಗುಳ್ನಗುವುದು, ಹಿರಿಯರು, ರೋಗಪೀಡಿತರು, ಕುಟುಂಬದವರಿಗಾಗಿ ಸಮಯ ವಿನಿಯೋಗಿಸಿ, ಆತ್ಮೀಯ ಮಾತುಕತೆಯಾಡುವುದು, ಆಹಾರ, ವಸ್ತುಗಳನ್ನು ಹಂಚಿಕೊಳ್ಳುವುದು ಅಥವಾ ಅಗತ್ಯವಾದ ಸಹಾಯ ಮಾಡುವಂತಹ ಚಟುವಟಿಕೆಗಳು ಎಂತಹ ಕಠಿಣ ಮನಸ್ಸನ್ನಾದರೂ ಮೃದು ಮಾಡಬಲ್ಲವು.

ಮೊಬೈಲ್, ಟಿ.ವಿ, ಯಂತ್ರಗಳ ಒಡನಾಟವನ್ನು ಕಡಿಮೆ ಮಾಡಿ ಒಂದಷ್ಟು ಏಕಾಂತ ಸೃಷ್ಟಿಸಿಕೊಳ್ಳುವುದು, ಪ್ರಕೃತಿಯೊಂದಿಗಿನ ಒಡನಾಟ ಹೆಚ್ಚಿಸಿಕೊಳ್ಳುವುದು, ನಮ್ಮಲ್ಲಿರುವ ಎಲ್ಲ ಒಳ್ಳೆಯ ಅಂಶಗಳ ಬಗ್ಗೆ ಕೃತಜ್ಞತೆ ಹೊಂದುವುದು, ಇತರರಲ್ಲಿನ ಒಳ್ಳೆಯ ಗುಣಗಳನ್ನು ಮೆಚ್ಚುವುದು, ಮಾತು, ನಡಿಗೆ, ವಾಹನ ಚಾಲನೆಯನ್ನು ನಿಧಾನಗೊಳಿಸುವಂತಹ ಕೃತ್ಯಗಳು ನಮ್ಮೊಳಗಲ್ಲಿ ಶಾಂತಿ, ಸಹನೆಯನ್ನು ಸೃಷ್ಟಿಸಿ ಬಾಳನ್ನು ಬೆಳಗುತ್ತವೆ. ಈ ದಿಸೆಯಲ್ಲಿ ಮೃದುಮಾತು, ದಯೆ, ಕರುಣೆ, ಪ್ರೀತಿಯೇ ನಮ್ಮ ಜೀವನದ ಮಂತ್ರಗಳಾಗಬೇಕು.

ವಾಚಕರ ವಾಣಿ

ವಿಳಂಬಕ್ಕೆ ಮನ್ನಣೆ ನೀಡುವ ಹೊಸ ಆಯಾಮ?

ಸಂಚಾರ ನಿಯಮ ಉಲ್ಲಂಘಿಸಿ ದಂಡದ ಮೊತ್ತವನ್ನು ಕಟ್ಟದೆ ಬಾಕಿ ಉಳಿಸಿಕೊಂಡಿರುವ ವಾಹನ ಸವಾರರಿಗೆ ತೆಲಂಗಾಣ ಮಾದರಿಯಲ್ಲಿ ರಾಜ್ಯ ಸರ್ಕಾರ ಘೋಷಿಸಿರುವ ಭರ್ಜರಿ ರಿಯಾಯಿತಿಗೆ ಉತ್ತಮ ಸ್ಪಂದನೆ ದೊರಕಿರುವುದೇನೋ ಸರಿ. ಇದರಿಂದ, ಸರ್ಕಾರಕ್ಕೆ ಕೋಟ್ಯಂತರ ಮೊತ್ತದ ದಂಡ ವಸೂಲಿಯ ತಲೆನೋವು ಗಮನಾರ್ಹವಾಗಿ ಕಡಿಮೆಯಾಗಿದೆ. ರಿಯಾಯಿತಿ ನೀಡಿರುವುದನ್ನು ತಪ್ಪು ಎನ್ನಲಾಗದು. ಆದರೆ, ಈ ಕೊಡುಗೆಯು ಸಮಯದ ಪರಿಮಿತಿಯೊಳಗೆ ಪ್ರಾಮಾಣಿಕವಾಗಿ ದಂಡ ಕಟ್ಟುವವರು ಮುಂದಿನ ದಿನಗಳಲ್ಲಿ ಇಂತಹ ದಂಡಗಳನ್ನು ಪಾವತಿಸದಂತೆ ಅಥವಾ ವಿಳಂಬವಾಗಿ ಪಾವತಿಸುವಂತೆ ಪ್ರೇರೇಪಿಸುವುದರಲ್ಲಿ ಸಂಶಯವಿಲ್ಲ.

ನಾಲ್ಕು ಕಾಸು ರಿಯಾಯಿತಿ ದೊರಕಿದರೆ ಯಾರಿಗೆ ತಾನೇ ಬೇಡ? ಇದು ಒಂದು ರೀತಿಯಲ್ಲಿ, ಕೆಲವರು ಪ್ರಾಮಾಣಿಕವಾಗಿ ಬ್ಯಾಂಕ್ ಸಾಲ ಮರುಪಾವತಿಸುತ್ತಲೇ ಇರುವುದು ಮತ್ತು ಇನ್ನು ಕೆಲವರು ಸಾಲ ಮರುಪಾವತಿಸದೆ ಅದು ಸುಸ್ತಿಯಾಗುವಂತೆ ಮಾಡಿ, ಬ್ಯಾಂಕ್‌ನಿಂದ ಏಕಬಾರಿ ತೀರುವಳಿ ಅಥವಾ ಸಾಲ ಮನ್ನಾದಂತಹ ಕೊಡುಗೆ ಪಡೆದಂತೆ ಎನ್ನಬಹುದು. ಸರ್ಕಾರದ ಈ ಕ್ರಮದಲ್ಲಿ ಅರ್ಥ ಇರಬಹುದಾದರೂ ಇದು ಅಪ್ರಾಮಾಣಿಕತೆ ಮತ್ತು ವಿಳಂಬಕ್ಕೆ ಮನ್ನಣೆ ನೀಡುವ ಹೊಸ ಆಯಾಮದಂತೆ ಕಾಣುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

ಸರ್ಕಾರವನ್ನು ಬಯಲು ಮಾಡಬೇಕೆಂದರೆ...

ಅದಾನಿ ಸಮೂಹದ ಹಗರಣಗಳ ಕುರಿತ ತಕ್ಷಣದ ಚರ್ಚೆ ಹಾಗೂ ಜಂಟಿ ಸದನ ಸಮಿತಿ ಇಲ್ಲವೇ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ತನಿಖೆಗಾಗಿ ವಿರೋಧ ಪಕ್ಷಗಳು ಬಿಗಿ ಪಟ್ಟು ಹಿಡಿದಿರುವುದು ಮತ್ತು ಪ್ರತಿರೋಧ ತೋರುತ್ತಿರುವುದು ಸಂಸತ್ತಿನ ಎರಡು ದಿನಗಳ ಕಾರ್ಯಕಲಾಪವನ್ನು ಸಂಪೂರ್ಣವಾಗಿ ನುಂಗಿಹಾಕಿದೆ (ಪ್ರ.ವಾ., ಫೆ. 4). ಈ ಅವ್ಯವಹಾರದ ಆರೋಪ ಕುರಿತ ಪ್ರತಿಪಕ್ಷಗಳ ಏಕಕಂಠದ ವಿರೋಧ ಮೆಚ್ಚತಕ್ಕದ್ದೇ. ಆದರೆ ಇದು, ಸರ್ಕಾರದ ನುಣುಚಿಕೊಳ್ಳುವ ಪ್ರಯತ್ನಕ್ಕೆ ಹಾಸಿಗೆ ಹಾಸಿಕೊಟ್ಟಂತೆ ಆಗುವುದೆಂಬುದು ಗಮನಿಸತಕ್ಕ ಸಂಗತಿ. ಪೀಠಾಸೀನರು ವಿರೋಧ ಪಕ್ಷಗಳ ಬೇಡಿಕೆಯನ್ನು ಸ್ವೀಕರಿಸಿದರೆಂದೇ ಇಟ್ಟುಕೊಂಡರೂ, ವಿಷಯ ಎಷ್ಟೇ ಘನವಾದದ್ದಾದರೂ ಅಧಿಕಾರಾರೂಢ ಬಹುಸಂಖ್ಯಾತರ ‘ನ’ಕಾರದಲ್ಲಿ ಅದು ಕೊಚ್ಚಿ ಹೋಗುವುದಿಲ್ಲವೇ? ಅದರ ಬದಲು ವಿರೋಧ ಪಕ್ಷದ ಸದಸ್ಯರು ನಿಖರವಾದ ಮಾಹಿತಿ ಸಂಗ್ರಹಿಸಿ, ಜಾಣತನದ ವಾಗ್ಬಾಣ ಪ್ರಯೋಗದಿಂದ ಆಡಳಿತ ಪಕ್ಷವನ್ನು ಕಂಗೆಡಿಸಲು ಹೇರಳ ಅವಕಾಶ ಇರುತ್ತದೆ. ರಾಷ್ಟ್ರಪತಿಯವರ ವಂದನಾ ನಿರ್ಣಯದ ಮೇಲಿನ ಚರ್ಚೆಯೂ ಸೇರಿದಂತೆ ಯಾವುದೇ ಕಲಾಪವನ್ನಾದರೂ ಇದಕ್ಕೆ ಬಳಸಿಕೊಳ್ಳಬಹುದು.

ಮಾಹಿತಿ ಸತ್ಯವಾಗಿದ್ದರೆ, ಅದು ಆಳುವವರನ್ನು ಎಷ್ಟು ಉದ್ರೇಕಿಸಬಹುದೆಂದರೆ, ಅವರೇ ದೊಂಬಿಯೆಬ್ಬಿಸಿ ಕಲಾಪಕ್ಕೆ ಅಡ್ಡಿ ತರುವಂತೆ ಆಗಬಹುದು. ಆಗ ಸರ್ಕಾರ ಮಧ್ಯ ಪ್ರವೇಶಿಸಿ ತಿಪ್ಪೆ ಸಾರಿಸುವ ಮಾತಗಳನ್ನಾಡುವುದು ಅನಿವಾರ್ಯವಾಗುತ್ತದೆ. ಇಷ್ಟು ಸಾಕು ಸರ್ಕಾರವನ್ನು ಬಯಲು ಮಾಡಲು. ಕಲಾಪ ಭಂಗಕ್ಕಾಗಿ ವಿರೋಧ ಪಕ್ಷಗಳ ಮೇಲೆ ಗೂಬೆ ಕೂರಿಸುವ ಕಳಂಕವೂ ಇದರಿಂದ ತಪ್ಪಿಹೋಗುತ್ತದೆ!

ಆರ್.ಕೆ.ದಿವಾಕರ, ಬೆಂಗಳೂರು

ಬಣ– ದಿಬ್ಬಣ

ಉಂಟು ಎಲ್ಲ ಪಕ್ಷಗಳಲ್ಲೂ
ಅವರಿವರ ಒಂದೆರಡು ಬಣ,
ಚುನಾವಣೆಯ ಸಮರಕ್ಕೆ
ಶುರುವಾಗಿವೆ ರಾಜ್ಯದ
ಮೂಲೆ ಮೂಲೆಗಳಲ್ಲಿ
ಬಣ ಮುಚ್ಚಲು ದಿಬ್ಬಣ!

ಮಹಾಂತೇಶ ಮಾಗನೂರ
ಬೆಂಗಳೂರು

ನೈತಿಕ ಮೌಲ್ಯ ಆಚರಣೆಯಲ್ಲಿರಲಿ

ನೈತಿಕ ಮೌಲ್ಯಗಳನ್ನು ಒಳಗೊಂಡ ಶಿಕ್ಷಣಕ್ಕೆ ಸಂಬಂಧಿಸಿದ ಅರವಿಂದ ಚೊಕ್ಕಾಡಿ ಅವರ ಲೇಖನ (ಪ್ರ.ವಾ., ಫೆ. 3) ಬಹಳ ಪ್ರಸ್ತುತವಾಗಿದೆ. ನಾನು ಒಬ್ಬ ಶಿಕ್ಷಕನಾಗಿ, ಈ ವಿಚಾರವಾಗಿ ಹಲವಾರು ಬಾರಿ ಆತ್ಮವಿಮರ್ಶೆ ಮಾಡಿಕೊಂಡಿದ್ದೇನೆ. ಶಿಕ್ಷಕರಾಗಿ ನಾವು ಮಕ್ಕಳೊಂದಿಗೆ ನೈತಿಕ ಮೌಲ್ಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಹಂಚಿಕೊಂಡಾಗ, ಅಂತಹ ವಿಷಯಗಳು ಸಮಾಜದಲ್ಲಿ ಎಷ್ಟರ ಮಟ್ಟಿಗೆ ಆಚರಣೆಯಲ್ಲಿವೆ ಎಂದು ಮಕ್ಕಳು ವಿಚಾರ ಮಾಡುತ್ತಾರೆ. ಒಂದು ವೇಳೆ ಶಾಲೆಯಲ್ಲಿ ಬಿತ್ತಿದ ನೈತಿಕ ಮೌಲ್ಯಗಳು ತಾವು ವಾಸಿಸುವ ಪರಿಸರದಲ್ಲಿ ಇಲ್ಲವೆಂದಾದರೆ, ಶಾಲೆಯಲ್ಲಿನ ನೈತಿಕ ಮೌಲ್ಯಗಳ ಬೋಧನೆ ಅಪ್ರಸ್ತುತ ಎಂದು ಅವರಿಗೆ ಅನ್ನಿಸುತ್ತದೆ. ಆದರೂ ನಮ್ಮ ಪ್ರಯತ್ನವನ್ನು ನಾವು ಮಾಡುತ್ತಿರಬೇಕು. ಇಂದಿನ ಪ್ರಯತ್ನ ಮುಂದೊಂದು ದಿನ ಫಲ ಕೊಟ್ಟೇ ಕೊಡುತ್ತದೆ.

ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿಯು ಪಾಲಕರು, ಸಮುದಾಯ ಮತ್ತು ಶಾಲೆಗಳಿಂದ ಆಗಬೇಕಾದ ಅತಿ ಅವಶ್ಯಕವಾದ ಜವಾಬ್ದಾರಿಯಾಗಿದೆ.

ನಿಂಗಪ್ಪ ಮಾಳಶೆಟ್ಟಿ, ಕಾಜಿಬೀಳಗಿ, ಜಮಖಂಡಿ

‘ಕಾಶಿ ಯಾತ್ರೆ’ಯ ರಾಜಕಾರಣ ತರವೇ?

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷರೂ ಆದ ಕಲಬುರಗಿ ದಕ್ಷಿಣ ಕ್ಷೇತ್ರದ ಬಿಜೆಪಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರು ತಮ್ಮ ಕ್ಷೇತ್ರ ವ್ಯಾಪ್ತಿಯ 3,000ಕ್ಕೂ ಹೆಚ್ಚು ಜನರನ್ನು ಕಾಶಿ ಯಾತ್ರೆಗೆ ಕಳುಹಿಸಿಕೊಟ್ಟಿರುವುದು ವರದಿಯಾಗಿದೆ (ಪ್ರ.ವಾ., ಫೆ. 5). ಕಾಶಿ ಯಾತ್ರೆ ಮಾಡಿಸುವುದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕೆಲಸವೇ ಅಥವಾ ಇದು ಚುನಾವಣೆ ಹತ್ತಿರ ಬರುತ್ತಿರುವುದರಿಂದ ಮತಗಳ ಮೇಲೆ ಕಣ್ಣಿಟ್ಟ ದುರಾಲೋಚನೆಯೇ?

ರಸ್ತೆ, ನೀರು, ವಸತಿ, ಶಾಲೆ ಕಾಲೇಜು, ಆಸ್ಪತ್ರೆ, ಸಮುದಾಯ ಭವನ, ಆಟದ ಮೈದಾನದಂತಹ ಜನೋಪಕಾರಿ ಕೆಲಸಗಳ ಮೂಲಕ ಜನಸಾಮಾನ್ಯರಿಗೆ ನೆರವಾಗಬೇಕಾಗಿದ್ದವರು ಇಂತಹ ರಾಜಕಾರಣ ಮಾಡುವುದು ಯಾವ ನ್ಯಾಯ? ಕಾಶಿ ಯಾತ್ರೆ ಮಾಡಿಸಿ ಮತ ಕೇಳುವುದಕ್ಕೂ ಲಂಚ ಕೊಟ್ಟು ವೋಟು ಕೊಡಿ ಅನ್ನುವುದಕ್ಕೂ ಏನು ವ್ಯತ್ಯಾಸ? ಯಾವುದೇ ಪಕ್ಷದ ರಾಜಕಾರಣಿಗಳಾದರೂ ಸರಿ ಇಂತಹ ದಾರಿ ಹಿಡಿಯುವುದು ಪ್ರಜಾಪ್ರಭುತ್ವಕ್ಕೆ ಶೋಭೆ ತರುವ ಸಂಗತಿಯಲ್ಲ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಾಲ್ಯವಿವಾಹ ತಡೆ ಸರ್ಕಾರಕ್ಕೆ ಅಸಡ್ಡೆ, ಜನರಿಗೆ ಬೇಕಿಲ್ಲ



ಅಸ್ಸಾಂನಲ್ಲಿ ಬಾಲ್ಯವಿವಾಹ ನಡೆದ 4,000ಕ್ಕೂ ಹೆಚ್ಚು ಪ್ರಕರಣಗಳನ್ನು ಅಲ್ಲಿನ ಪೊಲೀಸ್ ಇಲಾಖೆ ಗುರುತಿಸಿದೆ. ಬಾಲ್ಯವಿವಾಹಕ್ಕೆ ಕಾರಣವಾದವರನ್ನು ಬಂಧಿಸಲಾಗುತ್ತಿದೆ. ಅಸ್ಸಾಂ ಸೇರಿ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಾಲ್ಯವಿವಾಹವು ದೊಡ್ಡ ಪ್ರಮಾಣದಲ್ಲಿ ನಡೆದಿದೆ ಎಂಬುದನ್ನು ಕೇಂದ್ರ ಸರ್ಕಾರದ ದಾಖಲೆಗಳೇ ಹೇಳುತ್ತವೆ. ಕರ್ನಾಟಕದ ಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ರಾಜ್ಯದಲ್ಲಿ 2019–21ರ ಅವಧಿಯಲ್ಲಿ 20–24 ವರ್ಷ ವಯಸ್ಸಿನ ವಿವಾಹಿತ ಮಹಿಳೆಯರಲ್ಲಿ ಶೇ 21ಕ್ಕೂ ಹೆಚ್ಚು ಮಂದಿ, 18 ವರ್ಷ ತುಂಬುವ ಮೊದಲೇ ತಮಗೆ ಮದುವೆಯಾಗಿತ್ತು ಎಂದು ಹೇಳಿಕೊಂಡಿದ್ದಾರೆ. ಈ ಬಾಲ್ಯವಿವಾಹಗಳಲ್ಲಿ ಬಹುತೇಕ ಯಾರ ವಿರುದ್ಧವೂ ಪ್ರಕರಣ ದಾಖಲಾಗಿಲ್ಲ. ಆದರೆ, ಅಸ್ಸಾಂನಲ್ಲಿ ಮುಸ್ಲಿಮರನ್ನು ಗುರಿಯಾಗಿಸಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂಬ ಆರೋಪ ಇದೆ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಬಾಲ್ಯವಿವಾಹವು ಅವ್ಯಾಹತವಾಗಿ ನಡೆಯುತ್ತಿವೆ ಎಂದು ಸರ್ಕಾರದ ದಾಖಲೆಗಳೇ ಹೇಳುತ್ತವೆ. ಅವುಗಳ ವಿರುದ್ಧ ಯಾವುದೇ ಪ್ರಕರಣ ದಾಖಲಾಗುತ್ತಿಲ್ಲ ಎಂಬುದರತ್ತಲೂ ಸರ್ಕಾರದ ದಾಖಲೆಗಳೇ ಬೊಟ್ಟುಮಾಡುತ್ತವೆ. ಆದರೆ, ಬಾಲ್ಯವಿವಾಹಗಳಿಗೆ ಸಂಬಂಧಿಸಿದಂತೆ ಸರ್ಕಾರದ ಬಳಿ ನಿಖರ ಮಾಹಿತಿಯೇ ಇಲ್ಲ.

ದೇಶದಲ್ಲಿನ ಪ್ರತಿ ಕುಟುಂಬದ ಸ್ಥಿತಿಗತಿ ಪರಿಶೀಲನೆಗೆ ಕೇಂದ್ರ ಆರೋಗ್ಯ ಸಚಿವಾಲಯವು ಪ್ರತಿ ಐದು ವರ್ಷಕ್ಕೊಮ್ಮೆ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ'ಯನ್ನು ನಡೆಸುತ್ತದೆ. ಕುಟುಂಬದ ಎಲ್ಲಾ ಸದಸ್ಯರ ಆರೋಗ್ಯ, ವೈವಾಹಿಕ ಸ್ಥಿತಿಗತಿ, ವಿವಾಹವಾದ ವಯಸ್ಸು ಮೊದಲಾದ ಮಾಹಿತಿಯನ್ನು ಸಂಗ್ರಹಿಸುತ್ತದೆ. ಇಂತಹ ಐದನೇ ಸುತ್ತಿನ ಸಮೀಕ್ಷೆಯನ್ನು (ಎನ್‌ಎಫ್‌ಎಚ್‌ಎಸ್) 2019–21ರ ಮಧ್ಯೆ ನಡೆಸಲಾಗಿತ್ತು. ಈ ಸಮೀಕ್ಷೆಯಲ್ಲಿ ಭಾಗಿಯಾದ ವಿವಾಹಿತ ಮಹಿಳೆಯರಲ್ಲಿ ಹಲವರು, ತಾವು ಬಾಲ್ಯವಿವಾಹವಾಗಿದ್ದೇವೆ ಎಂಬುದನ್ನು ಹೇಳಿಕೊಂಡಿದ್ದಾರೆ. 2022ರಲ್ಲಿ ಬಿಡುಗಡೆಯಾಗಿದ್ದ ಎನ್‌ಎಫ್‌ಎಚ್‌ಎಸ್–5ರ ವರದಿಯಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಮಾಹಿತಿಯನ್ನು ಉಲ್ಲೇಖಿಸಲಾಗಿದೆ.


2019–21ರ ಅವಧಿಯಲ್ಲಿ ಸಮೀಕ್ಷೆಗಾಗಿ, ಬಾಲ್ಯ ವಿವಾಹದ ಮಾಹಿತಿ ಕೇಳಲಾದ ಮಹಿಳೆಯರ ವಯಸ್ಸು 20–24 ವರ್ಷಗಳಷ್ಟು. ದೇಶದಾದ್ಯಂತ 20–24 ವರ್ಷ ವಯಸ್ಸಿನ ವಿವಾಹಿತ ಮಹಿಳೆಯರಲ್ಲಿ ಶೇ 23.3ರಷ್ಟು ಮಂದಿ 'ತಮಗೆ 18 ವರ್ಷ ತುಂಬುವ ಮೊದಲೇ ವಿವಾಹವಾಗಿತ್ತು' ಎಂದು ಹೇಳಿಕೊಂಡಿದ್ದಾರೆ ಎನ್ನುತ್ತದೆ ಎನ್‌ಎಫ್‌ಎಚ್‌ಎಸ್–5 ವರದಿ.

ಇದೇ ಸಮೀಕ್ಷೆ ವೇಳೆ ದೇಶದಾದ್ಯಂತ 15–19 ವರ್ಷ ವಯಸ್ಸಿನ ವಿವಾಹಿತ ಬಾಲಕಿ/ಯುವತಿಯರಲ್ಲಿ ಶೇ 6.9ರಷ್ಟು ಮಂದಿ ತಾವು ಗರ್ಭಿಣಿ ಅಥವಾ ತಾಯಿಯಾಗಿದ್ದೇವೆ ಎಂಬುದನ್ನು ಹೇಳಿಕೊಂಡಿದ್ದಾರೆ. ಈ ದತ್ತಾಂಶವೂ ಬಾಲ್ಯವಿವಾಹವನ್ನು ಸೂಚಿಸುತ್ತದೆ. ಈ ಮಾಹಿತಿಯನ್ನೂ ಒಟ್ಟುಗೂಡಿಸಿದರೆ, ಬಾಲ್ಯವಿವಾಹದ ಪ್ರಮಾಣ ಮತ್ತಷ್ಟು ಹೆಚ್ಚುತ್ತದೆ.

ಆದರೆ, 2021ರಲ್ಲಿ ದೇಶದಾದ್ಯಂತ ಬಾಲ್ಯವಿವಾಹ ನಿಷೇಧ ಕಾಯ್ದೆ ಅಡಿ ದಾಖಲಾದ ಪ್ರಕರಣಗಳ ಸಂಖ್ಯೆ 1,050 ಮಾತ್ರ. ಸರ್ಕಾರವೇ ಈ ಮಾಹಿತಿ ಸಂಗ್ರಹಿಸಿದ್ದರೂ, ಈ ದತ್ತಾಂಶವನ್ನು ಅಧ್ಯಯನಕ್ಕೆ ಮಾತ್ರ ಬಳಸಿಕೊಂಡಿದೆ.

ದೇಶದಲ್ಲಿ ಬಾಲ್ಯವಿವಾಹವಾದ ಮಹಿಳೆಯರ ಶೇಕಡಾವಾರು ಪ್ರಮಾಣವಷ್ಟೇ ಲಭ್ಯವಿದೆ. ಆದರೆ ಇತ್ತೀಚಿನ ಜನಸಂಖ್ಯಾ ಮಾಹಿತಿ ಲಭ್ಯವಿಲ್ಲದಿರುವ ಕಾರಣ, ಎಷ್ಟು ಮಹಿಳೆಯರು ಬಾಲ್ಯವಿವಾಹಕ್ಕೆ ಒಳಗಾಗಿರಬಹುದು ಎಂಬ ಸಂಖ್ಯೆಯನ್ನು ಅಂದಾಜು ಮಾಡಲು ಸಾಧ್ಯವಾಗಿಲ್ಲ. ಹೀಗಾಗಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಸರ್ಕಾರದ ಬಳಿ ನಿಖರವಾದ ಮಾಹಿತಿ ಇಲ್ಲ.

ಕರ್ನಾಟಕ: ಬಾಲ್ಯ ವಿವಾಹ–14 ಜಿಲ್ಲೆಗಳಲ್ಲಿ ಏರಿಕೆ




ಬಾಲ್ಯವಿವಾಹ ತಡೆಯುವ ದಿಸೆಯಲ್ಲಿ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳು ಏನೇನೂ ಸಾಲವು ಎಂಬುದನ್ನು ಎನ್‌ಎಫ್‌ಎಚ್‌ಎಸ್–5 ದತ್ತಾಂಶಗಳು ತಿಳಿಸುತ್ತವೆ. ರಾಜ್ಯದಲ್ಲಿ ಬಾಲ್ಯವಿವಾಹಕ್ಕೆ ಒಳಗಾದವರ ಪ್ರಮಾಣ ಶೇ 21.3ರಷ್ಟಿದೆ ಎಂದು ವರದಿ ಹೇಳುತ್ತದೆ. ಆದರೆ, 2015–16ನೇ ಸಾಲಿನ ಎನ್‌ಎಫ್‌ಎಚ್‌ಎಸ್–4 ವರದಿಯಲ್ಲಿ ಈ ಪ್ರಮಾಣ ಶೇ 21.4ರಷ್ಟಿತ್ತು. ಈ ಎರಡೂ ವರದಿಗಳನ್ನು ಗಮನಿಸಿದರೆ, ಬಾಲ್ಯವಿವಾಹಕ್ಕೆ ಒಳಗಾದವರ ಪ್ರಮಾಣದಲ್ಲಿ ಆಗಿರುವ ಇಳಿಕೆ ಶೇಕಡಾ 0.1ರಷ್ಟು ಮಾತ್ರ. ಇದು ತೀರಾ ನಗಣ್ಯ. 18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ವಿವಾಹ ತಡೆಯಲು ಸರ್ಕಾರವು ನಡೆಸಿರಬಹುದಾದ ಯತ್ನಗಳ ಯಶಸ್ಸಿನ ಮಟ್ಟವನ್ನು ಈ ವರದಿಗಳು ಬಿಂಬಿಸುತ್ತವೆ.

ರಾಜ್ಯದ 14 ಜಿಲ್ಲೆಗಳಲ್ಲಿ ಬಾಲ್ಯವಿವಾಹದ ಪ್ರಕರಣಗಳು ಹೆಚ್ಚಾಗಿ ನಡೆದಿವೆ ಎಂಬುದರ ಸೂಚನೆಗಳು ವರದಿಯಲ್ಲಿ ದೊರಕುತ್ತವೆ. ಈ ಜಿಲ್ಲೆಗಳಲ್ಲಿ ಬಾಲ್ಯವಿವಾಹಕ್ಕೆ ಒಳಗಾಗಿದ್ದೇವೆ ಎಂಬುದರ ಮಾಹಿತಿ ನೀಡಿದ 20ರಿಂದ 24 ವರ್ಷದೊಳಗಿನ ಮಹಿಳೆಯರ ಪ್ರಮಾಣವು ಕಳೆದ ಅವಧಿಗೆ ಹೋಲಿಸಿದರೆ ಅಧಿಕವಾಗಿದೆ. ಈ ಹದಿನಾಲ್ಕು ಜಿಲ್ಲೆಗಳಲ್ಲಿ ರಾಜಧಾನಿ ಬೆಂಗಳೂರು ನಗರ ಜಿಲ್ಲೆಯೂ ಇದೆ (ಶೇ 11.6ರಿಂದ ಶೇ 14.5ಕ್ಕೆ ಏರಿಕೆ). ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳೂ ಈ ಪಟ್ಟಿಯಲ್ಲಿದ್ದು, ಜನರು ಈ ಕಾನೂನನ್ನು ನಿರ್ಲಕ್ಷಿಸಿರುವುದು ಕಾಣುತ್ತದೆ.

ವಿಜಯಪುರ, ಬಾಗಲಕೋಟೆ, ಯಾದಗಿರಿ, ಕಲಬುರಗಿ, ಗದಗ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿ ಈ ವಯೋಮಾನದ ಶೇ 25ಕ್ಕಿಂತಲೂ ಹೆಚ್ಚಿನ ಹೆಣ್ಣುಮಕ್ಕಳು ಇದ್ದಾರೆ. ಆದರೆ, ತಮಗೆ 18 ವರ್ಷ ತುಂಬುವ ಮೊದಲೇ ಮದುವೆ ಆಗಿತ್ತು ಎಂಬ ಮಾಹಿತಿ ಕೊಟ್ಟ 20–24ರ ವಯಸ್ಸಿನ ಮಹಿಳೆಯರ ಪ್ರಮಾಣವು ರಾಮನಗರ, ಕೊಪ್ಪಳ, ಮಂಡ್ಯ ಜಿಲ್ಲೆಗಳಲ್ಲಿ ಗಮನಾರ್ಹವಾಗಿ ಇಳಿಕೆಯಾಗಿದೆ. ಈ ವರ್ಗದ ಹೆಣ್ಣುಮಕ್ಕಳು ಉಡುಪಿ (ಶೇ 4.4) ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ (ಶೇ 4.9) ರಾಜ್ಯದಲ್ಲೇ ಅತಿಕಡಿಮೆ ಪ್ರಮಾಣದಲ್ಲಿದ್ದಾರೆ. ಕೊಪ್ಪಳ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಾಮರಾಜನಗರ, ರಾಯಚೂರು ಜಿಲ್ಲೆಗಳಲ್ಲೂ ಇಳಿಮುಖ ಪ್ರವೃತ್ತಿ ಕಂಡುಬಂದಿದೆ.

ಬಹುತೇಕ ರಾಜ್ಯಗಳಲ್ಲಿ ಬಾಲ್ಯವಿವಾಹಕ್ಕಿಲ್ಲ ಕಡಿವಾಣ...

- ದೇಶದಾದ್ಯಂತ ಬಾಲ್ಯವಿವಾಹ ಪ್ರವೃತ್ತಿ ಏಕರೂಪದಲ್ಲಿ ಇಲ್ಲ. ಬಾಲ್ಯವಿವಾಹದ ಪ್ರಮಾಣ ಅತ್ಯಂತ ಕಡಿಮೆ ಇರುವುದು ಲಡಾಖ್‌ನಲ್ಲಿ. ಬಾಲ್ಯವಿವಾಹದ ಪ್ರಮಾಣ ಅತಿಹೆಚ್ಚು ಇರುವುದು ಪಶ್ಚಿಮ ಬಂಗಾಳದಲ್ಲಿ. ಉತ್ತರದ ಜಮ್ಮು–ಕಾಶ್ಮೀರ, ಲಡಾಖ್, ಪಂಜಾಬ್, ಉತ್ತರಾಖಂಡದಲ್ಲಿ ಬಾಲ್ಯವಿವಾಹದ ಪ್ರಮಾಣ ಕಡಿಮೆ ಇದೆ
- ಈಶಾನ್ಯ ಭಾರತದ ಕೆಲವು ರಾಜ್ಯಗಳಲ್ಲಿ ಬಾಲ್ಯವಿವಾಹದ ಪ್ರಮಾಣ ಹೆಚ್ಚು ಇದೆ, ಕೆಲವು ರಾಜ್ಯಗಳಲ್ಲಿ ಕಡಿಮೆ
- ಬಾಲ್ಯವಿವಾಹದ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮದ ಕಾರಣ ಈಗ ಸುದ್ದಿಯಲ್ಲಿರುವ ಅಸ್ಸಾಂನಲ್ಲಿ ಬಾಲ್ಯವಿವಾಹದ ಪ್ರಮಾಣ ಶೇ 31.8ರಷ್ಟಿದೆ. 2014–15ರ ವೇಳೆಯಲ್ಲಿ ರಾಜ್ಯದಲ್ಲಿ ಬಾಲ್ಯವಿವಾಹದ ಪ್ರಮಾಣ ಶೇ 30.8ರಷ್ಟಿತ್ತು. ನಂತರದ ಐದು ವರ್ಷಗಳ ಅವಧಿಯಲ್ಲಿ ಬಾಲ್ಯವಿವಾಹದ ಪ್ರಮಾಣ ಏರಿಕೆಯಾಗಿದೆ
- ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಾಲ್ಯವಿವಾಹದ ಪ್ರಮಾಣ ದೊಡ್ಡಮಟ್ಟದಲ್ಲಿಯೇ ಇದೆ. ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದಲ್ಲಿ ಬಾಲ್ಯವಿವಾಹದ ಪ್ರಮಾಣ ಶೇ 20ಕ್ಕಿಂತಲೂ ಹೆಚ್ಚು ಇದೆ. ಈ ರಾಜ್ಯಗಳಿಗೆ ಹೋಲಿಸಿದರೆ ಕೇರಳ ಮತ್ತು ತಮಿಳುನಾಡಿನಲ್ಲಿ ಬಾಲ್ಯವಿವಾಹದ ಪ್ರಮಾಣ ಕಡಿಮೆ ಇದೆ
- ಪಶ್ಚಿಮದ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ಥಾನದಲ್ಲೂ ಬಾಲ್ಯವಿವಾಹದ ಪ್ರಮಾಣ ಶೇ 20ಕ್ಕಿಂತ ಹೆಚ್ಚು. ಮಧ್ಯಪ್ರದೇಶದಲ್ಲೂ ಇದೇ ಸ್ಥಿತಿ ಇದೆ
- ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಾಲ್ಯವಿವಾಹದ ಪ್ರಮಾಣ ಅತಿಹೆಚ್ಚು ಇರುವುದು ಬಿಹಾರದಲ್ಲಿ (ಶೇ40.8)



ಪ್ರಜಾವಾಣಿ ಗ್ರಾಫಿಕ್ಸ್

ಅಸ್ಸಾಂ: ಮುಸ್ಲಿಮರು ಹೆಚ್ಚಿರುವ ಜಿಲ್ಲೆಗಳಲ್ಲಿ ಬಂಧನ ಹೆಚ್ಚು

ಅಸ್ಸಾಂನಲ್ಲಿ ಬಾಲ್ಯವಿವಾಹ ತಡೆ ಕಾಯ್ದೆ ಅಡಿ ಪುರುಷರನ್ನು ಬಂಧಿಸುವ ಕಾರ್ಯಾಚರಣೆ ಭಾನುವಾರವೂ ಮುಂದುವರಿದಿತ್ತು. ಬಾಲ್ಯವಿವಾಹ ತಡೆ ಕಾಯ್ದೆಯಡಿ ಬಂಧಿಸಲಾದ ಪುರುಷರ ಸಂಖ್ಯೆ ಭಾನುವಾರದ ವೇಳೆಗೆ 2,278ರಷ್ಟಾಗಿತ್ತು. ಈ ಕಾಯ್ದೆ ಅಡಿ ಈವರೆಗೆ ಒಟ್ಟು 4,074 ಪ್ರಕರಣಗಳು ದಾಖಲಾಗಿವೆ. ಬಾಲ್ಯವಿವಾಹವನ್ನು ನಡೆಸಿಕೊಟ್ಟ ಖಾಜಿಗಳು, ಪುರೋಹಿತರ ಸಂಖ್ಯೆ 50 ದಾಟಿದೆ. ಮುಸ್ಲಿಮರು ಹೆಚ್ಚಿರುವ ಜಿಲ್ಲೆಗಳಲ್ಲೇ ಹೆಚ್ಚು ಜನರನ್ನು ಬಂಧಿಸಲಾಗಿದೆ ಎಂದು ಇಲ್ಲಿನ ಸಾಮಾಜಿಕ ಕಾರ್ಯಕರ್ತರು ಆರೋಪಿಸಿದ್ದಾರೆ. ಮುಸ್ಲಿಂ ಪ್ರಾಬಲ್ಯವಿರುವ ಧುಬ್ರಿ (374), ಗೋಲಪಾರಾ (157), ಬರ್ಪೇಟಾ (81), ಮೊರಿಗಾನ್‌ನಲ್ಲಿ (224) ಪ್ರಕರಣಗಳು ದಾಖಲಾಗಿವೆ.

ಬಾಲ್ಯವಿವಾಹ ತಡೆ ಕಾಯ್ದೆ ಅಡಿ ದಾಖಲಾಗುವ ಪ್ರಕರಣದಲ್ಲಿ ಜಾಮೀನು ನೀಡಲು ಅವಕಾಶವಿದೆ. ಆದರೆ, 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರನ್ನು ಮದುವೆಯಾದವರ ವಿರುದ್ಧ 'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ–ಪೋಕ್ಸೊ' ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಸೂಚನೆ ನೀಡಿದ್ದಾರೆ.

ಧುಬ್ರಿಯಲ್ಲಿ, ಈ ಪ್ರಕರಣದಲ್ಲಿ ಬಂಧನಕ್ಕೊಳಗಾದವರ ಪರವಾಗಿ ವಕಾಲತ್ತು ವಹಿಸಿರುವ ವಕೀಲ ಮಸೂದ್ ಝಮನ್ ಮುಖ್ಯಮಂತ್ರಿಯ ಈ ಸೂಚನೆಯನ್ನು ಪ್ರಶ್ನಿಸಿದ್ದಾರೆ. 'ಬಾಲ್ಯವಿವಾಹ ತಡೆಗೆ ಈಗಾಗಲೇ ಒಂದು ಕಾಯ್ದೆ ಇದೆ. ಹೀಗಿದ್ದೂ, ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಲು ಸರ್ಕಾರ ನಿರ್ಧರಿಸಿದ್ದೇಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ' ಎಂದು ಅವರು ಹೇಳಿದ್ದಾರೆ.

'ನಮ್ಮನ್ನು ನೋಡಿಕೊಳ್ಳುವವರು ಯಾರು?'- ಧುಬ್ರಿ ಜಿಲ್ಲೆಯ ಪೊಲೀಸ್ ಠಾಣೆ ಎದುರು ಗೋಳಿಡುತ್ತಿದ್ದ 17 ವರ್ಷದ ಸಾಜಿದಾ ಬೇಗಂ ಅವರ ಪ್ರಶ್ನೆ ಇದು. ಸಾಜಿದಾ ಅವರ ಪತಿಯನ್ನು ಪೊಲೀಸರು ಬಾಲ್ಯವಿವಾಹ ತಡೆ ಕಾಯ್ದೆ ಅಡಿ ಬಂಧಿಸಿದ್ದಾರೆ. ಕಳೆದ ತಿಂಗಳಷ್ಟೇ ತಮ್ಮ ಮೊದಲ ಮಗುವಿಗೆ ಜನ್ಮ ನೀಡಿದ ಸಾಜಿದಾ, 'ನನ್ನ ಗಂಡನನ್ನು ಬಿಡಿ. ಇಲ್ಲವೇ ನನ್ನನ್ನೂ ಜೈಲಿಗೆ ಹಾಕಿ' ಎಂದು ಗೋಳಿಡುತ್ತಿದ್ದಾರೆ. ರಾಜ್ಯದ ಇತರ ಜಿಲ್ಲೆಗಳ ಪೊಲೀಸ್ ಠಾಣೆಗಳ ಎದುರೂ ಇಂಥದ್ದೇ ದೃಶ್ಯಗಳು ಸಾಮಾನ್ಯ ಎಂಬಂತಾಗಿದ್ದವು.

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ–5, ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪರಾಧ–2021' ವರದಿ, ಪಿಟಿಐ

ಸಿನಿ ಬಿಟ್ಸ್

ಬಂದಿದ್ದು 'ಕಾಂತಾರ–2' ಬರಲಿದೆ 'ಕಾಂತಾರ–1'

ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಕಾಂತಾರ' ಸಿನಿಮಾದ ಮುಂದಿನ ಭಾಗದ ಕಥೆ ಏನು ಎನ್ನುವ ಕುತೂಹಲಕ್ಕೆ ಸ್ವತಃ ಅವರೇ ಉತ್ತರಿಸಿದ್ದಾರೆ.

ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ 'ಕಾಂತಾರ' ನೂರು ದಿನಗಳನ್ನು ಪೂರೈಸಿದೆ. ಇದರ ಬೆನ್ನಲ್ಲೇ ಚಿತ್ರತಂಡವು, ಭಾನುವಾರ(ಫೆ.5) ಅದ್ದೂರಿಯಾಗಿ ಶತದಿನೋತ್ಸವವನ್ನು ಆಚರಿಸಿದೆ. ಇದೇ ಸಂದರ್ಭದಲ್ಲಿ ಚಿತ್ರದ ಮುಂದಿನ ಭಾಗದ ಬಗ್ಗೆ ರಿಷಬ್ ಮಾಹಿತಿ ಹಂಚಿಕೊಂಡಿದ್ದಾರೆ.

ಚಿತ್ರತಂಡದಲ್ಲಿ ಕಾರ್ಯನಿರ್ವಹಿಸಿದರನ್ನು, ಚಿತ್ರಮಂದಿರಗಳ ಮಾಲೀಕರು, ವಿತರಕರನ್ನು ಸ್ವತಃ ರಿಷಬ್ ಶೆಟ್ಟಿ ಹಾಗೂ ಹೊಂಬಾಳೆ ಫಿಲ್ಮ್ಸ್‌ನ ಮುಖ್ಯಸ್ಥ ವಿಜಯ್ ಕಿರಗಂದೂರು ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಬಳಿಕ ಮಾತನಾಡಿ, 'ನೀವು ನೋಡಿದ್ದು 'ಕಾಂತಾರ' ಪಾರ್ಟ್ 2. 'ಕಾಂತಾರ' ಪಾರ್ಟ್ 1 ಬರಬೇಕಾಗಿದೆ. ಅದನ್ನು ಶೀಘ್ರದಲ್ಲೇ ನೀವು ನೋಡಲಿದ್ದೀರಿ' ಎಂದಿದ್ದಾರೆ ರಿಷಬ್. ಈ ಮೂಲಕ 'ಕಾಂತಾರ'ದ ಪ್ರೀಕ್ವೆಲ್(ಹಿಂದಿನ ಕಥೆ) ಬರುವುದು ಅಧಿಕೃತವಾಗಿದೆ.

'ಒಟಿಟಿಯಲ್ಲಿ ರಿಲೀಸ್ ಆದರೂ, ಚಿತ್ರಮಂದಿರಗಳಲ್ಲಿ 'ಕಾಂತಾರ' ಸಿನಿಮಾ ಪ್ರದರ್ಶನ ಮುಂದುವರಿದಿದೆ. ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರಾದೇಶಿಕ ಸಿನಿಮಾವೊಂದು ಬಿಡುಗಡೆಯಾಗಿ, ತನ್ನಷ್ಟಕ್ಕೇ ಪ್ಯಾನ್ ಇಂಡಿಯಾ ಸ್ವರೂಪ ಪಡೆದಿತ್ತು. ನೆಟ್‌ಫ್ಲಿಕ್ಸ್‌ನಲ್ಲೂ 'ಕಾಂತಾರ' ಸಿನಿಮಾ ಇಂಗ್ಲಿಷ್‌ಗೆ ಡಬ್ ಮಾಡಿ ಬಿಡುಗಡೆ ಮಾಡಲು ಪ್ರಯತ್ನ ನಡೆಯುತ್ತಿದೆ' ಎಂದರು ರಿಷಬ್.

ಮಾಹಿತಿಯಂತೆ ರಿಷಬ್ ಸದ್ಯ ಪ್ರೀಕ್ವೆಲ್‌ನ ಸ್ಕ್ರಿಪ್ಟ್ ಕಾರ್ಯಗಳನ್ನು ಆರಂಭಿಸಿದ್ದು, ಜೂನ್ ವೇಳೆಗೆ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ. 2024ರ ಮಧ್ಯಭಾಗದಲ್ಲಿ ಸಿನಿಮಾ ಬಿಡುಗಡೆಗೆ ಹೊಂಬಾಳೆ ಫಿಲ್ಮ್ಸ್ ಯೋಚಿಸಿದೆ.



ಭರ್ಜರಿಯಾಗಿದೆ 'ಹೊಯ್ಸಳ'ನ ಎಂಟ್ರಿ!




ನಟ ಧನಂಜಯ ನಟನೆಯ 25ನೇ ಸಿನಿಮಾ, ವಿಜಯ್ ಎನ್. ನಿರ್ದೇಶಿಸಿರುವ 'ಹೊಯ್ಸಳ'ದ ಟೀಸರ್ ಬಿಡುಗಡೆಯಾಗಿದೆ. ಪೊಲೀಸ್ ಅಧಿಕಾರಿಯಾಗಿ ಇಲ್ಲಿ ಧನಂಜಯ್ ಮಿಂಚಿದ್ದಾರೆ.

ಧನಂಜಯ ಅವರು 'ಗುರುದೇವ್ ಹೊಯ್ಸಳ' ಎಂಬ ಪಾತ್ರದಲ್ಲಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಒಳ್ಳೆಯವನಾ ಕೆಟ್ಟವನಾ ಜಡ್ಜ್‌ಮೆಂಟ್‌ಗೇ ಸಿಗವಲ್ದು ಆದರ ಮಂದಿಗೆ ಭಾಳ ಫೇವರೇಟ್ ಅದನಾ' ಎನ್ನುವ ಡೈಲಾಗ್ ಪಾತ್ರದ ವಿವರಣೆಯನ್ನು ನೀಡಿದೆ. ಕೆ.ಆರ್.ಜಿ ಸ್ಟುಡಿಯೊಸ್‌ನಡಿ ನಿರ್ಮಾಣವಾಗಿರುವ ಈ ಚಿತ್ರದ ಟೀಸರ್ ಅನ್ನು ಈಗಾಗಲೇ ಸಿನಿಮಾಗಳಲ್ಲಿ ಖಡಕ್ ಪೊಲೀಸ್ ಅಧಿಕಾರಿಗಳಾಗಿ ನಟಿಸಿದ ನಟರಾದ 'ಕಿಚ್ಚ' ಸುದೀಪ್, ಮಲಯಾಳಂನ ಪೃಥ್ವಿರಾಜ್ ಹಾಗೂ ತಮಿಳಿನ ಕಾರ್ತಿ ಬಿಡುಗಡೆ ಮಾಡಿದರು. ಸಿನಿಮಾ ಮಾ.30ರಂದು ಬಿಡುಗಡೆಯಾಗಲಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮನವೆಂಬ ಕುದುರೆ

ಪೌರುಷಾಶ್ವಕ್ಕಾಶೆ ಛಾಟಿ, ಭಯ ಕಡಿವಾಣ |
ಹಾರಾಟವದರದಾ ವೇಧೆಗಳ ನಡುವೆ ||
ಧೀರನೇರಿರೆ, ಹೊಡೆತ ಕಡಿತವಿಲ್ಲದೆ ಗುರಿಗೆ |
ಸಾರುವುದು ನೈಜದಿಂ – ಮಂಕುತಿಮ್ಮ || 815 ||

ಪದ-ಅರ್ಥ: ಪೌರುಷಾಶ್ವಕ್ಕಾಶೆ = ಪೌರುಷ + ಅಶ್ವಕ್ಕೆ + ಆಶೆ(ಆಸೆ), ಛಾಟಿ = ಚಾವಟಿ, ಹಾರಾಟವದರದಾ = ಹಾರಾಟ + ಅದರದು + ಆ, ವೇಧೆಗಳ = ನೋವುಗಳ, ಧೀರನೇರಿರೆ = ಧೀರನು + ಏರಿರೆ, ಸಾರುವುದು = ನಡೆಯುವುದು, ನೈಜದಿಂ = ಸಹಜವಾಗಿ

ವಾಚ್ಯಾರ್ಥ: ಪೌರುಷವೆಂಬ ಕುದುರೆಗೆ ಆಸೆಯೇ ಚಾವಟಿ ಮತ್ತು ಭಯವೇ ಕಡಿವಾಣ. ನೋವು, ಕಷ್ಟಗಳ ನಡುವೆಯೇ ಅದರ ಹಾರಾಟ. ಧೀರನಾದವನು ಆ ಕುದುರೆಯನ್ನೇರಿದರೆ ಚಾವಟಿಯ ಹೊಡೆತ, ಕಡಿವಾಣದ ಬಿಗಿ ಇಲ್ಲದೆಯೇ ಅದು ಸಹಜವಾಗಿ ಸಾಗುತ್ತದೆ

ವಿವರಣೆ: ಈ ಕಗ್ಗದಲ್ಲಿ ಮತ್ತೊಂದು ಸುಂದರವಾದ ಆದರೆ ಮಾರ್ಮಿಕವಾದ ಚಿತ್ರಣವಿದೆ. ಅಲ್ಲೊಂದು ಶಕ್ತಿಶಾಲಿಯಾದ ಕುದುರೆ ಇದೆ. ಅದು ಬಿಟ್ಟರೆ ಹಾರಿ ಹಾರಿ ಹೋಗುತ್ತದೆ. ಅದನ್ನು ಚಾಟಿಯಿಂದ ಹೊಡೆದರೆ ಮತ್ತಷ್ಟು ವೇಗವಾಗಿ, ಚಿಮ್ಮಿ ಓಡುತ್ತದೆ. ಓಡಲು ಚಾವಟಿ ಪ್ರೇರಣೆ. ಹೆಚ್ಚು ವೇಗವಾಗಿ ಓಡಿದರೆ ಸವಾರ ಕಡಿವಾಣವನ್ನು ಹಾಕುತ್ತಾನೆ. ಆಗ ಬಾಯಿಗೆ ಹಾಕಿದ ಲೋಹದ ಪಟ್ಟಿ ಹಿಂದೆ ಎಳೆಯುತ್ತದೆ. ಬಾಯಿಗೆ ವಿಪರೀತ ನೋವಾಗಿ, ಕುದುರೆ ವೇಗವನ್ನು ಕಡಿಮೆಮಾಡುತ್ತದೆ. ಓಡಲು ಚಾಟಿ ಏಟು, ವೇಗ ಕಡಿಮೆ ಮಾಡಲು ಕಡಿವಾಣ. ಇವೆರಡೂ ನೋವನ್ನೇ ಕೊಡುವಂಥವುಗಳು. ಒಂದು ಬೆನ್ನಿಗೆ ಮತ್ತೊಂದು ಬಾಯಿಗೆ.

ಈ ಕುದುರೆಯ ಸ್ಥಿತಿ ಮನುಷ್ಯರಿಗೆ ಸರಿಯಾಗಿ ಹೊಂದುತ್ತದೆ. ಮನುಷ್ಯ ಬದುಕಿರುವುದು ಈ ಮೆರಗಿನ ಜಗತ್ತಿನಲ್ಲಿ. ಇಲ್ಲಿ ಏನೇನೋ ಆಕರ್ಷಣೆಗಳು. ಅವು ಸಂಬಂಧಗಳಾಗಿರಬಹುದು, ಹಣ, ಅಧಿಕಾರ, ಜನಮನ್ನಣೆ ಅಥವಾ ವಸ್ತುಗಳಾಗಿರಬಹುದು. ಪ್ರತಿಯೊಂದೂ ಮನಸ್ಸನ್ನು ಸೆಳೆದು, ಅತ್ತ ಕಡೆಗೇ ಹೋಗುವಂತೆ ಪ್ರೇರೇಪಿಸುತ್ತವೆ. ಈ ಆಸೆಗಳೇ ಚಾವಟಿಯ ಏಟುಗಳು. ಒಂದಾದ ನಂತರ ಒಂದರಂತೆ ಬೀಳುತ್ತಲೇ ಇರುತ್ತವೆ. ದೊರಕದೆ ಹೋದಾಗನೋವನ್ನುಂಟು ಮಾಡುತ್ತವೆ. ಹೀಗೆ ಆಸೆಗಳ ಕಡೆಗೆ ಮುನ್ನುಗ್ಗುವಾಗ ಅಡೆತಡೆಗಳು ಬರುತ್ತವೆ. ಅವು ಹಣಕಾಸಿನ ಕೊರತೆ, ಜೊತೆಗಾರರ ಅಸಹಕಾರ, ಸ್ವಸಾಮರ್ಥ್ಯದಲ್ಲಿ ಅಪನಂಬಿಕೆ, ಬದಲಾದ ರಾಜಕೀಯ ವ್ಯವಸ್ಥೆ ಯಾವುದಾದರೂ ಆಗಬಹುದು. ಈ ಅಡೆತಡೆಗಳು ಕಡಿವಾಣಗಳಿದ್ದಂತೆ. ಮುನ್ನುಗ್ಗುವಾಗ ಹಿಡಿದಳೆದು ನಿಲ್ಲಿಸುತ್ತವೆ. ಆಗ ಮನಸ್ಸಿಗೆ ತುಂಬ ನೋವಾಗುತ್ತದೆ. ಹೀಗೆ ಮನಸ್ಸೆಂಬ ಕುದುರೆಯ ಹಾರಾಟವೆಲ್ಲ ಈ ನೋವುಗಳ ನಡುವೆಯೇ. ಆದರೆ ಸಮರ್ಥನಾದ, ಧೀರನಾದ ಸವಾರ ಕುದುರೆಯನ್ನೇರಿದರೆ ಅವನು ಅದನ್ನು ತನ್ನ ಹಿಡಿತಕ್ಕೆ ತಂದುಕೊಂಡು, ಅತಿಯಾಗಿ ಓಡದೆ, ತುಂಬ ನಿಧಾನವಾಗಿ ಸಾಗದೆ, ಸರಿಯಾಗಿ ಗುರಿಯೆಡೆಗೆ ನಡೆಯುವಂತೆ ನೋಡುತ್ತಾನೆ. ಅಂತೆಯೇ ಬುದ್ಧಿವಂತನಾದ ಮನುಷ್ಯ ಮನಸ್ಸನ್ನು ಅತಿಯಾಸೆಗೆ ಹೋಗದಂತೆ ನಿಗ್ರಹಿಸಿ, ಕಾರ್ಯದಲ್ಲಿ ನಿರಾಸೆಯಿಂದ ವಿಮುಖನಾಗದಂತೆ ಪ್ರಬೋಧಿಸಿ, ಬದುಕನ್ನು ಸರಾಗವಾಗಿ ನಡೆಸಿ ಬದುಕಿನ ಸಂತೋಷವನ್ನು ಆನಂದಿಸುತ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಫೆಬ್ರುವರಿ 6, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಪ್ರತಿಪದ್ ಗಂ. 26-19 ನಕ್ಷತ್ರ: ಆಶ್ಲೇಷ ಗಂ. 15-03 ಯೋಗ: ಸೌಭಾಗ್ಯ ಗಂ. 15-25, ಕರಣ: ಬಾಲವ ಗಂ. 13-10, ಮಕರ ಮಾಸದ 23 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 –09-00
ಸೂರ್ಯೋದಯ : 07-00 ಸೂರ್ಯಾಸ್ತ : 06-29
ಮುಸ್ಲಿಂ ದಿನಾಂಕ : 14 ರಜಬ್
ಅದೃಷ್ಟ ಸಂಖ್ಯೆ : 4, 6

ಮೇಷ: ಶೀಘ್ರಕೋಪಿಗಳಾಗುವ ನಿಮ್ಮ ವ್ಯಕ್ತಿತ್ವಕ್ಕೆ ಸ್ವಲ್ಪ ಮಟ್ಟಿನ ಬದಲಾವಣೆಯ ಗಾಳಿ ಬೀಸಲಿದೆ. ಮಾತಿನಲ್ಲಿ ಕಪಟತನ ಇಲ್ಲವಾದ್ದರಿಂದ ನಿಷ್ಠೂರವಾಗಬಹುದು. ಮಗಳ ಉನ್ನತ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಬರಲಿದೆ.

ವೃಷಭ: ಈ ದಿನ ನೀವು ಅರಿತುಕೊಳ್ಳುವ ಸತ್ಯ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಕಾಂಟ್ರಾಕ್ಟ್ ವ್ಯವಹಾರಸ್ಥರಿಗೆ ಸರ್ಕಾರದಿಂದ ಹೆಚ್ಚಿನ ಗುತ್ತಿಗೆ ಕೆಲಸಗಳ ಲಭ್ಯವಾಗುವುದು. ಅನ್ನದಾನ ಮಾಡುವುದರಿಂದ ಶುಭ.

ಮಿಥುನ: ಯೋಜನೆಗಳಲ್ಲಿನ ಜಟಿಲ ವಿಷಯಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮುಂದುವರೆದಲ್ಲಿ ಹೆಚ್ಚಿನ ಯಶಸ್ಸನ್ನು ಕಾಣುವಿರಿ. ಉತ್ತಮ ಕಡೆಯಿಂದ ವಿವಾಹ ಸಂಬಂಧ ಕೂಡಿ ಬರಲಿದೆ.

ಕರ್ಕಾಟಕ: ಜವಾಬ್ದಾರಿ ಕೆಲಸಗಳು ಒದಗಿ ಬಂದು ಅವುಗಳನ್ನು ಮುಗಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ದುಡಿಮೆ ಮಾಡುವುದು ಕಷ್ಟಕರ ಎಂದೆನಿಸಿದರೂ, ಮನಃಶಾಂತಿ ಇರಲಿದೆ.

ಸಿಂಹ: ರಾಜಕೀಯ ವಿಷಯಗಳ ಸಮಾಲೋಚನೆಗೆ ಉತ್ತಮ ಸಮಯ. ಹೆಚ್ಚುವರಿ ವರಮಾನದ ಮೂಲವನ್ನು ಹುಡುಕುವ ಪ್ರಯತ್ನ ಮಾಡಿರಿ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಶುಭ ದಿನ.

ಕನ್ಯಾ: ತಾಳ್ಮೆ ಈ ದಿನದ ಮೂಲ ಮಂತ್ರವಾಗಲಿದೆ. ಯಾವುದೇ ವಿಚಾರದಲ್ಲಾದರೂ ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯವಾಗಿ ಕಾಪಾಡಿಕೊಳ್ಳಿರಿ. ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಉಳಿಸಿಕೊಳ್ಳಿರಿ.

ತುಲಾ: ನಿಮ್ಮನ್ನು ಅಥವಾ ನಿಮ್ಮ ನಾಜೂಕತೆಯ ಕೆಲಸ ಕಂಡು ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಸ್ಪರ್ಧಾತ್ಮಕ ವಾತಾವರಣ ಎದುರಿಸಬೇಕಾಗುವುದು.

ವೃಶ್ಚಿಕ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಸಲ್ಲದು. ವೈಯಕ್ತಿಕ ಕಾರ್ಯದೊತ್ತಡದ ನಡುವೆ ಸಾಮಾಜಿಕ ಕೆಲಸ ಕಾರ್ಯಗಳನ್ನು ಮಾಡುವ ನಿಮಗೆ ರಾಜಕೀಯ ಸೇರಲು ಆಹ್ವಾನ ಬರಲಿದೆ.

ಧನು: ಬದುಕಿನ ಕವಲುದಾರಿಯಲ್ಲಿರುವ ಸರಿಯಾದ ಮಾರ್ಗದರ್ಶನ ದೊರೆಯಲಿದೆ. ಧರ್ಮದಲ್ಲಿ ಶ್ರದ್ಧೆ ಹೆಚ್ಚಲಿದೆ. ವಾಹನ ಚಾಲನೆಯ ಕಲಿಕೆಯ ಆಸಕ್ತಿಯನ್ನು ಹೊಂದಿದವರು ಆರಂಭಿಸಬಹುದು.

ಮಕರ: ಬಾಲ್ಯ ಜೀವನ, ನೀವು ನಡೆದು ಬಂದ ದಾರಿಯತ್ತ ಒಮ್ಮೆ ಕಣ್ಣು ಹಾಯಿಸುವುದು ಉತ್ತಮ. ಅನುಭವಿಗಳ ಸಲಹೆ ಪಡೆದು ಸರಿಯಾದ ಮಾರ್ಗದಲ್ಲಿ ಸಾಗಿರಿ. ಭೂಮಿ ಅಥವಾ ಪ್ಲಾಟ್ ಖರೀದಿಸುವ ಯೋಗವಿದೆ.

ಕುಂಭ: ರಾಜಕಾರಣಿಗಳಿಗೆ ಅಧಿಕಾರ ಸಿಗುವಂತಹ ಶುಭ ಸುದ್ದಿ ದೊರೆಯಲಿದೆ. ಸಾಧ್ಯತೆ ಅರಿತುಕೊಂಡು ವ್ಯವಹಾರದಲ್ಲಿ ಮುಂದುವರೆಯುವುದು ಉತ್ತಮ. ಪ್ರತಿಫಲವನ್ನು ಅಪೇಕ್ಷಿಸಿ ಕೆಲಸವನ್ನು ಮಾಡಬೇಡಿ.


ಮೀನ: ಮುಕ್ತಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸುವಿರಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಅಧಿಕವಾಗಿರಲಿದೆ. ಮಕ್ಕಳಿಗೆ ಖರ್ಚು ವೆಚ್ಚಗಳ ಬಗ್ಗೆ ನಿಗಾ ವಹಿಸುವಂತೆ ತಿಳಿ ಹೇಳಿ

ಪದಬಂಧ 5222

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಬಾಯಿ ತುಂಬುವಷ್ಟು ಆಹಾರ (3)
4.ಕೊನೆಗೆ ವೃಕ್ಷವಿದ್ದಾಗ ಆವರಿಸಿದ ಕ್ಷಾಮ (3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
6.ನಡುವೆ ಪತ್ರ ಬಂದದಕ್ಕೇ ಈ ತೊಂದರೆ (4)
7.ನಡುಗುವುದನ್ನ ನೋಡಿದಾಗ ಉಕ್ಕಿದ ಮಂದಹಾಸ (2)
9.ತರತಮ ಮಾಡಿದಾಗ ಆವರಿಸಿದ ಕತ್ತಲು (2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ (3)
16.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)

ಮೇಲಿಂದ ಕೆಳಕ್ಕೆ
1.ಗಾದೆಯಂತೆ ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ (5)
3.ಅನುಭೂತಿಗಾಗಿ ಧರಿಸಿರುವ ಭಸ್ಮ (3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ (4)
8.ಆಚಾರ್ಯನಿಂದ ಮಹತ್ತರವಾದುದು ಬಂದಿದೆಯಲ್ಲಾ! (4)
10.ಅಳಿಯನನ್ನು ಹೀಗೆನ್ನಿ (5)
11.ಮರ ಬಳ್ಳಿ ಇಲ್ಲಿ ಕಾಣುತ್ತಿವೆ (4)
12.ಇದು ಗುರುತು (3)



5221ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನಂದ 5.ನಗುಮೊಗ
6.ರಥೋತ್ಸವ 8.ಹಿಜರಿ
11.ರಿಕಾಪು 13.ದಿನಮಣಿ
17.ದನಗಾಹಿ 18.ತರಂಗ

ಮೇಲಿಂದ ಕೆಳಕ್ಕೆ:
1.ಆಚಾರ್ಯ 2.ದನಗಾಹಿ
3.ನಗರ 4.ಭೀಭತ್ಸ
7.ವರ್ಣನೆ 9.ರಿಪೇರಿ
10.ವರದಿ 12.ಪುರೋಹಿತ
14.ನಲ್ನುಡಿ 15.ಣಿದಸಂ
16.ಪರಾಗ

ಸುಡೊಕು 5608

			8		1	9		
		2					3	1
3		1	2		9		5	6
	1	7			8	3		
				2			8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5607 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ನೇಪಾಳ: ಬೆಂಬಲ ವಾಪಸ್‌ಗೆ ಆರ್‌ಎಸ್‌ಪಿ ನಿರ್ಧಾರ

ಕಠ್ಮಂಡು (ಪಿಟಿಐ): ನೇಪಾಳದ ಆಡಳಿತಾರೂಢ ಮೈತ್ರಿಕೂಟದಿಂದ ಹೊರಬರಲು ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ) ಭಾನುವಾರ ನಿರ್ಧರಿಸಿದೆ. ಆರ್‌ಎಸ್‌ಪಿ ಪಕ್ಷದ ಅಧ್ಯಕ್ಷ ರಾಬಿ ಲಾಮೀಛಾನೆ ಅವರಿಗೆ ಗೃಹ ಖಾತೆಯನ್ನು ಪುನಃ ನೀಡುವುದಕ್ಕೆ ಪ್ರಧಾನಿ ಪುಷ್ಪ ಕಮಲ್ ದಹಲ್ (ಪ್ರಚಂಡ) ಅವರು ನಿರಾಕರಿಸಿರುವುದಕ್ಕೆ ಪಕ್ಷ ಈ ನಿರ್ಧಾರ ಕೈಗೊಂಡಿದೆ.

ಆರ್‌ಎಸ್‌ಪಿಯ ಕೇಂದ್ರ ನಾಯಕರು ಹಾಗೂ ಶಾಸಕರ ಜಂಟಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಬಿಆರ್‌ಎಸ್ ಬೃಹತ್ ರ್ಯಾಲಿ • ಕಾಂಗ್ರೆಸ್, ಬಿಜೆಪಿ ವಿರುದ್ಧ ವಾಗ್ದಾಳಿ

ರೈತ ಸರ್ಕಾರ ಸ್ಥಾಪನೆ: ಕೆಸಿಆರ್ ಆಶಯ

ಪ್ರಜಾವಾಣಿ ವಾರ್ತೆ

ಮುಂಬೈ: 'ದೇಶದಲ್ಲಿನ ಪ್ರಸ್ತುತ ರೈತರ ದುಸ್ಥಿತಿಗೆ ಕಾಂಗ್ರೆಸ್, ಬಿಜೆಪಿಯೇ ಹೊಣೆ' ಎಂದು ವಾಗ್ದಾಳಿ ನಡೆಸಿರುವ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮುಖಂಡ, ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ಅವರು 'ಅಬ್ ಕೀ ಬಾರ್, ಕಿಸಾನ್ ಸರ್ಕಾರ್' ಘೋಷಣೆಯನ್ನು ಮೊಳಗಿಸಿದ್ದಾರೆ.

ರೈತರಿಗೂ ಈ ಘೋಷಣೆ ಕೂಗುವಂತೆ ಪ್ರೋತ್ಸಾಹಿಸಿದ ಅವರು, 'ದೇಶದ ಸ್ಥಿತಿಗತಿಯನ್ನು ಬದಲಿಸಲು ರೈತರು ಶಾಸಕರು, ಸಂಸದರು ಆಗಬೇಕು' ಎಂದು ಕರೆ ನೀಡಿದ್ದಾರೆ. ತೆಲಂಗಾಣದ ಹೊರಗಡೆ ಇದೇ ಮೊದಲ ಬಾರಿಗೆ ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಆಯೋಜಿಸಿದ್ದ ಬೃಹತ್ ರ್ಯಾಲಿಯನ್ನು ಉದ್ಘಾಟಿಸಿ ಮಾತನಾಡಿದರು.

ತೆಲಂಗಾಣ ರಾಷ್ಟ್ರ ಸಮಿತಿಯನ್ನು (ಟಿಆರ್‌ಎಸ್), ಬಿಆರ್‌ಎಸ್ ಎಂದು ಕಳೆದ ಡಿಸೆಂಬರ್‌ನಲ್ಲಿ ಮರುನಾಮಕರಣ ಮಾಡಿದ್ದು, ಪಕ್ಷ ಬಲಪಡಿಸಲು ಕೆಸಿಆರ್ ಅವರು ದೇಶವ್ಯಾಪಿ ಪ್ರವಾಸ ಕೈಗೊಂಡಿದ್ದಾರೆ.

'ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿದೆ. ಈ ಪೈಕಿ ಕಾಂಗ್ರೆಸ್ 54 ವರ್ಷ, ಬಿಜೆಪಿ 16 ವರ್ಷ ಆಡಳಿತ ನಡೆಸಿದೆ. ಉಳಿದ ಅವಧಿಯಲ್ಲಿ ಕೆಲವರು ಬಂದು, ಹೋಗಿದ್ದಾರೆ. ಆದರೆ, ದೇಶದಲ್ಲಿನ ರೈತರ ಈಗಿನ ದುಸ್ಥಿತಿಗೆ ಯಾರು ಹೊಣೆ. ಈ ಎರಡು ಪಕ್ಷಗಳೇ' ಎಂದು ಆರೋಪಿಸಿದರು.

'ರೈತರು ಒಗ್ಗೂಡುವುದಿಲ್ಲ ಎಂಬುದನ್ನು ಈ ಪಕ್ಷಗಳು ಅರ್ಥ ಮಾಡಿಕೊಂಡಿವೆ. ಇದರ ಲಾಭವನ್ನು ಪಡೆಯುತ್ತಿವೆ. ಚುನಾವಣೆಯ ಸಂದರ್ಭದಲ್ಲಿ ನಿಮ್ಮ ಬಲವನ್ನು ತೋರಿಸಿ. ಅಧಿಕಾರಕ್ಕೆ ಬನ್ನಿ. ಶಾಸಕರು, ಸಂಸದರು ಆಗಿ. ಜಿಲ್ಲಾ ಪರಿಷತ್‌ನಿಂದಲೇ ಆರಂಭಿಸಿ. ಪಕ್ಷದ ಬಾವುಟವನ್ನು ಹಿಡಿದು ರೈತರ ಸರ್ಕಾರ ಸ್ಥಾಪಿಸಿ' ಎಂದು ಕರೆ ನೀಡಿದರು.

ರೈತರು ಮಾತ್ರವೇ ದೇಶದ ಹಣೆಬರಹವನ್ನು ಬದಲಿಸುವುದು, ಅಭಿವೃದ್ಧಿಪಡಿಸುವುದು ಸಾಧ್ಯ. ತೆಲಂಗಾಣದಲ್ಲಿ ಜಾರಿಗೊಳಿಸಿರುವ ದಿನದ 24 ಗಂಟೆ ವಿದ್ಯುತ್ ಪೂರೈಕೆ ಮತ್ತು ರೈತ ವಿಮೆ ಯೋಜನೆಯನ್ನು ಅಧಿಕಾರಕ್ಕೆ ಬಂದಲ್ಲಿ ದೇಶದಾದ್ಯಂತ ಜಾರಿಗೊಳಿಸಲಾಗುವುದು ಎಂದರು.


ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಭಾನುವಾರ ನಡೆದ ಭಾರತ್ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಸಾರ್ವಜನಿಕ ಸಭೆಯಲ್ಲಿ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ


ಸುದ್ದಿ 2 ನಿಮಿಷ

ಭಾರತ ಜತೆಗೆ ರಕ್ಷಣಾ ಸಹಭಾಗಿತ್ವ ಮತ್ತಷ್ಟು ಗಾಢ: ರಿಷಿ ಸುನಕ್

ಲಂಡನ್ (ಪಿಟಿಐ): ಭಾರತದ ಜತೆಗಿನ ವ್ಯಾಪಾರ, ರಕ್ಷಣಾ ವಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಗಾಢಗೊಳಿಸಲು ಬ್ರಿಟನ್ ಸರ್ಕಾರದ ಸಂಪೂರ್ಣ ಬೆಂಬಲವಿದೆ ಎಂದು ಪ್ರಧಾನಿ ರಿಷಿ ಸುನಕ್ ಬಲವಾಗಿ ಪ್ರತಿಪಾದಿಸಿದ್ದಾರೆ.

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಬ್ರಿಟನ್ ಭದ್ರತಾ ಸಲಹೆಗಾರ ಸರ್ ಟಿಮ್ ಬಾರೊ ಅವರ ನಡುವೆ ಬ್ರಿಟನ್ ಸಂಸತ್ ಕಟ್ಟಡದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಪ್ರಧಾನಿ ರಿಷಿ ಸುನಕ್ ವಿಶೇಷ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ವಾಷಿಂಗ್ಟನ್‌ನಲ್ಲಿ ಅಮೆರಿಕದ ರಕ್ಷಣಾ ಸಲಹೆಗಾರ ಜೇಕ್ ಸುಲಿವಾನ್ ಜತೆಗಿನ ದ್ವಿಪಕ್ಷೀಯ ಮಾತುಕತೆ ಮುಗಿಸಿಕೊಂಡು ವಾಪಸಾಗುವಾಗ ಡೊಭಾಲ್ ಅವರು ಲಂಡನ್‌ನಲ್ಲೂ ಟಿಮ್ ಬಾರೊ ಜತೆಗೆ ದ್ವಿಪಕ್ಷೀಯ ಕಾರ್ಯತಂತ್ರದ ವಾರ್ಷಿಕ ಮಾತುಕತೆ ನಡೆಸಿದರು.



ಭದ್ರತಾ ಕಾರ್ಯತಂತ್ರದ ಸಹಭಾಗಿತ್ವದ ಕುರಿತ ರಾಷ್ಟ್ರೀಯ ಭದ್ರತಾ ಸಲಹೆಗಾರರ ಮಟ್ಟದ ದ್ವಿಪಕ್ಷೀಯ ಸಭೆಯಲ್ಲಿ ರಿಷಿ ಸುನಕ್ ಅವರು ವಿಶೇಷ ಅತಿಥಿಯಾಗಿ ಭಾಗವಹಿಸಿರುವುದನ್ನು ಉಲ್ಲೇಖಿಸಿ ಲಂಡನ್‌ನಲ್ಲಿನ ಭಾರತೀಯ ಹೈಕಮಿಷನ್ ಮತ್ತು ವಿದೇಶಾಂಗ ವ್ಯವಹಾರ ಸಚಿವಾಲಯ ಟ್ವೀಟ್ ಮಾಡಿದೆ.

ನೋಟು ರದ್ದತಿ: ತೀರ್ಪು ಮರುಪರಿಶೀಲನೆ ಕೋರಿ ಅರ್ಜಿ

ನವದೆಹಲಿ: ₹ 500 ಮತ್ತು ₹ 1,000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸುವ 2016ರಲ್ಲಿ ಕೇಂದ್ರ ಸರ್ಕಾರ ಕೈಗೊಂಡಿದ್ದ ನಿರ್ಧಾರವನ್ನು ಎತ್ತಿ ಹಿಡಿದಿರುವ ತೀರ್ಪನ್ನು ಮರುಪರಿಶೀಲಿಸಬೇಕೆಂದು ಕೋರಿ ಭಾನುವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ.

ಜ. 2ರಂದು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು 4–1ರ ಬಹುಮತದ ತೀರ್ಪು ನೀಡಿ, 'ಸರ್ಕಾರದ ನಿರ್ಧಾರವು ದೋಷಪೂರಿತವಾಗಿಲ್ಲ ಮತ್ತು ಅದು ಆತುರದಿಂದ ತೆಗೆದುಕೊಂಡ ನಿರ್ಧಾರವಲ್ಲ' ಎಂದಿತ್ತು. ನೋಟು ರದ್ದತಿ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ 58 ದೂರುದಾರರ ಪೈಕಿ ಒಬ್ಬರಾದ ವಕೀಲ ಎಂ.ಎಲ್. ಶರ್ಮಾ ಅವರು ಮರುಪರಿಶೀಲನೆ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಯಲ್ಲಮ್ಮನ ಗುಡ್ಡದಲ್ಲಿ ಭಕ್ತಸಾಗರ

ಸವದತ್ತಿ (ಬೆಳಗಾವಿ ಜಿಲ್ಲೆ): ಸಮೀಪದ ಯಲ್ಲಮ್ಮನಗುಡ್ಡದಲ್ಲಿ ಭಾನುವಾರ ಭರತ ಹುಣ್ಣಿಮೆ ಜಾತ್ರೆಗೆ ಜನಸಾಗರವೇ ಹರಿದುಬಂತು. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ ಭಕ್ತರು ಕಿಕ್ಕಿರಿದು ಸೇರಿದ್ದರು.

ರೇಣುಕಾದೇವಿ ಸನ್ನಿಧಿಯಲ್ಲಿ ಆಚರಿಸುವ ಎಲ್ಲ 12 ಹುಣ್ಣಿಮೆಗಳಲ್ಲೂ ಭರತ ಹುಣ್ಣಿಮೆ ಸಡಗರ ಅತ್ಯಂತ ದೊಡ್ಡದು. ದೇವಿಗೆ ಕುಂಕುಮ– ಭಂಡಾರ, ಹಸಿರುಬಳೆ, ಸೀರೆ–ಕಣ, ದೀಪದ ಎಣ್ಣೆ, ಕಾಯಿ–ಕರ್ಪೂರ ಅರ್ಪಿಸಿದರು. ಜೋಗತಿಯರು, ಜೋಗಪ್ಪಗಳು ದೇವಿ-ಮೂರ್ತಿಗಳನ್ನು ಹೊತ್ತು ಜೋಗಾಡಿದರು. ಯುವಜನರು ಭಂಡಾರವನ್ನು ಚೀಲಗಳಲ್ಲಿ ತುಂಬಿ ತಂದು ಎರಚಿದರು. ಇಡೀ ಗುಡ್ಡವು ಭಂಡಾರದಿಂದಾಗಿ ಹಳದಿಮಯವಾಯಿತು.

'ಉಧೋ ಉಧೋ ಉಧೋ ಯಲ್ಲಮ್ಮ ನಿನ್ನ ಹಾಲಖುದೋ, ಜಗದಂಬಾ ನಿನ್ನ ಹಾಲಖುಧೋ, ಜೋಗುಳಬಾವಿ ಸತ್ಯವ್ವ ನಿನ್ನ ಹಾಲ ಖುದೋ...' ಎಂಬ ಘೋಷಣೆಗಳು ಮೊಳಗಿದವು. ಜೋಗತಿಯರು ಚೌಡಕಿ ಬಾರಿಸುತ್ತ ಜೋಗತಿ ಪದಗಳನ್ನು ಹಾಡಿ ಭಕ್ತಿ ಮೆರೆದರು.

ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಬಹುಭಾಗದಿಂದಲೂ ಬಂಡಿ ಕಟ್ಟಿಕೊಂಡು ಜಾತ್ರೆಗೆ ಬರುವುದು ಅನಾದಿ ಕಾಲದಿಂದಲೂ ನಡೆದುಬಂದ ಸಂಪ್ರದಾಯ. ಈ ಬಾರಿ ಕೂಡ ಸಾವಿರಾರು ಚಕ್ಕಡಿಗಳು ಬಂದವು.

ಕರ್ನಾಟಕ ಮಾತ್ರವಲ್ಲದೆ; ಮಹಾರಾಷ್ಟ್ರ, ಗೋವಾ, ತಮಿಳುನಾಡು, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಸಮಾವೇಶಗೊಂಡಿದ್ದು, 4 ಕಿ.ಮೀ.ವರೆಗೂ ವಾಹನಗಳು ಕಿಕ್ಕಿರಿದು ನಿಂತಿದ್ದವು.

'ಸುಪ್ರೀಂ': ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 32ಕ್ಕೆ ಏರಿಕೆ

ಐವರಿಂದ ಪ್ರಮಾಣ ಇಂದು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಸೋಮವಾರ ಐವರು ಪ್ರಮಾಣವಚನ ಸ್ವೀಕರಿಸುವರು. ಸುಪ್ರೀಂ ಕೋರ್ಟ್‌ನ ಮಂಜೂರಾಗಿರುವ ನ್ಯಾಯಮೂರ್ತಿಗಳ ಸ್ಥಾನ 34 ಆಗಿದ್ದು, ಐವರಿಂದ ಪ್ರಮಾಣವಚನ ಸ್ವೀಕರಿಸುವುದರೊಂದಿಗೆ ನ್ಯಾಯಮೂರ್ತಿಗಳ ಒಟ್ಟು ಸಂಖ್ಯೆ 32ಕ್ಕೆ ಏರಲಿದೆ.

ಪ್ರಸ್ತುತ ಕ್ರಮವಾಗಿ ರಾಜಸ್ಥಾನ, ಪಟ್ನಾ, ಮಣಿಪುರ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಾಗಿರುವ ಪಂಕಜ್ ಮಿಥಾಲ್, ಸಂಜಯ್ ಕರೋಲ್, ಪಿ.ವಿ.ಸಂಜಯ್ ಕುಮಾರ್ ಹಾಗೂ ಹೈಕೋರ್ಟ್‌ನ ಇಬ್ಬರು ಹಿರಿಯ ನ್ಯಾಯಮೂರ್ತಿಗಳು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.


ಅಲಹಾಬಾದ್ ಹೈಕೋರ್ಟ್ ಕೇಡರ್‌ನ ನ್ಯಾಯಮೂರ್ತಿ ಮಿಥಾಲ್ ಈ ಪೈಕಿ ಹಿರಿಯರು. ಇವರು ಕಳೆದ ವರ್ಷ ಅಕ್ಟೋಬರ್ 14ರಿಂದಲೂ ರಾಜಸ್ಥಾನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಪಟ್ನಾ ಹೈಕೋರ್ಟ್‌ನ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ, ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಮನೋಜ್ ಮಿಶ್ರಾ ಸೋಮವಾರ ಪ್ರತಿಜ್ಞಾವಿಧಿ ಸ್ವೀಕರಿಸುವ ಇನ್ನಿಬ್ಬರು ನ್ಯಾಯಮೂರ್ತಿಗಳು.

ಕೊಲಿಜಿಯಂ ಶಿಫಾರಸು: ಈ ಐವರು ನ್ಯಾಯಮೂರ್ತಿಗಳ ಹೆಸರನ್ನು ಸುಪ್ರೀಂ ಕೋರ್ಟ್‌ನ ಆರು ಸದಸ್ಯರ ಕೊಲಿಜಿಯಂ ಕಳೆದ ವರ್ಷ ಡಿಸೆಂಬರ್ 13ರಂದು ಶಿಫಾರಸು ಮಾಡಿತ್ತು.

ಜನವರಿ 31ರಂದು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಇನ್ನಿಬ್ಬರು ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಅರವಿಂದ ಕುಮಾರ್ ಅವರ ಹೆಸರನ್ನು ಶಿಫಾರಸು ಮಾಡಿತ್ತು. ಪ್ರಸ್ತುತ ಇರುವ 27 ನ್ಯಾಯಮೂರ್ತಿಗಳ ಪೈಕಿ ಎಂಟು ಮಂದಿ ನ್ಯಾಯಮೂರ್ತಿಗಳ ಅಧಿಕಾರವಧಿ ಇದೇ ವರ್ಷ ಅಂದರೆ 2023ರಲ್ಲಿ ಮುಗಿಯಲಿದೆ.

'ದುಡಿಮೆಗೆ ತಕ್ಕ ಗೌರವದ ಕೊರತೆ, ನಿರುದ್ಯೋಗದ ಮೂಲ'


ಮೋಹನ್ ಭಾಗವತ್

ಮುಂಬೈ (ಪಿಟಿಐ): ದುಡಿಮೆಗೆ ತಕ್ಕ ಗೌರವ ಇಲ್ಲದಿರುವುದು ದೇಶದಲ್ಲಿ ನಿರುದ್ಯೋಗ ಸಮಸ್ಯೆಯ ಹಿಂದಿರುವ ಪ್ರಮುಖ ಕಾರಣಗಳಲ್ಲಿ ಒಂದೆನಿಸಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ಸರಸಂಘ ಚಾಲಕ ಮೋಹನ್ ಭಾಗವತ್ ಭಾನುವಾರ ಇಲ್ಲಿ ಅಭಿಪ್ರಾಯಪಟ್ಟರು.

ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಎಲ್ಲರೂ ಉದ್ಯೋಗಗಳ ಹಿಂದೆ ಓಡುತ್ತಾರೆ. ಇತರ ಉದ್ಯೋಗಗಳು ಶೇ 20ರಷ್ಟಿದ್ದರೆ, ಸರ್ಕಾರಿ ಉದ್ಯೋಗಗಳು ಇರುವುದು ಕೇವಲ ಶೇ 10 ಮಾತ್ರ. ವಿಶ್ವದ ಯಾವುದೇ ಸಮಾಜವು ಶೇ 30ಕ್ಕಿಂತ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಉದ್ಯೋಗದ ಬೆನ್ನತ್ತಿ ಓಡುವ ಪ್ರವೃತ್ತಿ ನಿಲ್ಲಿಸಬೇಕು. ಯಾವುದೇ ರೀತಿಯಾದ ಕೆಲಸವಾದರೂ ಅದನ್ನು ಗೌರವಿಸುವ ಸ್ವಭಾವವನ್ನು ಜನರು ರೂಢಿಸಿಕೊಳ್ಳಬೇಕು' ಎಂದು ಅವರು ಹೇಳಿದರು.

'ದೇಶದಲ್ಲಿ ಕೃಷಿಯ ಮೂಲಕ ಉತ್ತಮ ಆದಾಯ ಗಳಿಸಿದರೂ ಮದುವೆಯಾಗಲು ಹೆಣಗಾಡುತ್ತಿರುವ ಅನೇಕ ರೈತರು ಇದ್ದಾರೆ. ಕೆಲಸಕ್ಕೆ ದೈಹಿಕ ಶ್ರಮ ಅಥವಾ ಬುದ್ಧಿಶಕ್ತಿ ಅಗತ್ಯವಿದೆಯೇ, ಅದಕ್ಕೆ ಕಠಿಣ ಪರಿಶ್ರಮ ಅಥವಾ ಕೌಶಲಗಳು ಅಗತ್ಯವಿದೆಯೇ ಎನ್ನುವುದು ಮುಖ್ಯವಲ್ಲ. ಎಲ್ಲ ರೀತಿಯ ಕೆಲಸವನ್ನೂ ಗೌರವಿಸಬೇಕು' ಎಂದು ಹೇಳಿದರು.

'ಅಸ್ಪೃಶ್ಯತೆಯಿಂದ ನೊಂದಿದ್ದ ಡಾ. ಬಿ.ಆರ್. ಅಂಬೇಡ್ಕರ್ ಹಿಂದೂ ಧರ್ಮವನ್ನು ತೊರೆದರು. ಬೇರೆ ಧರ್ಮಗಳನ್ನು ಅಪ್ಪಿಕೊಳ್ಳದ ಅವರು ಬುದ್ಧನ ಮಾರ್ಗ ಅನುಸರಿಸಿದರು. ಅವರ ಬೋಧನೆಯಲ್ಲಿ ಭಾರತೀಯ ಮೌಲ್ಯಗಳೇ ಹಾಸುಹೊಕ್ಕಾಗಿದ್ದವು' ಎಂದು ಭಾಗವತ್ ಹೇಳಿದರು.

ಮಹಿಳೆಯನ್ನು ಇಳಿಸಿದ ಅಮೆರಿಕ ಏರ್‌ಲೈನ್ಸ್

ನವದೆಹಲಿ (ಪಿಟಿಐ): ವಿಮಾನ ಸಿಬ್ಬಂದಿಯ ಸೂಚನೆಗಳನ್ನು ಪಾಲಿಸದ ಆರೋಪದ ಮೇಲೆ ಮಹಿಯೊಬ್ಬರನ್ನು ವಿಮಾನದಿಂದ ಕೆಳಗಿಳಿಸಿರುವ ಘಟನೆಯು ದೆಹಲಿಯಲ್ಲಿ ಜ. 30ರಂದು ನಡೆದಿದೆ.

ದೆಹಲಿಯಿಂದ ನ್ಯೂಯಾರ್ಕ್‌ಗೆ ತೆರಳುತ್ತಿದ್ದ ಅಮೆರಿಕನ್ ಏರ್‌ಲೈನ್ಸ್‌ನ ವಿಮಾನವೊಂದರಲ್ಲಿ ಈ ಘಟನೆ ನಡೆದಿದ್ದು, ಡಿಜಿಸಿಎ ಈ ಘಟನೆ ಕುರಿತು ವರದಿ ಕೇಳಿದೆ.

ವಿಮಾನದಿಂದ ಕೆಳಗಿಳಿಸಲಾದ ಮಹಿಳೆಯನ್ನು ಮೀನಾಕ್ಷಿ ಸೇನ್‌ಗುಪ್ತ ಎಂದು ಗುರುತಿಸಲಾಗಿದೆ. ಈ ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ. 'ನಾನು ಇತ್ತೀಚೆಗೆ ಕ್ಯಾನ್ಸರ್ ಚಿಕಿತ್ಸೆಗೆ ಒಳಗಾಗಿದ್ದ ಕಾರಣ ಕೈಚೀಲವನ್ನು ಮೇಲೆ ಎತ್ತಿಡಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಸಹಾಯ ಮಾಡುವಂತೆ ಸಿಬ್ಬಂದಿಗೆ ಕೇಳಿಕೊಂಡೆ. ಆದರೆ ಅವರು ನಿರಾಕರಿಸಿದರು. ಮತ್ತೆ ಮತ್ತೆ ಸಹಾಯಕ್ಕಾಗಿ ಅಂಗಲಾಚಿದಾಗ ವಿಮಾನದಿಂದ ಕೆಳಗಿಳಿಯುವಂತೆ ಹೇಳಿದರು' ಎಂದಿದ್ದಾರೆ.

ಮಹಿಳೆ ಮೇಲೆ ಬಾಲಕನಿಂದ ಅತ್ಯಾಚಾರ, ಕೊಲೆ

ರೇವಾ (ಪಿಟಿಐ): 16 ವರ್ಷದ ಬಾಲಕನೊಬ್ಬ 58 ವರ್ಷದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿ, ಹೀನಾಯವಾಗಿ ಥಳಿಸಿ ಕೊಂದಿರುವ ಘಟನೆ ಮಧ್ಯ ಪ್ರದೇಶದ ರೇವಾ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹನುಮಾನ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಕೈಲಾಶ್‌ಪುರಿ ಗ್ರಾಮದಲ್ಲಿ ಜ.30ರಂದು ಘಟನೆ ನಡೆದಿದೆ. ಮನೆಯಲ್ಲಿ ಮಹಿಳೆಯೊಬ್ಬರೇ ಇದ್ದ ಸಂದರ್ಭದಲ್ಲಿ ಮನೆಗೆ ನುಗ್ಗಿದ ಬಾಲಕ, ಮಹಿಳೆಯ ಬಾಯಿಗೆ ಪ್ಲಾಸ್ಟಿಕ್ ಚೀಲ ಮತ್ತು ಬಟ್ಟೆ ತುರುಕಿ, ಕಟ್ಟಡದ ನಿರ್ಮಾಣ ಹಂತದ ಪ್ರದೇಶಕ್ಕೆ ಎಳೆದೊಯ್ದಿದ್ದ. ಅಲ್ಲಿ ಹೀನಾಯವಾಗಿ ಥಳಿಸಿ, ಅತ್ಯಾಚಾರ ಎಸಗಿದ್ದ. ನಂತರ ₹1000 ನಗದು, ಚಿನ್ನಾಭರಣಗಳನ್ನು ಕದ್ದು ಪರಾರಿಯಾಗಿದ್ದ. ಮಹಿಳೆಯ ತಲೆ, ಗುಪ್ತಾಂಗ ಮತ್ತು ದೇಹದ ಇತರ ಭಾಗಗಳಲ್ಲಿ ಗಾಯದ ಗುರುತುಗಳು ಪತ್ತೆಯಾಗಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಎರಡು ವರ್ಷದ ಹಿಂದೆ ಬಾಲಕ ಮೊಬೈಲ್ ಕದ್ದಿದ್ದಾನೆ ಎಂದು ಮಹಿಳೆಯ ಕುಟುಂಬ ಆರೋಪಿಸಿತ್ತು. ಇದರಿಂದ ಅವಮಾನಗೊಂಡ ಬಾಲಕ ಪ್ರತೀಕಾರಕ್ಕಾಗಿ ಕೃತ್ಯ ಎಸಗಿದ್ದಾನೆ ಎಂದು ಶಂಕಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ನಿರ್ಮಾಣ ಹಂತದಲ್ಲಿರುವ ಕಟ್ಟಡದಲ್ಲಿ ಮಹಿಳೆಯೊಬ್ಬರು ಬಿದ್ದಿದ್ದಾರೆ ಎಂಬ ಮಾಹಿತಿ ಫೆ.1ರಂದು ಲಭ್ಯವಾಗಿತ್ತು. ಪೊಲೀಸ್ ಮತ್ತು ವಿಧಿ ವಿಜ್ಞಾನ ಪರೀಕ್ಷೆ ತಂಡ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಅಮಾನುಷವಾಗಿ ಥಳಿಸಿ ಮಹಿಳೆಯನ್ನು ಕೊಲೆ ಮಾಡಿರುವುದು ಪತ್ತೆಯಾಗಿದೆ. ಬಾಲಕನನ್ನು ವಶಕ್ಕೆ ಪಡೆದು ಬಾಲಮಂದಿರದಲ್ಲಿ ಇಡಲಾಗಿದೆ. ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಲಾಲ್ ತಿಳಿಸಿದ್ದಾರೆ.

3 ಬಾರಿ ಹತ್ಯೆಯಿಂದ ಪಾರಾಗಿದ್ದ ಮುಷರಫ್

ದಂಗೆ ಎದ್ದು ಪ್ರಧಾನಿಯನ್ನೇ ಕೆಳಗಿಳಿಸಿ ಆಡಳಿತ ಚುಕ್ಕಾಣಿ ಹಿಡಿದಿದ್ದ ಸೇನಾಧಿಕಾರಿ

ಇಸ್ಲಾಮಾಬಾದ್: ಒಂಬತ್ತು ವರ್ಷಗಳ ಕಾಲ ಪಾಕಿಸ್ತಾನದ ಆಡಳಿತ ಚುಕ್ಕಾಣಿ ಹಿಡಿದಿದ್ದ ಮುಷರಫ್, ಈ ಅವಧಿಯಲ್ಲಿ ಮೂರು ಬಾರಿ ನಡೆದಿದ್ದ ಹತ್ಯೆ ಯತ್ನಗಳಿಂದ ಬಚಾವಾಗಿದ್ದರು.

2006ರಲ್ಲಿ ಮುಷರಫ್ ಅವರ ಆದೇಶದಂತೆ ಪಾಕಿಸ್ತಾನ ಸೇನೆಯು ಬಲೂಚಿಸ್ತಾನದ ಗವರ್ನರ್ ಹಾಗೂ ಬುಗ್ತಿ ಬುಡಕಟ್ಟು ನಾಯಕ ನವಾಬ್ ಅಕ್ಬರ್ ಖಾನ್ ಬುಗ್ತಿ ಹಾಗೂ ಇತರ 12 ಜನರನ್ನು ಹತ್ಯೆ ಮಾಡಿತು. ಇದು, ಬಲೂಚಿಸ್ತಾನದಲ್ಲಿ ವ್ಯಾಪಕ ಗಲಭೆಗೆ ಕಾರಣವಾಗಿತ್ತಲ್ಲದೇ, ಪ್ರತ್ಯೇಕ ಬಲೂಚ್‌ಗಾಗಿ ಆಗ್ರಹಿಸಿ ಚಳವಳಿ ಭುಗಿಲೇಳುವಂತೆ ಮಾಡಿತ್ತು.

2007ರಲ್ಲಿ ಬೆನಜೀರ್ ಭುಟ್ಟೊ ಹತ್ಯೆಯಾಗಿ, ಮತ್ತೆ ವ್ಯಾಪಕ ಹಿಂಸಾಚಾರ ನಡೆಯಿತು. ಭುಟ್ಟೊ ಹತ್ಯೆ ಆರೋಪವೂ ಅವರ ಮೇಲಿತ್ತು. ಅವರ ವಿರುದ್ಧ ವಿವಿಧ ಪ್ರಕರಣಗಳು ದಾಖಲಾಗಿದ್ದವಲ್ಲದೇ, ಗೃಹಬಂಧನದಲ್ಲಿ ಇರಿಸಲಾಗಿತ್ತು. ಅವರ ವಿದೇಶ ಪ್ರಯಾಣಕ್ಕೆ ಅನುಮತಿ ದೊರೆತ ಮೇಲೆ ಅವರು ದೇಶ ತೊರೆದಿದ್ದರು.

2019ರಲ್ಲಿ ಅವರ ಅನುಪಸ್ಥಿತಿಯಲ್ಲಿ ತೀರ್ಪು ಪ್ರಕಟಿಸಿದ್ದ ವಿಶೇಷ ಕೋರ್ಟ್, ದೇಶದ್ರೋಹ ಹಾಗೂ 2007ರ ನ.3ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ ಆರೋಪದಡಿ ಮರಣ ದಂಡನೆ ವಿಧಿಸಿತ್ತು. ಅದೇ ಮೊದಲ ಬಾರಿಗೆ, ಮಿಲಿಟರಿಯ ಮಾಜಿ ಉನ್ನತಾಧಿಕಾರಿಯೊಬ್ಬರಿಗೆ ದೇಶದ್ರೋಹ ಆರೋಪದಡಿ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ಈ ತೀರ್ಪು ಮಿಲಿಟರಿಯನ್ನು ಕೆರಳುವಂತೆ ಮಾಡಿತ್ತು. ನಂತರ, ಲಾಹೋರ್ ಹೈಕೋರ್ಟ್ ಈ ತೀರ್ಪನ್ನು ರದ್ದುಪಡಿಸಿತ್ತು.

ಭಾರತದಲ್ಲಿ ಜನನ (ನವದೆಹಲಿ ವರದಿ): ಮುಷರಫ್ ಅವರು 1943ರ ಆಗಸ್ಟ್ 11ರಂದು ದೆಹಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಜನಿಸಿದ್ದರು. 2005ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಸಮಯದಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಜನನ ಪ್ರಮಾಣ ಪತ್ರವನ್ನು ಉಡುಗೊರೆಯಾಗಿ ಮುಷರಫ್‌ಗೆ ನೀಡಿದ್ದರು.

ಶಾಂತಿಯ ನಿಜ ಶಕ್ತಿ– ತರೂರ್: ಬಿಜೆಪಿ ತರಾಟೆ

ನವದೆಹಲಿ (ಪಿಟಿಐ): ಪಾಕಿಸ್ತಾನದ ಮಾಜಿ ಅಧ್ಯಕ್ಷ, ನಿವೃತ್ತ ಜನರಲ್ ಪರ್ವೇಜ್ ಮುಷರಫ್ ಅವರ ನಿಧನಕ್ಕೆ ಕಾಂಗ್ರೆಸ್ ಮುಖಂಡ ಶಶಿ ತರೂರ್ ಸಂತಾಪ ವ್ಯಕ್ತಪಡಿಸಿದ್ದಾರೆ. 'ಒಮ್ಮೆ ಭಾರತದ ಬದ್ಧ ವೈರಿಯಾಗಿದ್ದ ಅವರು, 2002 ರಿಂದ 2007ರ ಅವಧಿಯಲ್ಲಿ ಶಾಂತಿಯ ನಿಜವಾದ ಶಕ್ತಿಯಾಗಿದ್ದರು' ಎಂದು ಹೇಳಿದ್ದಾರೆ.

ತರೂರ್ ಅವರ ಈ ಹೇಳಿಕೆಗಾಗಿ ಬಿಜೆಪಿಯು ತೀವ್ರ ತರಾಟೆಗೆ ತೆಗೆದುಕೊಂಡಿದೆ. 'ಕಾಂಗ್ರೆಸ್ ಪಕ್ಷವು ಪಾಕಿಸ್ತಾನದ ಧ್ಯಾನದಲ್ಲಿ ತೊಡಗಿದೆ' ಎಂದು ಬಿಜೆಪಿ ವಕ್ತಾರ ಶೆಹನಾಜ್ ಪೂನಾವಾಲಾ ಟೀಕಿಸಿದ್ದಾರೆ.

'ಜನರಲ್ ಪರ್ವೇಜ್ ಮುಷರಫ್ ಅವರು ಕಾರ್ಗಿಲ್‌ನ ರೂವಾರಿ. ಸರ್ವಾಧಿಕಾರಿ. ಹಲವು ಗಂಭೀರ ಅಪರಾಧಗಳಲ್ಲಿ ಅಪರಾಧಿ. ತಾಲಿಬಾನ್ ಮತ್ತು ಒಸಾಮರನ್ನು ಕ್ರಮವಾಗಿ ಸೋದರರು, ಹೀರೋಗಳು ಎಂದಿದ್ದವರು. ಇಂಥವರನ್ನು ಕಾಂಗ್ರೆಸ್ ಪಕ್ಷವು ಹೊಗಳುತ್ತಿದೆ' ಎಂದು ಪೂನಾವಾಲಾ ಟೀಕಿಸಿದ್ದಾರೆ.

ಕಾಶ್ಮೀರ ಸಮಸ್ಯೆ ಬಗೆಹರಿಸಲು ಶ್ರಮಿಸಿದ್ದರು: ಮೆಹಬೂಬಾ

ಶ್ರೀನಗರ (ಪಿಟಿಐ): 'ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ ಪಾಕಿಸ್ತಾನದ ಏಕೈಕ ಜನರಲ್ ಅಂದರೆ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಮಾತ್ರ' ಎಂದು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಭಾನುವಾರ ಹೇಳಿದ್ದಾರೆ. 'ಜಮ್ಮು–ಕಾಶ್ಮೀರ ಜನರ ಆಶಯದಂತೆ ಹಾಗೂ ಭಾರತ ಮತ್ತು ಪಾಕಿಸ್ತಾನ ಸ್ವೀಕರಿಸಬಹುದಾದ ಪರಿಹಾರ ಕಂಡುಕೊಳ್ಳಬೇಕು ಎಂಬುದು ಅವರ ಇಚ್ಛೆಯಾಗಿತ್ತು' ಎಂದು ಅವರು ಮುಷರಫ್ ನಿಧನಕ್ಕೆ ಶೋಕ ವ್ಯಕ್ತಪಡಿಸಿ ಮಾಡಿರುವ ಟ್ವೀಟ್‌ನಲ್ಲಿ ಹೇಳಿದ್ದಾರೆ.


ನವದೆಹಲಿಯಲ್ಲಿರುವ ಮುಷರಫ್ ಅವರ ಪೂರ್ವಜರ ಮನೆ —ಪಿಟಿಐ ಚಿತ್ರ

ಪಾಕಿಸ್ತಾನ ಮಾಜಿ ಅಧ್ಯಕ್ಷ ಮುಷರಫ್ ದುಬೈನಲ್ಲಿ ನಿಧನ

ಒಂದನೇ ಪುಟದಿಂದ...

ಅವರನ್ನು ಸೇನೆಯ ಮುಖ್ಯಸ್ಥರನ್ನಾಗಿ ಆಗಿನ ಪ್ರಧಾನಿ ನವಾಜ್ ಷರೀಫ್ ನೇಮಕ ಮಾಡಿದ್ದರು. ಆಗ, ಮುಷರಫ್ ಭಾರತದ ವಿರುದ್ಧ ಕಾರ್ಗಿಲ್‌ನಲ್ಲಿ ದಾಳಿ ನಡೆಸಿದರು. ಈ ದುಸ್ಸಾಹಸದಲ್ಲಿ ಅವರು ಸೋಲನುಭವಿಸಿದ್ದರು.

ಯುದ್ಧದಲ್ಲಿ ಪರಾಭವಗೊಂಡ ಬೆನ್ನಲ್ಲೇ, ಪ್ರಧಾನಿ ನವಾಜ್ ಷರೀಫ್ ಅವರು, ಅಂದಿನ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ ಲಾಹೋರ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದರು. ಇದಾದ ನಂತರ, ಸರ್ಕಾರದ ವಿರುದ್ಧ ದಂಗೆ ಎದ್ದಿದ್ದ ಮುಷರಫ್, ಷರೀಫ್ ಅವರನ್ನು ಪ್ರಧಾನಿ ಸ್ಥಾನದಿಂದ ಕಿತ್ತೊಗೆದು, ದೇಶದ ಆಡಳಿತವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

'ಆಗ್ರಾ ಶೃಂಗಸಭೆ': ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿ ಯಾಗಿದ್ದಾಗ 2001ರ ಜುಲೈ ನಲ್ಲಿ ಆಗ್ರಾದಲ್ಲಿ ಆಯೋಜಿಸಿದ್ದ ಶೃಂಗಸಭೆಯಲ್ಲಿ ಮುಷರಫ್ ಪಾಲ್ಗೊಂಡಿದ್ದರು. ಉಭಯ ದೇಶಗಳ ನಡುವೆ ಶಾಂತಿ ಸ್ಥಾಪನೆ ಉದ್ದೇಶ ಹೊಂದಿದ್ದ ಈ ಶೃಂಗದ ಮೊದಲ ದಿನ ನಡೆದ ಮಾತುಕತೆ ಭರವಸೆ ಮೂಡಿಸಿತ್ತು.

ಆದರೆ, ಎರಡನೆ ದಿನವೇ ಈ ಮಾತುಕತೆ ಮುರಿದು ಬಿದ್ದಿತ್ತು. ಮಾಧ್ಯಮಗಳ ಸಂಪಾದಕರೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಪಾಲ್ಗೊಂಡಿದ್ದ ಮುಷರಫ್, ಜಮ್ಮು–ಕಾಶ್ಮೀರದೊಳಗೆ ಪಾಕಿಸ್ತಾನದಿಂದ ಉಗ್ರರು ನುಸುಳುವುದನ್ನು ತಡೆಗಟ್ಟುವ ಕುರಿತು ಭಾರತಕ್ಕೆ ಸ್ಪಷ್ಟ ಭರವಸೆ ನೀಡಲು ತಿರಸ್ಕರಿಸಿದ್ದರು. ಹೀಗಾಗಿ ಅಂದಿನ ಶೃಂಗಸಭೆ ಫಲಪ್ರದವಾಗದೇ ಮುಕ್ತಾಯಗೊಂಡಿತ್ತು.

2001ರ ಡಿಸೆಂಬರ್ 13ರಂದು ಸಂಸತ್ ಭವನದ ಮೇಲೆ ಪಾಕಿಸ್ತಾನದ ಉಗ್ರರು ನಡೆಸಿದ್ದ ದಾಳಿ ಉಭಯ ದೇಶಗಳ ನಡುವೆ ಉದ್ವಿಗ್ನತೆಯನ್ನು ಹೆಚ್ಚಿಸಿತ್ತು. 2003ರ ನವೆಂಬರ್ 26ರಂದು ಉಭಯ ದೇಶಗಳು ಕದನ ವಿರಾಮ ಘೋಷಿಸಿದ್ದವು. 2004ರ ಜನವರಿಯಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಸಭೆಯಲ್ಲಿ ವಾಜಪೇಯಿ ಹಾಗೂ ಮುಷರಫ್ ಒಪ್ಪಂದಕ್ಕೆ ಸಹಿ ಹಾಕಿ, ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಸಮ್ಮತಿಸಿದ್ದರು.

ನ್ಯೂಯಾರ್ಕ್‌ನ ವಿಶ್ವ ವ್ಯಾಪಾರ ಕೇಂದ್ರದ ಮೇಲೆ ಉಗ್ರರ ದಾಳಿ ವೇಳೆ ಮುಷರಫ್ ಪಾಕಿಸ್ತಾನದ ಅಧ್ಯಕ್ಷರಾಗಿದ್ದರು. ಆಗ, ಅಮೆರಿಕದೊಂದಿಗೆ ಸ್ನೇಹ ಹಸ್ತ ಚಾಚಿದರು. ದೇಶದಲ್ಲಿ ಇಸ್ಲಾಮಿಕ್ ಭಯೋತ್ಪಾದಕ ಸಂಘಟನೆಗಳ ಹೆಡೆಮುರಿ ಕಟ್ಟಿದ್ದು, ಇದು ಉಗ್ರರನ್ನು ಕಂಗೆಡಿಸಿತ್ತು.

ಭಾರತ ಪಡೆಗೆ ಫೀಲ್ಡಿಂಗ್ ಪಾಠ

ಕ್ರಿಕೆಟ್: ಕೋಚ್ ರಾಹುಲ್ ದ್ರಾವಿಡ್ ಮಾರ್ಗದರ್ಶನದಲ್ಲಿ ತರಬೇತಿ ಶಿಬಿರ

ನಾಗಪುರ (ಪಿಟಿಐ): ಪ್ರತಿಷ್ಠಿತ ಗಾವಸ್ಕರ್-ಬಾರ್ಡರ್ ಟೆಸ್ಟ್ ಕ್ರಿಕೆಟ್ ಸರಣಿ ಇದೇ ವಾರ ಆರಂಭವಾಗಲಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ತಮ್ಮ ಸ್ಥಾನಗಳನ್ನು ಭದ್ರಗೊಳಿಸಿಕೊಳ್ಳಲು ಈ ಎರಡೂ ಬಲಾಢ್ಯ ತಂಡಗಳಿಗೆ ಈ ಸರಣಿ ಜಯದ ಮೇಲೆ ಕಣ್ಣಿದೆ. ಆದ್ದರಿಂದ ಪ್ರತಿಯೊಂದು ಹಂತದಲ್ಲಿಯೂ ಉತ್ತಮವಾದ ಯೋಜನೆ ಮತ್ತು ಸಾಮರ್ಥ್ಯ ನೀಡುವುದು ಪ್ರಮುಖವಾಗಲಿದೆ.

ಅದರಿಂದಾಗಿಯೇ ಭಾರತ ತಂಡದ ಫೀಲ್ಡಿಂಗ್ ಕೌಶಲಗಳನ್ನು ಮತ್ತಷ್ಟು ಉತ್ತಮಗೊಳಿಸಲು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಕಾರ್ಯಪ್ರವೃತ್ತರಾಗಿದ್ದಾರೆ. ಅದರಲ್ಲೂ ಸ್ಲಿಪ್ ಫೀಲ್ಡಿಂಗ್ ಮತ್ತು ಕ್ಯಾಚಿಂಗ್ ಬಗ್ಗೆ ಹೆಚ್ಚು ಗಮನ ಹರಿಸಿದ್ದಾರೆ.

ನಾಗಪುರದಲ್ಲಿ ಭಾನುವಾರ ನಡೆದ ತಂಡದ ಆಟಗಾರರ ಅಭ್ಯಾಸದಲ್ಲಿ ಅವರ ಮೇಲುಸ್ತುವಾರಿಯಲ್ಲಿ ಫೀಲ್ಡಿಂಗ್ ಡ್ರಿಲ್ ನಡೆಯಿತು.

‘ತಂಡದಲ್ಲಿ ಎಲ್ಲರೂ ಉತ್ತಮ ಲಯದಲ್ಲಿದ್ದಾರೆ. ಮತ್ತೊಮ್ಮೆ ಟೆಸ್ಟ್ ತಂಡವು ಇಲ್ಲಿ ಜೊತೆಗೂಡಿರುವುದು ಸಂತಸ ಮತ್ತು ಹುಮ್ಮಸ್ಸು ಹೆಚ್ಚಿಸಿದೆ. ಈಚಿನ ದಿನಗಳಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಡಿದ್ದೇವೆ. ದೀರ್ಘ ಮಾದರಿ ಮತ್ತು ಕೆಂಪು ಚೆಂಡಿನ ಆಟಕ್ಕೆ ಹೊಂದಿಕೊಳ್ಳಲು ಹೆಚ್ಚು ಸಮಯವನ್ನು ವಿನಿಯೋಗಿಸುತ್ತಿದ್ದೇವೆ. ಮಾದರಿಯಿಂದ ಮಾದರಿಗೆ ಹೊಂದಿಕೊಳ್ಳುವಲ್ಲಿ ಕೆಲವು ಆಟಗಾರರು ಬಹಳ ವೇಗವಾಗಿ ಸ್ಪಂದಿಸುತ್ತಿದ್ದಾರೆ’ ಎಂದು ದ್ರಾವಿಡ್ ಹೇಳಿದರು. ಇಲ್ಲಿಯ ಸಿವಿಲ್ ಲೈನ್ಸ್‌ನಲ್ಲಿರುವ ವಿಸಿಎ ಕ್ರೀಡಾಂಗಣದಲ್ಲಿ ಅಭ್ಯಾಸ ಶಿಬಿರ ನಡೆಯುತ್ತಿದೆ.

‘ತರಬೇತಿ ಶಿಬಿರ ನಡೆಸಲು ಅವಕಾಶ ಸಿಕ್ಕಿರುವುದು ಸಂತಸ ತಂದಿದೆ. ಇಂತಹ ಶಿಬಿರಗಳು ಹೆಚ್ಚು ನಡೆಯಬೇಕು. ಆಗ ಕೋಚಿಂಗ್ ಸಿಬ್ಬಂದಿ ಮತ್ತು ಆಟಗಾರರ ನಡುವೆ ಮತ್ತಷ್ಟು ಬಾಂಧವ್ಯ ಬೆಳೆಯುತ್ತದೆ. ಕೌಶಲಗಳೂ ಉತ್ತಮಗೊಳ್ಳುತ್ತವೆ. ಈ ಶಿಬಿರದಲ್ಲಿ ಫೀಲ್ಡಿಂಗ್, ಕ್ಯಾಚಿಂಗ್ ಹೆಚ್ಚು ಒತ್ತು ಕೊಟ್ಟಿದ್ದೇವೆ. ನೆಟ್ಸ್‌ಗಳಲ್ಲಿ ಬ್ಯಾಟರ್‌ಗಳೂ ಹೆಚ್ಚುವರಿ ಸಮಯ ವಿನಿಯೋಗಿಸುತ್ತಿದ್ದಾರೆ’ ಎಂದು ಹೇಳಿದರು.

ಭಾರತ ತಂಡವು ಕಳೆದ ಮೂರು (2017, 2018–19 ಮತ್ತು 2020–21) ಬಾರಿ ಬಾರ್ಡರ್–ಗಾವಸ್ಕರ್ ಟ್ರೋಫಿಗಳನ್ನು ಗೆದ್ದಿದೆ.



ರಾಹುಲ್ ದ್ರಾವಿಡ್ ಮತ್ತು ಆರ್. ಅಶ್ವಿನ್

ಮುಖ್ಯಾಂಶಗಳು

- ಆಸ್ಟ್ರೇಲಿಯಾ ಎದುರಿನ ಸರಣಿಗೆ ಭರದ ಸಿದ್ಧತೆ
- ವಿಸಿಎ ಕ್ರೀಡಾಂಗಣದಲ್ಲಿ ಭಾರತ ತಂಡದ ಅಭ್ಯಾಸ
- ಮೊದಲ ಟೆಸ್ಟ್‌ಗೆ ಜೋಶ್ ಹ್ಯಾಜಲ್‌ವುಡ್ ಅಲಭ್ಯ

ಈ ಸಲದ ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಹಣಾಹಣಿಯು ಫೆ 9ರಿಂದ ನಾಗಪುರದ ಜಮ್ತಾ ಕ್ರೀಡಾಂಗಣದಲ್ಲಿ ನಡೆಯಲಿದೆ. ನವದೆಹಲಿ (ಫೆ 17–21), ಧರ್ಮಶಾಲಾ (ಮಾರ್ಚ್ 1–5) ಹಾಗೂ ಅಹಮದಾಬಾದ್ (ಮಾರ್ಚ್ 9–13) ಪಂದ್ಯಗಳು ನಡೆಯಲಿವೆ.

ಜೋಶ್ ಗೈರು: ಆಸ್ಟ್ರೇಲಿಯಾ ತಂಡದ ವೇಗಿ ಜೋಶ್ ಹ್ಯಾಜಲ್‌ವುಡ್ ಅವರು ಗಾಯದಿಂದ ಇನ್ನೂ ಪೂರ್ಣ ಚೇತರಿಸಿಕೊಂಡಿಲ್ಲ. ಆದ್ದರಿಂದ ಅವರು ಭಾರತ ಎದುರಿನ ಮೊದಲ ಟೆಸ್ಟ್‌ನಲ್ಲಿ ಆಡುವುದಿಲ್ಲ.

ಹೋದ ತಿಂಗಳು ಸಿಡ್ನಿಯಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್‌ನಲ್ಲಿ ಆಡುವ ಸಂದರ್ಭದಲ್ಲಿ ಜೋಶ್ ಎಡಗಾಲಿಗೆ ಗಾಯವಾಗಿತ್ತು. 32 ವರ್ಷದ ಜೋಶ್ ಚಿಕಿತ್ಸೆ ಪಡೆಯುತ್ತಿದ್ದು ದೆಹಲಿಯಲ್ಲಿ ನಡೆಯುವ ಎರಡನೇ ಟೆಸ್ಟ್‌ನಲ್ಲಿ ಆಡುವರು ಎಂದು ತಂಡದ ಮೂಲಗಳು ತಿಳಿಸಿವೆ.

‘ಪಾಕ್ ವಿರುದ್ಧದ ಪಂದ್ಯದತ್ತ ಗಮನ’

ಕೇಪ್‌ಟೌನ್ (ಪಿಟಿಐ): ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್‌ನ (ಡಬ್ಲ್ಯುಪಿಎಲ್) ಆಟಗಾರ್ತಿಯರ ಹರಾಜು ಪ್ರಕ್ರಿಯೆ ಕುತೂಹಲ ಮೂಡಿಸಿದೆಯಾದರೂ, ಪಾಕಿಸ್ತಾನ ವಿರುದ್ಧದ ಪಂದ್ಯದ ಮೇಲೆ ಗಮನ ಹರಿಸಿದ್ದೇವೆ ಎಂದು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹೇಳಿದ್ದಾರೆ.


ಹರ್ಮನ್‌ಪ್ರೀತ್

ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಭಾರತ ತಂಡ ಫೆ.12 ರಂದು ಪಾಕಿಸ್ತಾನ ವಿರುದ್ಧ ಪೈಪೋಟಿ ನಡೆಸಲಿದೆ. ಮರುದಿನ (ಫೆ.13) ಮುಂಬೈನಲ್ಲಿ ಡಬ್ಲ್ಯುಪಿಎಲ್ ಹರಾಜು ಪ್ರಕ್ರಿಯೆ ನಡೆಯಲಿದೆ.

‘ಹರಾಜು ಪ್ರಕ್ರಿಯೆಗೆ ಮುನ್ನ ನಮಗೆ ಅತ್ಯಂತ ಮಹತ್ವದ ಪಂದ್ಯ ಆಡಬೇಕಿದೆ. ತಂಡದ ಎಲ್ಲ ಸದಸ್ಯರೂ ಆ ಪಂದ್ಯದತ್ತ ಗಮನ ಕೇಂದ್ರೀಕರಿಸಿದ್ದಾರೆ’ ಎಂದು ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

‘ವಿಶ್ವಕಪ್ ಟೂರ್ನಿ ಇತರ ಎಲ್ಲಕ್ಕಿಂತಲೂ ಮಹತ್ವದ್ದಾಗಿದೆ. ನಮ್ಮ ಗಮನ ಐಸಿಸಿ ಟ್ರೋಫಿಯತ್ತ ನೆಟ್ಟಿದೆ. ಒಬ್ಬ ಆಟಗಾರ್ತಿಯಾಗಿ ನಿಮಗೆ ಯಾವುದು ಮುಖ್ಯವಾದುದು ಎಂಬುದು ತಿಳಿದಿರಬೇಕು. ಈ ಸಮಯದಲ್ಲಿ ಯಾವುದು ಮುಖ್ಯ ಎಂಬುದನ್ನು ತಿಳಿಯುವಷ್ಟು ನಾವೆಲ್ಲರೂ ಪ್ರಬುದ್ಧರಾಗಿದ್ದೇವೆ’ ಎಂದು ಹೇಳಿದರು.

ಗಾಲ್ಫ್: ಮ್ಯಾಜಿಕಲ್ ಕೀನ್ಯಾ ಓಪನ್‌ನಲ್ಲಿ ಮಿಂಚು

ಅದಿತಿ ಅಶೋಕ್‌ಗೆ ಕಿರೀಟ

ನೈರೋಬಿ (ಪಿಟಿಐ): ಬೆಂಗಳೂರಿನ ಅದಿತಿ ಅಶೋಕ್ ಭಾನುವಾರ ಇಲ್ಲಿ ಕೊನೆಗೊಂಡ ಮ್ಯಾಜಿಕಲ್ ಕೀನ್ಯಾ ಲೇಡೀಸ್ ಓಪನ್ ಪ್ರಶಸ್ತಿ ಗೆದ್ದುಕೊಂಡರು.

ಇದರೊಂದಿಗೆ ಲೇಡಿಸ್ ಯುರೋಪಿಯನ್ ಟೂರ್ (ಎಲ್‌ಇಟಿ) ನಲ್ಲಿ ನಾಲ್ಕನೇ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ನೈರೋಬಿಯಲ್ಲಿ ಉತ್ತಮವಾಗಿ ಆಡಿದ ಅವರು 9 ಶಾಟ್ಸ್ ಅಂತರದಿಂದ ಗೆಲುವು ಸಾಧಿಸಿದರು. ಮುಂದಿನ ತಿಂಗಳು 25 ವರ್ಷಕ್ಕೆ ಕಾಲಿಡಲಿರುವ ಅದಿತಿ, ನವೆಂಬರ್ 2017 ರಲ್ಲಿ ಅಬುಧಾಬಿಯಲ್ಲಿ ಕೊನೆಯ ಬಾರಿಗೆ ಜಯಗಳಿಸಿದ್ದರು. ಅಲ್ಲಿಂದ ಬಹುಕಾಲದವರೆಗೆ ಪ್ರಶಸ್ತಿ ಬರ ಅನುಭವಿಸಿದ್ದರು.

ಹೀರೋ ವುಮೆನ್ಸ್ ಇಂಡಿಯನ್ ಓಪನ್ ಮತ್ತು ಕತಾರ್ ಲೇಡೀಸ್ ಓಪನ್‌ನಲ್ಲಿ ಕಿರೀಟ ಧರಿಸಿದ್ದಾರೆ.

ಎಲ್‌ಇಟಿಯಲ್ಲಿ ಅದಿತಿಯ ದಾಖಲೆಯು ತುಂಬಾ ಉತ್ತಮವಾಗಿದೆ. ಏಕೆಂದರೆ ಅವರು ನಾಲ್ಕು ಬಾರಿ ಗೆದ್ದಿರುವುದಲ್ಲದೆ, 20 ಸಲ ಅಗ್ರ ಹತ್ತರಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಗೆಲುವಿನೊಂದಿಗೆ, ಮೊದಲ ಎಲ್‌ಪಿಜಿಎಯನ್ನು ಜಯಿಸುವ ಆತ್ಮವಿಶ್ವಾಸದಲ್ಲಿದ್ದಾರೆ. ಒಂದೊಮ್ಮೆ ಕನಸು ಕೈಗೂಡಿದರೆ ಈ ಸಾಧನೆ ಮಾಡಿದ ಭಾರತದ ಮೊದಲ ಗಾಲ್ಫ್ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗುವರು.

2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅದಿತಿ ಅವರು ಕೂದಲೆಳೆಯ ಅಂತರದಲ್ಲಿ ಪದಕವನ್ನು ಕೈತಪ್ಪಿಸಿಕೊಂಡಿದ್ದರು. ಅಲ್ಲಿ ಅವರು ನಾಲ್ಕನೇ ಸ್ಥಾನ ಪಡೆದಿದ್ದರು.

ಅದಿತಿ ನಾಲ್ಕು ಸುತ್ತುಗಳಲ್ಲೂ ಅಗ್ರಸ್ಥಾನ ಕಾಯ್ದುಕೊಂಡಿದ್ದರು. ಅವರು ಕ್ರಮವಾಗಿ 67, 70, 69 ಮತ್ತು 74 ಸ್ಟ್ರೋಕ್‌ಗಳಲ್ಲಿ ಸ್ಪರ್ಧೆ ಕೊನೆಗೊಳಿಸಿ ಒಟ್ಟು 280 ಸ್ಕೋರ್ ಮಾಡಿದರು.

ಇಂಗ್ಲೆಂಡ್‌ನ ಅಲೈಸ್ ಹೆವ್ಸನ್ ಮತ್ತು ಥಾಯ್ಲೆಂಡ್‌ನ ಅಪ್ರಿಲ್ ಅಂಗುರಸರನೀ ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು.

ಕಣದಲ್ಲಿದ್ದ ಭಾರತದ ಯುವ ಆಟಗಾರ್ತಿ ಅವನಿ ಪ್ರಶಾಂತ್ ಅವರು ಅಂತಿಮ ಸುತ್ತಿನಲ್ಲಿ ಗಮನಾರ್ಹ ಪ್ರದರ್ಶನ ನೀಡಿ ಜಂಟಿ ಒಂಬತ್ತನೇ ಸ್ಥಾನ ಪಡೆದರು. ಅಮನ್‌ದೀಪ್ ದ್ರಾಲ್ (77) ಜಂಟಿ 55 ನೇ ಸ್ಥಾನ ಪಡೆದರು.



ಮ್ಯಾಜಿಕಲ್ ಕೀನ್ಯಾ ಓಪನ್ ಪ್ರಶಸ್ತಿಯೊಂದಿಗೆ ಅದಿತಿ ಅಶೋಕ್ –ಟ್ವಿಟರ್ ಚಿತ್ರ

ಅಂಧರ ಕ್ರಿಕೆಟ್ ಟೂರ್ನಿ: ಕರ್ನಾಟಕಕ್ಕೆ ಗೆಲುವು

ಜವರೇಗೌಡ ಆಲ್‌ರೌಂಡ್ ಆಟ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆಲ್‌ರೌಂಡ್ ಆಟವಾಡಿದ ಬಿ. ಜವರೇಗೌಡ ಅವರ ನೆರವಿನಿಂದ ಕರ್ನಾಟಕ ಅಂಧರ ಕ್ರಿಕೆಟ್ ತಂಡವು ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಭಾನುವಾರ ಆರಂಭವಾದ ಪುರುಷರ ರಾಷ್ಟ್ರಮಟ್ಟದ ಅಂಧರ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವು ಜಯಿಸಿತು.

ಸಮರ್ಥನಂ ಅಂಗವಿಕಲರ ಸಂಸ್ಥೆ, ಪ್ರಜಾವಾಣಿ, ಇಂಡಸ್‌ಇಂಡ್ ಬ್ಯಾಂಕ್, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್, ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಸಹಯೋಗದಲ್ಲಿ ‘ನಾಗೇಶ ಟ್ರೋಫಿ’ಯ ಲೀಗ್ ಪಂದ್ಯಗಳು ಇಲ್ಲಿ ನಡೆಯುತ್ತಿವೆ. ಮೊದಲ ಪಂದ್ಯದಲ್ಲಿ ಕರ್ನಾಟಕವು ಎಂಟು ವಿಕೆಟ್‌ಗಳಿಂದ ಗೋವಾ ಎದುರು ಜಯಿಸಿತು.

ಟಾಸ್ ಗೆದ್ದ ಕರ್ನಾಟಕ ತಂಡ ಫೀಲ್ಡಿಂಗ್ ಆಯ್ದುಕೊಂಡಿತು. ಗೋವಾ ತಂಡ 20 ಓವರುಗಳಲ್ಲಿ 4 ವಿಕೆಟ್ ನಷ್ಟಕ್ಕೆ 161 ರನ್ ಕಲೆಹಾಕಿತು. ಗೌರವ ಝೂಡೆ (53 ರನ್, 37 ಎಸೆತ, 6 ಬೌಂಡರಿ), ಸಂದೀಪ ಗುಗೆ (42 ರನ್, 37 ಎಸೆತ, 4 ಬೌಂಡರಿ) ಕಾಣಿಕೆ ನೀಡಿದರು. ಕರ್ನಾಟಕದ ಬಿ.ಜವರೇಗೌಡ, ಎಸ್.ಕೃಷ್ಣಮೂರ್ತಿ, ಬಸವರಾಜ ಹುಲ್ಲೆನ್ನವರ ತಲಾ 1 ವಿಕೆಟ್ ಕಬಳಿಸಿದರು.

ಈ ಗುರಿ ಬೆನ್ನಟ್ಟಿದ ಕರ್ನಾಟಕದ ಆಟಗಾರರು 12.3 ಓವರುಗಳಲ್ಲಿ 2 ವಿಕೆಟ್ ನಷ್ಟಕ್ಕೆ 165 ರನ್ ಪೇರಿಸಿ ಗೆಲುವು ಸಾಧಿಸಿದರು. ಬಿ.ಜವರೇಗೌಡ (49 ರನ್, 25 ಎಸೆತ, 10 ಬೌಂಡರಿ), ಬಸಪ್ಪ ವಡ್ಡಗೋಳ (ಅಜೇಯ 38 ರನ್, 20 ಎಸೆತ), ಪುನೀತ್ ಕೆ.ಎಸ್. (33 ರನ್, 21 ಎಸೆತ, 7 ಬೌಂಡರಿ) ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮಿಂಚಿದ ಜವರೇಗೌಡ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರವಾದರು.

ಎರಡನೇ ಪಂದ್ಯದಲ್ಲಿ ಮಹಾರಾಷ್ಟ್ರ ತಂಡವು ಪಶ್ಚಿಮ ಬಂಗಾಳ ವಿರುದ್ಧ 23 ರನ್‌ಗಳಿಂದ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಗೋವಾ ಸಿಎಬಿಐ: 20 ಓವರ್‌ಗಳಲ್ಲಿ 161 (ಆಶುತೋಷ್ ಮವಾಸ್ಕರ್ 33, ಗೌರವ್ ಝುಡೆ 53, ಸಂದೀಪ್ ಗಗೆ ಔಟಾಗದೆ 42, ಜವರೇಗೌಡ 10ಕ್ಕೆ1, ಬಸವರಾಜ್ ಹುಲ್ಲೇನವರ 16ಕ್ಕೆ1) ಕರ್ನಾಟಕ: 12.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 165 (ಕೆ.ಎಸ್. ಪುನೀತ್ 33, ಬಿ ಜವರೇಗೌಡ 49, ಬಸಪ್ಪ ವಡ್ಡಗೋಲು ಔಟಾಗದೇ 38, ಆರ್. ಸುನೀಲ್ ಔಟಾಗದೆ 24, ವಿಕಾಸ್ ಬನ್ಸೊಡೆ 24ಕ್ಕೆ1) ಫಲಿತಾಂಶ: ಕರ್ನಾಟಕ ತಂಡಕ್ಕೆ 8 ವಿಕೆಟ್‌ಗಳ ಜಯ.

ವಾಲಿಬಾಲ್: ಕ್ಯಾಲಿಕಟ್‌ಗೆ ಜಯ


ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಕ್ಯಾಲಿಕಟ್ ಹೀರೋಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಗೆಲುವು ಪಡೆದರು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಕ್ಯಾಲಿಕಟ್ ತಂಡ 4–1 ರಲ್ಲಿ ಮುಂಬೈ ಮಿಟಿಯೋರ್ಸ್ ತಂಡವನ್ನು ಮಣಿಸಿತು.

ಉತ್ತಮ ಆರಂಭ ಪಡೆದ ಮುಂಬೈ ಮಿಟಿಯೋರ್ಸ್ ಮೊದಲ ಸೆಟ್‌ಅನ್ನು 15–10 ರಲ್ಲಿ ಗೆದ್ದಿತು. ಮರುಹೋರಾಟ ನಡೆಸಿದ ಕ್ಯಾಲಿಕಟ್ ಮುಂದಿನ ನಾಲ್ಕು ಸೆಟ್‌ಗಳನ್ನು 15–9, 15–8, 15–14, 15–11 ರಲ್ಲಿ ತನ್ನದಾಗಿಸಿಕೊಂಡು ಪಂದ್ಯ ಜಯಿಸಿತು.

ಉತ್ತಮ ಪ್ರದರ್ಶನ ನೀಡಿದ ಜೋಸ್ ಆಂಟೋನಿಯೊ ಸ್ಯಾಂಡೋವಲ್ ಅವರು ಕ್ಯಾಲಿಕಟ್ ತಂಡದ ಗೆಲುವಿನ ರೂವಾರಿ ಎನಿಸಿಕೊಂಡರು. ಇತರ ಆಟಗಾರರು ಅವರಿಗೆ ತಕ್ಕ ಸಾಥ್ ನೀಡಿದರು.

ಇಂದಿನ ಪಂದ್ಯ: ಅಹಮದಾಬಾದ್ ಡಿಫೆಂಡರ್ಸ್– ಹೈದರಾಬಾದ್ ಬ್ಲ್ಯಾಕ್‌ಹಾಕ್ಸ್ (ಆರಂಭ: ಸಂಜೆ 7) ನೇರ ಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್



ಕ್ಯಾಲಿಕಟ್ ಹೀರೋಸ್ ತಂಡದ ಜೋಸ್ ಆಂಟೋನಿಯೊ ಅವರ ಸ್ಮ್ಯಾಷ್‌ಅನ್ನು ಎದುರಾಳಿ ತಂಡದ ಆಟಗಾರ ಕಾರ್ತಿಕ್ ಹಾಗೂ ಅರವಿಂದನ್ ತಡೆಯಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಕುಸ್ತಿ: ಮುತ್ತು, ಪವನ್‌ಗೆ ಬಂಗಾರ

ಪ್ರಜಾವಾಣಿ ವಾರ್ತೆ

ಹಳಿಯಾಳ (ಉತ್ತರ ಕನ್ನಡ): ಬಾಗಲಕೋಟೆ ಕ್ರೀಡಾ ಶಾಲೆಯ ಮುತ್ತು ಆಡಿನ ಅವರು ಜಿಲ್ಲಾ ಕುಸ್ತಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯ 38 ಕೆ.ಜಿ ವಿಭಾಗದಲ್ಲಿ ಗೆದ್ದರು.

ಟೂರ್ನಿಯ ಎರಡನೇ ದಿನವಾದ ಭಾನುವಾರ ಮುತ್ತು ಅವರು ಧಾರವಾಡ ಕ್ರೀಡಾ ವಸತಿ ಶಾಲೆಯ ಭಜರಂಗಿ ದೊಡಮನಿ ವಿರುದ್ಧ 12-2 ಅಂಕಗಳಿಂದ ಗೆದ್ದು ಬಂಗಾರದ ಪದಕ ಗಳಿಸಿದರು.

38 ಕೆ.ಜಿ.: ಮುತ್ತು ಆಡಿನ, ಬಾಗಲಕೋಟೆ (ಚಿನ್ನ), ಭಜರಂಗಿ ದೊಡಮನಿ (ಬೆಳ್ಳಿ), ವೆಂಕಟೇಶ ಸಿ.ಜಿ. ಹರಿಹರ, ಅಮೋಘ ಬಿ.ಎಸ್. ಹಳಿಯಾಳ (ಕಂಚು). 25 ಕೆ.ಜಿ ವಿಭಾಗ: ಗಣೇಶ ದೇಶೂರಕರ (ಬಂಗಾರ), ಶರದ ಚಕ್ರಸಾಲಿ (ಬೆಳ್ಳಿ), ಜಿಗರ ಪವಾರ, ರೋಹಿತ (ಕಂಚು). 29 ಕೆ.ಜಿ ವಿಭಾಗ: ಮಂಜುನಾಥ ದಾನವೆನವರ (ಬಂಗಾರ), ಅಮೂಲ್ಯಾ ಡಿ. (ಬೆಳ್ಳಿ), ಅನಿಕುಮಾರ ಎನ್.ಎಸ್., ಸಂಪತ್ ಕುಮಾರ ಎನ್.ವೈ. (ಕಂಚು).

32 ಕೆ.ಜಿ. ವಿಭಾಗ: ಪವನ್ ಕಟ್ಟಿಮನಿ (ಬಂಗಾರ), ಮೋಹನ (ಬೆಳ್ಳಿ), ತೇಜಸ್ ದಾವಣಗೇರೆ, ವಿಲಾಸ ಗೋಕಾಕ (ಕಂಚು). 35 ಕೆ.ಜಿ.ವಿಭಾಗ: ಗಜಾನನ ಪಿ.ಸಿ. (ಬಂಗಾರ), ನಿಂಗಪ್ಪಾ ಫಾಡೇಕರ (ಬೆಳ್ಳಿ), ಮಾದೇಶಾ ಎಮಂ. ಬಿ., ಅಭಿ ಕುರಬರ (ಕಂಚು).

42 ಕೆ.ಜಿ. ಬಾಲಕರ ವಿಭಾಗ: ಸುದೀಪ ನೆಸರ್ಗಿ ದಾವಣಗೆರೆ (ಬಂಗಾರ), ಶುಭಂ ಗೌಡಾ ಚಿಕ್ಕೋಡಿ (ಬೆಳ್ಳಿ), ಶಿವಾಜಿ ಆರ್.ಜಿ. ಧಾರವಾಡ, ಶ್ಯಾಮ ಪೆಟೋಲಿ ಅಳ್ನಾವರ (ಕಂಚು). 45 ಕೆ.ಜಿ.ವಿಭಾಗ: ಮೋಹನರಾಜ ದಾವಣಗೆರೆ (ಬಂಗಾರ), ಶುಭಂ ಗೌಡಾ ಹಳಿಯಾಳ (ಬೆಳ್ಳ), ದೀಪ ಹಿಪ್ಪರಗಿ ರಬಕವಿ, ಹನುಮಂತ ತುಗಲ ಬಾಗಲಕೋಟೆ (ಕಂಚು).

48 ಕೆ.ಜಿ.ವಿಭಾಗ:ವರುಣ ಕುಂಕಾಳೆ ಹಳಿಯಾಳ (ಬಂಗಾರ), ಪ್ರಜ್ವಲ ಪಾಟೀಲ ಬೆಳಗಾವಿ (ಬೆಳ್ಳಿ), ಕೀರ್ತನ ಡಿ.ಸಿ. ದಾವಣಗೆರೆ, ಯುವರಾಜ ಪಾಟೀಲ ಮುರ್ಕವಾಡ (ಕಂಚು).

‘ಅದಾನಿ’ ಸಮಸ್ಯೆ ಕಂಪನಿಗೆ ಸಂಬಂಧಿಸಿದ್ದು: ನಿರ್ಮಲಾ

ನವದೆಹಲಿ (ಪಿಟಿಐ): ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿಯ ನಂತರ ಅದಾನಿ ಸಮೂಹದ ಷೇರುಗಳಲ್ಲಿ ಆಗಿರುವ ಕುಸಿತವು ನಿರ್ದಿಷ್ಟವಾಗಿ ಕಂಪನಿಯ ಸಮಸ್ಯೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಹೇಳಿದ್ದಾರೆ.

ಷೇರುಪೇಟೆಯನ್ನು ಸ್ಥಿರವಾಗಿ ಇರುವಂತೆ ಮಾಡಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮತ್ತು ಆರ್‌ಬಿಐ ಸದಾ ಸಿದ್ಧವಾಗಿರಬೇಕು ಎಂದು ನಿರ್ಮಲಾ ಹೇಳಿದ್ದಾರೆ.

‘ಮಾರುಕಟ್ಟೆಯಲ್ಲಿ ಆಗಾಗ್ಗೆ ಅನಿರೀಕ್ಷಿತ ಚಲನೆ ಕಂಡುಬರುತ್ತದೆ. ಅದು ಸಣ್ಣ ಅಥವಾ ದೊಡ್ಡ ಮಟ್ಟದಲ್ಲಿ ಇರಬಹುದು. ಆದರೆ, ಇಂತಹ ಪರಿಸ್ಥಿತಿಗಳನ್ನು ನಿರ್ವಹಿಸಲಾಗುತ್ತದೆ. ನಮ್ಮ ನಿಯಂತ್ರಣ ಸಂಸ್ಥೆಗಳು ಈ ವಿಷಯವನ್ನು ಪರಿಶೀಲಿಸುತ್ತಿರುವುದಾಗಿ ನಂಬಿದ್ದೇನೆ’ ಎಂದು ಸುದ್ದಿವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಸಚಿವೆ ನಿರ್ಮಲಾ ತಿಳಿಸಿದ್ದಾರೆ.

ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳು ಯಾವುದೇ ಒಂದು ಕಂಪನಿಯಲ್ಲಿ ಅತಿಯಾಗಿ ಹೂಡಿಕೆ ಮಾಡಿಲ್ಲ. ಅದಾನಿ ಸಮೂಹಕ್ಕೆ ನೀಡಿರುವ ಸಾಲ ಮತ್ತು ಬಂಡವಾಳದ ಕುರಿತು ಬ್ಯಾಂಕ್‌ಗಳು ಮತ್ತು ವಿಮಾ ಕಂಪನಿಗಳೇ ಸಾರ್ವಜನಿಕವಾಗಿ ಮಾಹಿತಿ ಬಹಿರಂಗಪಡಿಸುತ್ತಿವೆ ಎಂದು ಅವರು ಹೇಳಿದ್ದಾರೆ.

ರೆಪೊ ಶೇ 0.25 ಹೆಚ್ಚಳ ಸಂಭವ



ಮುಂಬೈ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರ ಇಳಿಮುಖವಾಗಿದೆ. ಇದರ ಜೊತೆಗೆ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಹೆಚ್ಚಳದ ಪ್ರಮಾಣವನ್ನು ಕಡಿಮೆ ಮಾಡಿದೆ. ಹೀಗಾಗಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮುಂಬರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ರೆಪೊ ದರವನ್ನು ಶೇಕಡ 0.25ರಷ್ಟು ಮಾತ್ರವೇ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಸೋಮವಾರದಿಂದ ಬುಧವಾರದವರೆಗೆ ಸಭೆ ಸೇರಲಿದ್ದು, ಸಭೆಯ ನಿರ್ಧಾರಗಳನ್ನು ಬುಧವಾರ ಪ್ರಕಟಿಸಲಿದೆ.

ಡಿಸೆಂಬರ್‌ನಲ್ಲಿ ನಡೆದಿದ್ದ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಆರ್‌ಬಿಐ, ರೆಪೊ ದರವನ್ನು ಶೇ 0.35ರಷ್ಟು ಹೆಚ್ಚಿಸಿತ್ತು. ಅದಕ್ಕೂ ಹಿಂದಿನ ಮೂರು ಬಾರಿ ತಲಾ ಶೇ 0.50ರಷ್ಟು ಹೆಚ್ಚಳ ಮಾಡಿತ್ತು. 2022ರ ಮೇ ತಿಂಗಳಿನಿಂದ ಡಿಸೆಂಬರ್‌ವರೆಗೆ ಒಟ್ಟು ರೆಪೊ ದರವನ್ನು ಶೇ 2.25ರಷ್ಟು ಹೆಚ್ಚಿಸಲಾಗಿದೆ. ಚಿಲ್ಲರೆ ಹಣದುಬ್ಬರ ದರವು ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಶೇ 6ಕ್ಕಿಂತ ಕೆಳಕ್ಕೆ ಇಳಿಕೆ ಆಗಿದೆ.

ಸಂಕ್ಷಿಪ್ತ ಸುದ್ದಿ

ರಾಮ್‌ದೇವ್ ವಿರುದ್ಧ ಎಫ್‌ಐಆರ್

ಬರ್ಮರ್ (ಪಿಟಿಐ): ರಾಜಸ್ಥಾನದ ಬರ್ಮರ್ ಜಿಲ್ಲೆಯಲ್ಲಿ ನಡೆದ ಸನ್ಯಾಸಿಗಳ ಸಭೆಯಲ್ಲಿ ದ್ವೇಷ ಉತ್ತೇಜಿಸುವ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿರುವ ಆರೋಪದ ಮೇಲೆ ಯೋಗ ಗುರು ರಾಮ್‌ದೇವ್ ವಿರುದ್ಧ ಭಾನುವಾರ ಎಫ್‌ಐಆರ್ ದಾಖಲಾಗಿದೆ.

ಸ್ಥಳೀಯ ನಿವಾಸಿ ಪಥಾಯಿ ಖಾನ್ ಎಂಬುವವರು ನೀಡಿರುವ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಾಗಿದೆ. ‘ಮುಸ್ಲಿಮರು ಭಯೋತ್ಪಾದನೆಯನ್ನು ಆಶ್ರಯಿಸಿದ್ದಾರೆ ಮತ್ತು ಹಿಂದೂ ಮಹಿಳೆಯರನ್ನು ಅಪಹರಿಸುತ್ತಾರೆ’ ಎಂದು ರಾಮ್‌ದೇವ್ ಅವರು ಸಭೆಯಲ್ಲಿ ಆರೋಪಿಸಿದ್ದರು.

ಬಂಗಾಳ ಬಿಜೆಪಿ ಶಾಸಕ ಟಿಎಂಸಿಗೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಿಜೆಪಿ ಶಾಸಕ ಸುಮನ್ ಕಾಂಜೀಲಾಲ್ ಅವರು ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ (ಟಿಎಂಸಿ) ಭಾನುವಾರ ಇಲ್ಲಿ ಸೇರ್ಪಡೆಗೊಂಡರು.

‘ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು ಪಕ್ಷದ ಧ್ವಜವನ್ನು ಹಸ್ತಾಂತರಿಸುವ ಮೂಲಕ ಬರಮಾಡಿಕೊಂಡರು’ ಎಂದು ಟಿಎಂಸಿ ಹೇಳಿಕೆ ನೀಡಿದೆ.

ಬಾಂಬ್ ಸ್ಫೋಟ: ಟಿಎಂಸಿ ಕಾರ್ಯಕರ್ತ ಸಾವು

ಕೋಲ್ಕತ್ತ: ಬಿರ್‌ಭೂಮ್ ಜಿಲ್ಲೆಯ ಮಾರ್ಗಮ್‌ನಲ್ಲಿ ಭಾನುವಾರ ನಡೆದ ಬಾಂಬ್ ಸ್ಫೋಟದಲ್ಲಿ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಕಾರ್ಯಕರ್ತರೊಬ್ಬರು ಮೃತಪಟ್ಟಿದ್ದು, ಆಡಳಿತಾರೂಢ ಪಕ್ಷದ ಪಂಚಾಯಿತಿ ಮುಖ್ಯಸ್ಥರೊಬ್ಬರ ಸಹೋದರ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೃತ ವ್ಯಕ್ತಿಯನ್ನು ನ್ಯೂಟನ್ ಶೇಖ್ ಎಂದು ಗುರುತಿಸಲಾಗಿದೆ. ಲಾಲ್ತು ಶೇಖ್ ಎಂಬುವವರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ವಿವರಿಸಿದ್ದಾರೆ. ಸ್ಫೋಟಕ್ಕೆ ಕಾಂಗ್ರೆಸ್ ಪಕ್ಷದ ಬೆಂಬಲಿಗರೇ ಹೊಣೆಗಾರರು ಎಂದು ನ್ಯೂಟನ್ ಸಂಬಂಧಿಕರು ಆರೋಪಿಸಿದ್ದಾರೆ.

‘ಮಾರ್ಗಮ್‌ನಲ್ಲಿ ನಮ್ಮ ಪಕ್ಷ ಪ್ರಬಲವಾಗಿಲ್ಲ. ಬೆಂಬಲಿಗರು ಯಾವುದೇ ರೀತಿಯ ದಾಳಿಯಲ್ಲಿ ಭಾಗಿಯಾಗಲು ಸಾಧ್ಯವಿಲ್ಲ’ ಎಂದು ಪಶ್ಚಿಮ ಬಂಗಾಳದ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ.

ಪಟ್ನಾ: ಜೂನ್‌ನಲ್ಲಿ ಜಿ–20 ಸಭೆ

ನವದೆಹಲಿ (ಪಿಟಿಐ): ಪಟ್ನಾದಲ್ಲಿ ಜಿ–20ರ ಸಭೆಯು ಜೂನ್‌ನಲ್ಲಿ ನಡೆಯಲಿದೆ ಎಂದು ಬಿಹಾರ ಸರ್ಕಾರ ಹೇಳಿದೆ. ‘ಜಿ–20ರ ಸಭೆಯನ್ನು ಮಾರ್ಚ್ ಮೊದಲ ವಾರದಲ್ಲಿ ನಡೆಸಲು ಈ ಹಿಂದೆ ತೀರ್ಮಾನಿಸಲಾಗಿತ್ತು. ಇದೀಗ ಈ ದಿನಾಂಕವನ್ನು ಜೂನ್‌ಗೆ ಮುಂದೂಡಲಾಗಿದೆ’ ಎಂದೂ ತಿಳಿಸಿದೆ.

ದೇಶಾದ್ಯಂತ 55 ಸ್ಥಳಗಳಲ್ಲಿ 200ಕ್ಕೂ ಹೆಚ್ಚು ಸಭೆಗಳನ್ನು ಆಯೋಜಿಸಲು ತೀರ್ಮಾನಿಸಲಾಗಿದೆ.

ಅಲ್ಪಾವಧಿ ಹೂಡಿಕೆಗೆ ‘ಮಹಿಳಾ ಸಮ್ಮಾನ್’



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಯಾವುದೇ ಹೂಡಿಕೆ ಉತ್ತಮ ಎನ್ನಲು ಎರಡು ಅಂಶಗಳು ಬಹಳ ಮುಖ್ಯ. ಒಂದನೆಯದ್ದು ಹೂಡಿಕೆಯ ಸುರಕ್ಷತೆ, ಎರಡನೆಯದ್ದು ಲಾಭಾಂಶ. ಈ ಎರಡೂ ಅಂಶಗಳನ್ನು ಒಳಗೊಂಡಿರುವ ಜೊತೆಗೆ ಸುಲಭವಾಗಿ ನಗದೀಕರಣಕ್ಕೂ ಅವಕಾಶವಿರುವ ಹೂಡಿಕೆ ಆಯ್ಕೆಯೊಂದನ್ನು ಕೇಂದ್ರ ಸರ್ಕಾರವು ಮಹಿಳೆಯರಿಗಾಗಿ ಬಜೆಟ್ ಮೂಲಕ ಪ್ರಕಟಿಸಿದೆ. ಅದೇ ಮಹಿಳಾ ಸಮ್ಮಾನ್ ಉಳಿತಾಯ ಪತ್ರ. ಏನಿದರ ವೈಶಿಷ್ಟ್ಯ ಎಂಬುದನ್ನು ತಿಳಿಯೋಣ.

ಮಹಿಳಾ ಸಮ್ಮಾನ್ ಉಳಿತಾಯ ಪತ್ರ: ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಸುರಕ್ಷಿತವಾಗಿ ಹೂಡಿಕೆ ಮಾಡಲು ಅನುವಾಗುವಂತೆ 2023–24ನೆಯ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಮಹಿಳಾ ಸಮ್ಮಾನ್ ಉಳಿತಾಯ ಪತ್ರ (ಎಂಎಸ್‌ಎಸ್‌ಸಿ) ಯೋಜನೆಯನ್ನು ಪ್ರಕಟಿಸಲಾಗಿದೆ. ಈ ವರ್ಷದ ಏಪ್ರಿಲ್‌ನಿಂದ 2025ರ ಮಾರ್ಚ್‌ವರೆಗೆ ಈ ಯೋಜನೆ ಚಾಲ್ತಿಯಲ್ಲಿ ಇರಲಿದೆ.

ಶೇಕಡ 7.5ರ ಬಡ್ಡಿ ಲಾಭಾಂಶ ಖಾತ್ರಿ ನೀಡುವ ಈ ಯೋಜನೆಯಲ್ಲಿ ಎರಡು ವರ್ಷಗಳ ಅವಧಿಗೆ ₹ 2 ಲಕ್ಷ ಹೂಡಿಕೆ ಮಾಡಬೇಕಾಗುತ್ತದೆ. ಅಗತ್ಯಬಿದ್ದಾಗ ಅವಧಿಗೆ ಮುನ್ನ ಹಣವನ್ನು ಭಾಗಶಃ ಹಿಂಪಡೆದುಕೊಳ್ಳಲು ಮಹಿಳಾ ಸಮ್ಮಾನ್ ಉಳಿತಾಯ ಪತ್ರ ಯೋಜನೆ ಅವಕಾಶ ಕಲ್ಪಿಸುತ್ತದೆ. ಆದರೆ ಹೂಡಿಕೆ ಮಾಡಿದವರಿಗೆ ಯಾವುದೇ ತೆರಿಗೆ ಅನುಕೂಲ ಸಿಗುವುದಿಲ್ಲ.

ನೀವು ಮಹಿಳಾ ಸಮ್ಮಾನ್ ಉಳಿತಾಯ ಪತ್ರದಲ್ಲಿ ₹ 2 ಲಕ್ಷ ಹೂಡಿಕೆ ಮಾಡಿದರೆ, ಮೊದಲ ವರ್ಷ ₹ 15,000 ಬಡ್ಡಿ ಮತ್ತು ಎರಡನೇ ವರ್ಷ ₹ 16,125 ಬಡ್ಡಿ ಲಾಭ ಸಿಗುತ್ತದೆ. ಇದರಿಂದಾಗಿ ಎರಡು ವರ್ಷಗಳಲ್ಲಿ ನಿಮ್ಮ ₹ 2 ಲಕ್ಷ ಹೂಡಿಕೆ ಮೊತ್ತವು ₹ 2.31 ಲಕ್ಷವಾಗುತ್ತದೆ. (ಪಟ್ಟಿಯನ್ನು ಗಮನಿಸಿ.)

ಮಹಿಳಾ ಸಮ್ಮಾನ್ ಹೂಡಿಕೆ ಪತ್ರದಿಂದ ಸಿಗುವ ಲಾಭವೆಷ್ಟು?

ಅಸಲು ಹೂಡಿಕೆ ಮೊತ್ತ	₹2 ಲಕ್ಷ
1ನೇ ವರ್ಷ ಸಿಗುವ ಬಡ್ಡಿ ಲಾಭ (ಶೇ7.5)	₹15,000
2ನೇ ವರ್ಷ ಸಿಗುವ ಬಡ್ಡಿ ಲಾಭ (ಶೇ7.5)	₹16,125
ಸಿಗುವ ಒಟ್ಟು ಮೊತ್ತ	₹2,31,125

(ಸೂಚನೆ: ವಾರ್ಷಿಕ ಚಕ್ರಬಡ್ಡಿ ಆಧಾರದಲ್ಲಿ ಲೆಕ್ಕ ಮಾಡಲಾಗಿದೆ)

ಸುಕನ್ಯಾ ಸಮೃದ್ಧಿ ಜೊತೆ ಹೋಲಿಕೆ: ಹೆಣ್ಣು ಮಕ್ಕಳಿಗಾಗಿ ಈಗಾಗಲೇ ಸುಕನ್ಯಾ ಸಮೃದ್ಧಿ ಯೋಜನೆ ಜಾರಿಯಲ್ಲಿದೆ. 10 ವರ್ಷ ವಯಸ್ಸಿನೊಳಗಿನ ಹೆಣ್ಣು ಮಕ್ಕಳ ಹೆಸರಿನಲ್ಲಿ ಈ ಖಾತೆ ತೆರೆಯಬಹುದಾಗಿದ್ದು ಅವರಿಗೆ 21 ವರ್ಷ ವಯಸ್ಸಾದ ನಂತರ ಯೋಜನೆಯ ಹಣ ಮೆಚ್ಯೂರಿಟಿಗೆ ಬರುತ್ತದೆ. ಹಣದ ಅಗತ್ಯವಿದೆ ಎಂದಾಗ ಈ ಯೋಜನೆಯಲ್ಲಿ ನಗದೀಕರಣ ಕಷ್ಟ. ಹೆಣ್ಣು ಮಗುವಿಗೆ 18 ವರ್ಷ ತುಂಬಿದ ಬಳಿಕವಷ್ಟೇ ಶಿಕ್ಷಣದ ಉದ್ದೇಶಕ್ಕಾಗಿ ಶೇ 50ರಷ್ಟು ಹಣ ಹಿಂಪಡೆಯಬಹುದು. ಪೂರ್ತಿ ಹಣ ಪಡೆಯಲು ಮೆಚ್ಯೂರಿಟಿ ಅವಧಿ ಪೂರೈಸಬೇಕು.

ಆದರೆ ಮಹಿಳಾ ಸಮ್ಮಾನ್ ಉಳಿತಾಯ ಪತ್ರ ಯೋಜನೆಯಲ್ಲಿ ಬೇಕೆಂದಾಗ ಹಣ ಪಡೆದುಕೊಳ್ಳುವ ಅವಕಾಶವಿದೆ. ಹೂಡಿಕೆಗೆ ವಯಸ್ಸಿನ ಮಿತಿಯಿಲ್ಲ. ಇನ್ನು, ಹೂಡಿಕೆ ಅವಧಿ 2 ವರ್ಷ ಮಾತ್ರ ಆಗಿರುವುದರಿಂದ ಹೂಡಿಕೆದಾರರಿಗೆ ಕಷ್ಟವೆನಿಸುವುದಿಲ್ಲ. ಬಡ್ಡಿ ವಿಚಾರಕ್ಕೆ ಬಂದರೆ, ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಶೇ 7.6ರಷ್ಟು ಬಡ್ಡಿ ಸಿಗುತ್ತದೆ, ಮಹಿಳಾ ಸಮ್ಮಾನ್ ಉಳಿತಾಯ ಪತ್ರ ಯೋಜನೆಯಲ್ಲಿ ಶೇ 7.5ರಷ್ಟು ಬಡ್ಡಿ ಲಾಭ ಸಿಗುತ್ತದೆ.

ಅಲ್ಪಾವಧಿ ಹೂಡಿಕೆಯ ಉದ್ದೇಶ ಇರುವವರಿಗೆ ಮಹಿಳಾ ಸಮ್ಮಾನ್ ಉತ್ತಮವಾಗಿದೆ. ದೀರ್ಘಾವಧಿ ಹೂಡಿಕೆಗೆ ಸುಕನ್ಯಾ ಸಮೃದ್ಧಿ ಒಂದು ಒಳ್ಳೆಯ ಆಯ್ಕೆ.

ನಿಶ್ಚಿತ ಠೇವಣಿಗೆ (ಎಫ್.ಡಿ) ಹೋಲಿಸಿದರೆ ಮಹಿಳಾ ಸಮ್ಮಾನ್ ಯೋಜನೆಯು ಹೂಡಿಕೆ ಆಯ್ಕೆ ಅನಿಸಿಕೊಳ್ಳುತ್ತದೆ. ಈಗಿನ ಸಂದರ್ಭದಲ್ಲಿ ನಿಶ್ಚಿತ ಠೇವಣಿಗಳಲ್ಲಿ ಬ್ಯಾಂಕುಗಳು ಗರಿಷ್ಠ ಶೇ 7ರಿಂದ ಶೇ 7.25ರಷ್ಟು ಬಡ್ಡಿ ನಿಗದಿ ಮಾಡುತ್ತಿವೆ. ಆದರೆ ಮಹಿಳಾ ಸಮ್ಮಾನ್ ಯೋಜನೆಯಲ್ಲಿ ಶೇ 7.50ರಷ್ಟು ಬಡ್ಡಿ ಲಾಭ ಲಭಿಸುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಬಜೆಟ್ ವಾರದಲ್ಲಿ ಜಿಗಿದ ಷೇರುಪೇಟೆ

ಫೆಬ್ರುವರಿ 3ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 60,841 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.54ರಷ್ಟು ಗಳಿಕೆ ಕಂಡಿದೆ. 17,854 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.41ರಷ್ಟು ಜಿಗಿದಿದೆ. ಕೇಂದ್ರ ಬಜೆಟ್ ಘೋಷಣೆಗಳು, ಅದಾನಿ ಸಮೂಹ ಎದುರಿಸುತ್ತಿರುವ ಆರೋಪ, ಕಂಪನಿಗಳ ತ್ರೈಮಾಸಿಕ ಸಾಧನೆಯಲ್ಲಿ ಮಿಶ್ರ ಫಲಿತಾಂಶ, ಅಮೆರಿಕ ಫೆಡರಲ್ ಬ್ಯಾಂಕ್, ಯೂರೋಪಿಯನ್ ಸೆಂಟ್ರಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ಬಡ್ಡಿ ದರ ಹೆಚ್ಚಳ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಸೂಚ್ಯಂಕ ಶೇ 3.5ರಷ್ಟು, ನಿಫ್ಟಿ ಕನ್ಸ್ಯೂಮರ್ ಡೂರಬಲ್ಸ್ ಸೂಚ್ಯಂಕ ಶೇ 3.3ರಷ್ಟು, ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 2.86ರಷ್ಟು ಮತ್ತು ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 2.79ರಷ್ಟು ಜಿಗಿದಿವೆ. ನಿಫ್ಟಿ ಅನಿಲ ಮತ್ತು ತೈಲ ಸೂಚ್ಯಂಕ ಶೇ 9ರಷ್ಟು, ಲೋಹ ಸೂಚ್ಯಂಕ ಶೇ 7.6ರಷ್ಟು ಮತ್ತು ಎನರ್ಜಿ ಸೂಚ್ಯಂಕ ಶೇ 6.3ರಷ್ಟು ಕುಸಿದಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹ 14,445.02 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 14,184.51 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ನೈಕಾ, ಶ್ರೀ ಸಿಮೆಂಟ್ಸ್, ಐಟಿಸಿ, ಎಸ್‌ಬಿಐ ಕಾರ್ಡ್ಸ್ ಆ್ಯಂಡ್ ಪೇಮೆಂಟ್ಸ್, ಅಲ್ಟ್ರಾ ಟೆಕ್ ಸಿಮೆಂಟ್, ಐಸಿಐಸಿಐ ಬ್ಯಾಂಕ್, ಟೈಟನ್, ಬ್ರಿಟಾನಿಯಾ ಇಂಡಸ್ಟ್ರೀಸ್, ಇನ್ಫೊಸಿಸ್ ಮತ್ತು ಮಹಿಂದ್ರ ಆ್ಯಂಡ್ ಮಹಿಂದ್ರ ಶೇ 5ರಿಂದ ಶೇ 12ರಷ್ಟು ಜಿಗಿದಿವೆ. ಅದಾನಿ ಟೋಟಲ್ ಗ್ಯಾಸ್, ಅದಾನಿ ಎಂಟರ್‌ಪ್ರೈಸಸ್, ಅದಾನಿ ಗ್ರೀನ್ ಎನರ್ಜಿ, ಅದಾನಿ ಟ್ರಾನ್ಸ್‌ಮಿಷನ್, ಅದಾನಿ ವಿಲ್ಮರ್, ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಕಂಪನಿ, ಡಿವೀಸ್ ಲ್ಯಾಬೊರೇಟರೀಸ್ ಮತ್ತು ಐಸಿಐಸಿಐ ಪ್ರೂಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ ಶೇ 10ರಿಂದ ಶೇ 45ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ಎನ್‌ಡಿಟಿವಿ, ಎನ್‌ಸಿಸಿ, ಹೋಂಡಾ ಪವರ್, ಜೆಟ್ ಏರ್‌ವೇಸ್, ಎಂಆರ್‌ಎಫ್, ಲುಪಿನ್, ಏರ್‌ಟೆಲ್, ಬಾರ್ಬಿಕ್ಯೂ ನೇಷನ್, ಅದಾನಿ ಪವರ್, ಅದಾನಿ ಗ್ರೀನ್, ಅದಾನಿ ಪೋರ್ಟ್ಸ್, ಟಿವಿಎಸ್ ಪೆಟ್ರೋ, ಟಾಟಾ ಸ್ಟೀಲ್, ಬಾಂಬೆ ಡೈಯಿಂಗ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಫೆಬ್ರುವರಿ 6ರಿಂದ 8ರವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದ್ದು ಬಡ್ಡಿ ದರ ಹೆಚ್ಚಳದ ಬಗ್ಗೆ ತೀರ್ಮಾನ ಹೊರಬೀಳುವ ಸಾಧ್ಯತೆ ಇದೆ. ಜಾಗತಿಕ ವಿದ್ಯಮಾನಗಳ ಜೊತೆ ದೇಶಿ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.



‘ಮೂಗಿನ ಮೂಲಕ ನೀಡುವ ಲಸಿಕೆ ಆಸ್ಪತ್ರೆಗೆ’

ನವದೆಹಲಿ (ಪಿಟಿಐ): ಮೂಗಿನ ಮೂಲಕ ನೀಡಲಾಗುವ ಕೋವಿಡ್–19 ಲಸಿಕೆಯ 3 ಲಕ್ಷ ಡೋಸ್‌ಗಳನ್ನು ಎರಡು ದಿನಗಳ ಹಿಂದೆ ಕೆಲ ಆಸ್ಪತ್ರೆಗಳಿಗೆ ಕಳಿಸಲಾಗಿದೆ ಎಂದು ಭಾರತ್ ಬಯೋಟೆಕ್ ಸಂಸ್ಥೆ ಭಾನುವಾರ ತಿಳಿಸಿದೆ.

ಬೆಂಗಳೂರಿನಲ್ಲಿ ‘ಯುಡಬ್ಲ್ಯು–ಮ್ಯಾಡಿಸನ್ ಒನ್ ಹೆಲ್ತ್ ಸೆಂಟರ್’ ಸ್ಥಾಪಿಸುವ ನಿಟ್ಟಿನಲ್ಲಿ ಯುನಿವರ್ಸಿಟಿ ಆಫ್ ವಿಸ್ಕೋಂಸಿನ್ (ಯುಡಬ್ಲ್ಯು)–ಮ್ಯಾಡಿಸನ್ ಗ್ಲೋಬಲ್ ಹೆಲ್ತ್ ಇನ್‌ಸ್ಟಿಟ್ಯೂಟ್ (ಜಿಎಚ್‌ಐ) ಮತ್ತು ಎಲ್ಲಾ ಫೌಂಡೇಷನ್ ಸಂಸ್ಥೆಗಳು ಒಪ್ಪಂದಕ್ಕೆ ಸಹಿ ಹಾಕಿದವು. ಈ ಹಿನ್ನೆಲೆಯಲ್ಲಿ ಏರ್ಪಡಾಗಿದ್ದ ಕಾರ್ಯಕ್ರಮದ ವೇಳೆ ಭಾರತ್ ಬಯೋಟೆಕ್‌ನ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ ಎಲ್ಲಾ ಈ ಮಾಹಿತಿ ನೀಡಿದರು.

ಈ ಲಸಿಕೆಯನ್ನು ರಫ್ತು ಮಾಡಲಾಗುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕೆಲವು ದೇಶಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಲಸಿಕೆಗಾಗಿ ಭಾರತ್ ಬಯೋಟೆಕ್ ಸಂಸ್ಥೆ ಎದುರು ಪ್ರಸ್ತಾಪ ಇರಿಸಿವೆ ಎಂದು ಹೇಳಿದರು.



ದೇಶದ ಔಷಧಗಳಲ್ಲಿ ‘ಒಂದೇ ಗುಣಮಟ್ಟ, ಮಾನದಂಡ’ ಕಾಯ್ದುಕೊಳ್ಳಬೇಕೆಂದರೆ, ರಾಜ್ಯ ಸರ್ಕಾರಗಳ ಅಡಿಯಿರುವ ಎಲ್ಲಾ ಔಷಧ ನಿಯಂತ್ರಣ ಸಂಸ್ಥೆಗಳನ್ನು ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಸಿಎಸ್‌ಒ) ಜೊತೆ ವಿಲೀನ ಮಾಡಬೇಕು ಎಂದು ಕೃಷ್ಣ ಅವರು ಸಲಹೆ ನೀಡಿದರು.

ಮೂಗಿನ ಮೂಲಕ ನೀಡುವ ಜಗತ್ತಿನ ಪ್ರಥಮ ಕೋವಿಡ್ ಲಸಿಕೆ ‘ಇನ್‌ಕೊವ್ಯಾಕ್’ಅನ್ನು ಜನವರಿ 26ರಂದು ಪರಿಚಯಿಸಲಾಯಿತು. ಈ ಲಸಿಕೆ ‘ಕೋವಿನ್’ ಆನ್‌ಲೈನ್ ವೇದಿಕೆಯಲ್ಲಿ ಲಭ್ಯವಿದೆ. ಖಾಸಗಿ ಮಾರುಕಟ್ಟೆಯಲ್ಲಿ ಒಂದು ಡೋಸ್ ದರ ₹ 800 ಇದ್ದು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ₹ 325ಗೆ ಮಾರಾಟವಾಗುತ್ತಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹465
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹465

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹465-680

ದ್ವಿತಳಿ (ಬಿ.ವಿ)
₹567-801

ಒಳಾಂಗಣ ಕೂಟ: ಡೊನಾಲ್ಡ್ ಥಾಮಸ್ ಸ್ಪರ್ಧೆ ಮೀರಿದ ಭಾರತದ ಅಥ್ಲೀಟ್

ಬೋಸ್ಟನ್‌ನಲ್ಲಿ ತೇಜಸ್ವಿನ್‌ಗೆ ಚಿನ್ನ

ಬೋಸ್ಟನ್ (ಪಿಟಿಐ): ಭಾರತದ ಅಥ್ಲೀಟ್ ತೇಜಸ್ವಿನ್ ಶಂಕರ್ ನ್ಯೂ ಬ್ಯಾಲೆನ್ಸ್ ಇಂಡೋರ್ ಗ್ರ್ಯಾನ್‌ಪ್ರೀ ಅಥ್ಲೆಟಿಕ್ ಕೂಟದ ಹೈಜಂಪ್‌ನಲ್ಲಿ ಚಿನ್ನದ ಪದಕ ಗೆದ್ದರು.

24 ವರ್ಷದ ತೇಜಸ್ವಿನ್ ಅವರು ಇಲ್ಲಿ ಕಠಿಣ ಪೈಪೋಟಿ ಎದುರಿಸಿ ಗೆದ್ದರು. 2.26 ಮೀಟರ್ಸ್ ಎತ್ತರಕ್ಕೆ ಜಿಗಿದರು. ಮಾಜಿ ವಿಶ್ವ ಚಾಂಪಿಯನ್ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ, ಬಹಾಮಾಸ್ ದೇಶದ ಡೊನಾಲ್ಡ್ ಥಾಮಸ್ ಅವರು ಒಡ್ಡಿದ ಕಠಿಣ ಸ್ಪರ್ಧೆಯನ್ನು ಮೀರಿ ನಿಂತರು. 38 ವರ್ಷದ ಥಾಮಸ್ 2.23 ಮೀಟರ್ಸ್ ಎತ್ತರಕ್ಕೆ ಜಿಗಿದು ಎರಡನೇ ಸ್ಥಾನ ಪಡೆದರು. ಅಮೆರಿಕದ ಡ್ಯಾರಿಲ್ ಸುಲೈವನ್ (2.19ಮೀ) ಮೂರನೇ ಸ್ಥಾನ ಗಳಿಸಿದರು.



ತೇಜಸ್ವಿನ್ ಶಂಕರ್ –ಟ್ವಿಟರ್ ಚಿತ್ರ

ಹೋದ ವರ್ಷದ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಗೆದ್ದಿದ್ದ ತೇಜಸ್ವಿನ್ ಅವರಿಗೆ ಗ್ಯಾಲರಿಯಲ್ಲಿದ್ದ ಪ್ರೇಕ್ಷಕರು ಹುರಿದುಂಬಿಸಿದರು. ಅವರು ತಮ್ಮ ಮೊದಲ ನಾಲ್ಕು ಪ್ರಯತ್ನಗಳಲ್ಲಿ (2,14, 2.19, 2.23 ಮತ್ತು 2.26 ಮೀ) ಸಫಲರಾದರು.

ತಮ್ಮ ವೈಯಕ್ತಿಕ ಶ್ರೇಷ್ಠ ಮಟ್ಟವನ್ನು (2.29 ಮೀ) ದಾಟಲು ಅವರು ಮೂರು ಪ್ರಯತ್ನಗಳನ್ನು ತೆಗೆದುಕೊಂಡರು. ಆದರೆ 2.30 ಮೀಟರ್ಸ್ ದಾಟುವಲ್ಲಿ ವಿಫಲರಾದರು. ಒಳಾಂಗಣ ಕೂಟಗಳಲ್ಲಿ ಅವರ ಶ್ರೇಷ್ಠ ಸಾಧನೆಯು 2.28 ಮೀಟರ್ಸ್ ಆಗಿತ್ತು. 2018ರಲ್ಲಿ ಅವರು ಈ ಸಾಧನೆ ಮಾಡಿದ್ದರು. ಹೋದ ವರ್ಷ ಕನ್ಸಾಸ್‌ನಲ್ಲಿ ನಡೆದಿದ್ದ ಎನ್‌ಸಿಎಎ ಪ್ರಶಸ್ತಿಯನ್ನೂ ಜಯಿಸಿದ್ದರು.

ಚಿನ್ನ ಪದಕ ಜಯಿಸಿದ ಸಾಧನೆಯ ವಿಡಿಯೊ ತುಣುಕನ್ನು ಟ್ವೀಟ್ ಮಾಡಿರುವ ತೇಜಸ್ವಿನ್, 'ಹೊಸ ವರ್ಷಕ್ಕೆ ಅದ್ಭುತವಾದ ಆರಂಭ ಲಭಿಸಿದೆ. ಅಗ್ರಮಾನ್ಯ ಅಥ್ಲೀಟ್‌ಗಳೊಂದಿಗೆ ಸ್ಪರ್ಧಿಸುತ್ತಿರುವುದು ಪುಳಕ ಮೂಡಿಸಿದೆ' ಎಂದು ಬರೆದಿದ್ದಾರೆ.

ಕಾಂಬ್ಳಿ ವಿರುದ್ಧ ಎಫ್‌ಐಆರ್

ಮುಂಬೈ (ಪಿಟಿಐ): ಪತ್ನಿ ಮೇಲೆ ಹಲ್ಲೆ ನಡೆಸಿ, ನಿಂದಿಸಿದ ಆರೋಪದಡಿ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವಿನೋದ್ ಕಾಂಬ್ಳಿ ವಿರುದ್ಧ ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.



ಕಾಂಬ್ಳಿ

ಪತ್ನಿ ಆಂಡ್ರಿಯಾ ಅವರ ದೂರಿನಂತೆ ಐಪಿಸಿ ಸೆಕ್ಷನ್ 324 (ಅಪಾಯಕಾರಿ ಆಯುಧದಿಂದ ಹಲ್ಲೆ) ಮತ್ತು 504ರ (ಉದ್ದೇಶಪೂರ್ವಕವಾಗಿ ಅಪಮಾನ ಮಾಡುವುದು) ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಘಟನೆಗೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸಿಲ್ಲ.

ಕುಕಿಂಗ್ ಪ್ಯಾನ್‌ವೊಂದರ ಹಿಡಿಕೆಯನ್ನು ಎಸೆದ ಕಾರಣ ತಲೆಗೆ ಗಾಯವಾಗಿದೆ ಎಂದು ಆಂಡ್ರಿಯಾ ಅವರು ದೂರಿನಲ್ಲಿ ತಿಳಿಸಿದ್ದಾರೆ.

'ಶುಕ್ರವಾರ ಮಧ್ಯಾಹ್ನ 1 ರಿಂದ 1.30ರ ಅವಧಿಯಲ್ಲಿ ಈ ಘಟನೆ ನಡೆದಿದೆ. ಕುಡಿದ ಅಮಲಿನಲ್ಲಿ ಮನೆಗೆ ಬಂದಿದ್ದ ಕಾಂಬ್ಳಿ ಅವರು, ಪತ್ನಿಯನ್ನು ನಿಂದಿಸಿದ್ದಾರೆ. ಈ ವೇಳೆ ಮನೆಯಲ್ಲಿದ್ದ 12 ವರ್ಷದ ಮಗ ಮಧ್ಯಪ್ರವೇಶಿಸಿ ಜಗಳ ನಿಲ್ಲಿಸಲು ಮುಂದಾಗಿದ್ದಾನೆ. ಆದರೆ ಅಡುಗೆ ಮನೆಗೆ ತೆರಳಿದ ಕಾಂಬ್ಳಿ, ಪ್ಯಾನ್‌ವೊಂದರ ಮುರಿದುಬಿದ್ದ ಹಿಡಿಕೆ ತಂದು ತಲೆಗೆ ಎಸೆದದ್ದಾಗಿ ದೂರಿನಲ್ಲಿ ಆರೋಪಿಸಲಾಗಿದೆ' ಎಂದು ಅಧಿಕಾರಿ ಹೇಳಿದರು.

ಕಳೆದ ವರ್ಷ ಫೆಬ್ರುವರಿ ತಿಂಗಳಲ್ಲಿ ಬಾಂದ್ರಾದಲ್ಲಿರುವ ವಸತಿ ಸಂಕೀರ್ಣವೊಂದರ ಗೇಟ್‌ಗೆ ಕಾರು ಗುದ್ದಿಸಿದ್ದ ಪ್ರಕರಣದಲ್ಲಿ ಕಾಂಬ್ಳಿ ಅವರನ್ನು ಬಂಧಿಸಲಾಗಿತ್ತು. ಆ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ಟಿಟಿ: ಆಕಾಶ್, ಯಶಸ್ವಿನಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಜೆ. ಆಕಾಶ್ ಮತ್ತು ಯಶಸ್ವಿನಿ ಘೋರ್ಪಡೆ ಅವರು ಚೆನ್ನೈನಲ್ಲಿ ಫೆ.8 ರಿಂದ 16ರ ವರೆಗೆ ನಡೆಯಲಿರುವ 84ನೇ ಜೂನಿಯರ್ ಮತ್ತು ಯೂತ್ ನ್ಯಾಷನಲ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಸವಾಲು ಮುನ್ನಡೆಸಲಿದ್ದಾರೆ.

ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಬಾಲಕ ಮತ್ತು ಬಾಲಕಿಯರ 17 ಹಾಗೂ 19 ವರ್ಷದೊಳಗಿನ ವಿಭಾಗಗಳ ರಾಜ್ಯ ತಂಡವನ್ನು ಭಾನುವಾರ ಪ್ರಕಟಿಸಲಾಯಿತು.

ಕರ್ನಾಟಕ ತಂಡ ಹೀಗಿದೆ: ಜೂನಿಯರ್ (17 ವರ್ಷ): ಬಾಲಕಿಯರು: ದೇಶ್ನಾ ವಂಶಿಕಾ, ಸಹನಾ ಮೂರ್ತಿ, ತೃಪ್ತಿ ಪುರೋಹಿತ್, ಹಿಮಾನ್ವಿ ಚೌಧರಿ

ಬಾಲಕರು: ರೋಹಿತ್ ಶಂಕರ್, ತೇಶುಭ್ ದಿನೇಶ್, ಅಭಿನವ್ ಮೂರ್ತಿ, ವರುಣ್ ಕಶ್ಯಪ್

ಯೂತ್ (19 ವರ್ಷ): ಬಾಲಕಿಯರು: ಯಶಸ್ವಿನಿ ಘೋರ್ಪಡೆ, ಅನರ್ಘ್ಯಾ ಮಂಜುನಾಥ್, ದೇಶ್ನಾ ವಂಶಿಕಾ, ತೃಪ್ತಿ ಪುರೋಹಿತ್.

ಬಾಲಕಿಯರು: ಕೆ.ಜೆ.ಆಕಾಶ್, ರೋಹಿತ್ ಶಂಕರ್, ವರುಣ್ ಕಶ್ಯಪ್, ಅಭಿನವ್ ಮೂರ್ತಿ

ಐಎಸ್‌ಎಲ್: ಬೆಂಗಳೂರು ಎಫ್‌ಸಿಗೆ ಸತತ ಐದನೇ ಜಯ

ಕೋಲ್ಕತ್ತ (ಪಿಟಿಐ): ಜಾವಿ ಹೆರ್ನಾಂಡಿಜ್ ಮತ್ತು ರಾಯ್ ಕೃಷ್ಣ ಅವರ ಗೋಲುಗಳ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯಲ್ಲಿ ಸತತ ಐದನೇ ಗೆಲುವು ಪಡೆದರು.

ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 2–1 ಗೋಲುಗಳಿಂದ ಎಟಿಕೆ ಮೋಹನ್ ಬಾಗನ್ ತಂಡವನ್ನು ಮಣಿಸಿತು. ಕೋಲ್ಕತ್ತದ ತಂಡದ ವಿರುದ್ಧ ಬಿಎಫ್‌ಸಿಗೆ ದೊರೆತ ಮೊದಲ ಜಯ ಇದು.

ಜಾವಿ ಅವರು 77ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರೆ, ರಾಯ್ ಅವರು ಹೆಚ್ಚುವರಿ ಅವಧಿಯ ಮೊದಲ ನಿಮಿಷದಲ್ಲಿ (90 + 1ನೇ ನಿ.) ತಂಡದ ಎರಡನೇ ಗೋಲು ಗಳಿಸಿದರು.

ಇದಾದ ಎರಡು ನಿಮಿಷಗಳ ಬಳಿಕ ದಿಮಿತ್ರಿ ಪೆಟ್ರಟೊಸ್ (90 + 3ನೇ ನಿ.) ಅವರು ಮೋಹನ್ ಬಾಗನ್‌ಗೆ ಗೋಲು ತಂದಿತ್ತರು. ಆದರೆ ಒಂದು ಗೋಲಿನ ಮುನ್ನಡೆ ಕಾಪಾಡಿಕೊಂಡ ಬಿಎಫ್‌ಸಿ, ಸ್ಮರಣೀಯ ಗೆಲುವು ಒಲಿಸಿಕೊಂಡಿತು.



ಜಾವಿ ಮತ್ತು ರಾಯ್ ಕೃಷ್ಣ

ಈ ಜಯದ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿರುವ ಬೆಂಗಳೂರಿನ ತಂಡ ಪ್ಲೇ ಆಫ್ ಪ್ರವೇಶಿಸುವ ಸಾಧ್ಯತೆಯನ್ನು ಹೆಚ್ಚಿಸಿಕೊಂಡಿತು. ಒಟ್ಟು 25 ಪಾಯಿಂಟ್ಸ್ ಹೊಂದಿರುವ ತಂಡ, ಫೆ.11 ರಂದು ಬೆಂಗಳೂರಿನಲ್ಲಿ ನಡೆಯುವ ತನ್ನ ಮುಂದಿನ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್‌ನ ಸವಾಲು ಎದುರಿಸಲಿದೆ.

ಜಗ್ರೆಬ್ ಓಪನ್ ಕುಸ್ತಿ: ಆಶುಗೆ ಕಂಚು

ಜಗ್ರೆಬ್ (ಪಿಟಿಐ): ಭಾರತದ ಆಶು ಅವರು ಜಗ್ರೆಬ್ ಓಪನ್ ರ‍್ಯಾಂಕಿಂಗ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡರು.

ಭಾನುವಾರ ನಡೆದ ಗ್ರೀಕೊ ರೋಮನ್ 67 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಅವರು ಲಿಥುವೇನಿಯದ ಆಡಮ್ಸ್ ಗ್ರಿಗಾಲಿನಸ್ ವಿರುದ್ಧ 5–0 ರಲ್ಲಿ ಜಯಿಸಿದರು. ಈ ಕೂಟದಲ್ಲಿ ಭಾರತಕ್ಕೆ ಲಭಿಸಿದ ಎರಡನೇ ಪದಕ ಇದು. ಅಮನ್ ಸೆಹ್ರಾವತ್ ಅವರು ಪುರುಷರ 57 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದಿದ್ದರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ವಿಜೇತ ಕುಸ್ತಿಪಟು ಆಶು, ಅರ್ಹತಾ ಸುತ್ತಿನಲ್ಲಿ 0–9 ರಲ್ಲಿ ಇರಾನ್‌ನ ರೆಜಾ ಮೆಹ್ದಿ ಅಬ್ಬಾಸಿ ಕೈಯಲ್ಲಿ ಪರಾಭವಗೊಂಡಿದ್ದರು.

ಆ ಬಳಿಕ ನಡೆದ 'ರಿಪೇಜ್' ಸುತ್ತಿನಲ್ಲಿ ಅಮೋಘ ಪ್ರದರ್ಶನ ನೀಡಿ, 8–0 ರಲ್ಲಿ ಹಂಗರಿಯ ಆ್ಯಡಮ್ ಫೊಯ್ಲಿಕ್ ವಿರುದ್ಧವೂ, 9–0 ರಲ್ಲಿ ನಾರ್ವೆಯ ಹಾವರ್ಡ್ ಜರ್ಗೆನ್ಸನ್ ಎದುರೂ ಗೆದ್ದು ಕಂಚಿನ ಪದಕದ ಸುತ್ತಿಗೆ ಅರ್ಹತೆ ಪಡೆದುಕೊಂಡಿದ್ದರು.

ಗ್ರಿಗಾಲಿನಸ್ ವಿರುದ್ಧ ಬಿಗಿಪಟ್ಟುಗಳನ್ನು ಪ್ರದರ್ಶಿಸಿದ ಅವರು ಮೊದಲ ಅವಧಿಯಲ್ಲಿ ಮೂರು ಹಾಗೂ ಎರಡನೇ ಅವಧಿಯಲ್ಲಿ ಎರಡು ಪಾಯಿಂಟ್ಸ್ ಗಿಟ್ಟಿಸಿ ಕಂಚು ತಮ್ಮದಾಗಿಸಿಕೊಂಡರು.

ಕಣದಲ್ಲಿದ್ದ ಭಾರತದ ಇತರ ಕುಸ್ತಿಪಟುಗಳು ನಿರಾಸೆ ಅನುಭವಿಸಿದರು. ಗ್ರೀಕೊ ರೋಮನ್ 63 ಕೆ.ಜಿ. ವಿಭಾಗದ ರಿಪೇಜ್‌ನಲ್ಲಿ ಸಾಗರ್ ಅವರು ಆಸ್ಟ್ರಿಯದ ಅಕೆರ್ ಅಲ್ ಒಬೈದಿ ಕೈಯಲ್ಲಿ ಪರಾಭವಗೊಂಡರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಇರಾನ್‌ನ ಆರಿಫ್ ಹೊಸೇನ್ ಮೊಹಮ್ಮದಿ ಎದುರು ಸೋತಿದ್ದರು. ಮಹಿಳೆಯರ 53 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸುಷ್ಮಾ ಶೊಕೀನ್ ಅವರು ಕೆನಡಾದ ಸಮಂತಾ ಸ್ಟಿವರ್ಟ್ ಎದುರು ಮಣಿದರು. ಭಾರತದ ಕುಸ್ತಿಪಟು ಆರಂಭಿಕ ಸುತ್ತುಗಳಲ್ಲಿ ಫ್ರಾನ್ಸ್‌ನ ತತಿಯಾನ ಪ್ರೊಫತಿಲೊವಾ ಹಾಗೂ ಚೀನಾದ ಯುಹಾಂಗ್ ಜಾಂಗ್ ಅವರನ್ನು ಸೋಲಿಸಿದ್ದರು.

72 ಕೆ.ಜಿ. ವಿಭಾಗದಲ್ಲಿ ರಿತಿಕಾ, 76 ಕೆ.ಜಿ. ವಿಭಾಗದಲ್ಲಿ ಕಿರಣ್ ಅವರು ಸೆಮಿ ಪ್ರವೇಶಿಸಲು ವಿಫಲರಾದರು.



ಶಾರ್ಲೆಟ್ ಎಡ್ವರ್ಡ್ಸ್, ಜೂಲನ್ ಗೋಸ್ವಾಮಿ ಹಾಗೂ ದೇವಿಕಾ ಪಾಲ್ಶಿಕಾರ್

ಮುಂಬೈ ಇಂಡಿಯನ್ಸ್‌ಗೆ ಜೂಲನ್ ಮೆಂಟರ್

ಮುಂಬೈ (ಪಿಟಿಐ): ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರು ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಟೂರ್ನಿಯಲ್ಲಿ ಪಾಲ್ಗೊಳ್ಳುವ ಮುಂಬೈ ಇಂಡಿಯನ್ಸ್ ತಂಡದ ಮೆಂಟರ್ ಹಾಗೂ ಬೌಲಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾರ್ಲೆಟ್ ಎಡ್ವರ್ಡ್ಸ್ ಅವರನ್ನು ಮುಖ್ಯ ಕೋಚ್ ಆಗಿ ನೇಮಿಸಲಾಗಿದೆ.

ಭಾರತ ತಂಡದ ಆಲ್‌ರೌಂಡರ್ ಆಗಿದ್ದ ದೇವಿಕಾ ಪಾಲ್ಶಿಕಾರ್ ಅವರು ಬ್ಯಾಟಿಂಗ್ ಕೋಚ್ ಆಗಿಯೂ, ತೃಪ್ತಿ ಚಂದಗಡ್ಕರ್ ಭಟ್ಟಾಚಾರ್ಯ ಅವರು ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಲಿದ್ದಾರೆ.

ಜೂಲನ್ ಅವರು ಕಳೆದ ವರ್ಷವಷ್ಟೇ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿಯಾಗಿದ್ದರು. ತಮ್ಮ 20 ವರ್ಷಗಳ ಸುದೀರ್ಘ ವೃತ್ತಿಜೀವನದಲ್ಲಿ 350ಕ್ಕೂ ಅಧಿಕ ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ.

ಮಹಿಳಾ ಏಕದಿನ ಕ್ರಿಕೆಟ್‌ನಲ್ಲಿ ಹಾಗೂ ಏಕದಿನ ವಿಶ್ವಕಪ್ ಟೂರ್ನಿಗಳಲ್ಲಿ ಅತ್ಯಧಿಕ ವಿಕೆಟ್ ಪಡೆದ ಬೌಲರ್ ಎಂಬ ಗೌರವವನ್ನು ಅವರು ಹೊಂದಿದ್ದಾರೆ.

43 ವರ್ಷದ ಶಾರ್ಲೆಟ್ ಅವರು ಏಕದಿನ ಮತ್ತು ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಇಂಗ್ಲೆಂಡ್ ತಂಡವನ್ನು ಟ್ರೋಫಿಯತ್ತ ಮುನ್ನಡೆಸಿದ್ದರು. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ತಂಡದ ಕೋಚ್ ಆಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

ಬಲಗೈ ಬ್ಯಾಟರ್ ಮತ್ತು ಲೆಗ್‌ಸ್ಪಿನ್ನರ್ ಆಗಿದ್ದ ದೇವಿಕಾ ಅವರು 2014 ರಿಂದ 2016ರ ವರೆಗಿನ ಅವಧಿಯಲ್ಲಿ ಭಾರತ ತಂಡದ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಆ ಬಳಿಕ ಬಾಂಗ್ಲಾದೇಶ ತಂಡಕ್ಕೂ ಸಹಾಯಕ ಕೋಚ್ ಆಗಿದ್ದರು.

ಹಾಕಿ: ಫೈವ್–ಸಿ ಕ್ಲಬ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುರುಕಿನ ಪ್ರದರ್ಶನ ನೀಡಿದ ಫೈವ್–ಸಿ ಸ್ಪೋರ್ಟ್ಸ್ ಕ್ಲಬ್ ತಂಡದವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಚ್‌ಎ ಸೂಪರ್ ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆಲುವು ಪಡೆದರು.

ಭಾನುವಾರ ನಡೆದ ಪಂದ್ಯದಲ್ಲಿ ಫೈವ್–ಸಿ ತಂಡ 3–0 ಗೋಲುಗಳಿಂದ ಜೆಎಫ್‌ಎಚ್‌ಎ ತಂಡವನ್ನು ಮಣಿಸಿತು. ಆನಂದ್ (12ನೇ ನಿ.), ಅರವಿಂದ್ (26) ಮತ್ತು ಅಬ್ಬಾಸ್ (46) ಅವರು ವಿಜೇತ ತಂಡದ ಪರ ಗೋಲು ಗಳಿಸಿದರು.

ಜೆಎಫ್‌ಎಚ್‌ಎ ತಂಡದವರು ಗೋಲು ಗಳಿಸಲು ನಡೆಸಿದ ಪ್ರಯತ್ನಗಳು ವಿಫಲವಾದವು.

ಪಾಕಿಸ್ತಾನ: ಕ್ರೀಡಾಂಗಣದ ಬಳಿ ಬಾಂಬ್ ಸ್ಫೋಟ

ಕ್ವೆಟ್ಟಾ (ಪಿಟಿಐ): ಬಾಬರ್ ಅಜಂ ಮತ್ತು ಶಾಹಿದ್ ಅಫ್ರಿದಿ ಒಳಗೊಂಡಂತೆ ಪಾಕಿಸ್ತಾನದ ಪ್ರಮುಖ ಕ್ರಿಕೆಟಿಗರು ಇದ್ದಂತಹ ಕ್ರೀಡಾಂಗಣದ ಸಮೀಪ ಬಾಂಬ್ ಸ್ಫೋಟಗೊಂಡ ಘಟನೆ ಭಾನುವಾರ ನಡೆದಿದೆ.

ಪಾಕಿಸ್ತಾನ ಸೂಪರ್ ಲೀಗ್‌ನ (ಪಿಎಸ್‌ಎಲ್) ಪ್ರದರ್ಶನ ಪಂದ್ಯ ನಡೆಯುತ್ತಿದ್ದ ಇಲ್ಲಿನ ನವಾಬ್ ಅಕ್ಬರ್ ಬುಗ್ತಿ ಕ್ರೀಡಾಂಗಣದ ಬಳಿ ಬಾಂಬ್ ಸ್ಫೋಟಗೊಂಡಿದೆ. ಘಟನೆಯಲ್ಲಿ ಐವರು ಗಾಯಗೊಂಡಿದ್ದಾರೆ.

ಬಾಂಬ್ ಸ್ಫೋಟದ ಸುದ್ದಿ ತಿಳಿಯುತ್ತಿದ್ದಂತೆಯೇ ಪಂದ್ಯವನ್ನು ಕೆಲಹೊತ್ತು ಸ್ಥಗಿತಗೊಳಿಸಲಾಯಿತು.

'ಮುನ್ನೆಚ್ಚರಿಕೆ ಕ್ರಮವಾಗಿ ಡ್ರೆಸಿಂಗ್ ಕೊಠಡಿಗೆ ತೆರಳುವಂತೆ ಆಟಗಾರರಿಗೆ ಸೂಚಿಸಲಾಯಿತು. ಪಂದ್ಯವನ್ನು ಕೆಲಹೊತ್ತು ನಿಲ್ಲಿಸಲಾಯಿತು. ಆಟಗಾರರ ಸುರಕ್ಷತೆಯನ್ನು ಖಾತರಿಪಡಿಸಿದ ಬಳಿ ಪಂದ್ಯ ಮುಂದುವರಿಸಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪಿಎಸ್‌ಎಲ್‌ನ ಪಂದ್ಯವನ್ನು ಕ್ವೆಟ್ಟಾದಲ್ಲೂ ಆಯೋಜಿಸಬೇಕು ಎಂಬುದು ಬಲೂಚಿಸ್ತಾನದ ಕ್ರಿಕೆಟ್ ಪ್ರೇಮಿಗಳ ಆಗ್ರಹವಾಗಿದೆ. ಇದರಿಂದ ಪಿಸಿಬಿಯು ಕ್ವೆಟ್ಟಾ ಗ್ಲ್ಯಾಡಿಯೆಟರ್ಸ್ ಮತ್ತು ಪೆಶಾವರ ಝಲ್ಮಿ ತಂಡಗಳ ನಡುವೆ ಇಲ್ಲಿ ಪ್ರದರ್ಶನ ಪಂದ್ಯ ಏರ್ಪಡಿಸಿತ್ತು. ಪಂದ್ಯ ವೀಕ್ಷಿಸಲು ಕ್ರೀಡಾಂಗಣದಲ್ಲಿ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು.

ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ ಸಂಘಟನೆಯು ಸ್ಫೋಟದ ಹೊಣೆ ಹೊತ್ತುಕೊಂಡಿದೆ.